ಗೌರವಾನ್ವಿತರಿಗೆ...
RAMRAJ
ಕಾಟನ್
ಭಾರತೀಯ ಸಂಸ್ಕೃತಿ

ಸಂಚಿಕೆ 7 • ಸಂಪುಟ 12 • ಮೇ 2025 • ಬೆಲೆ ರೂ. 18/–

ವೆಣ್ಮೈ

VENMAI

ಕನ್ನಡ ಮಾಸಿಕ

ಹೆಮ್ಮೆ
ವಿಶೇಷಾಂಕ

ಸಂತೋಷದಿಂದ ಬದುಕಿ.
ಸುಂದರವಾದ ಉಡುಗೆ ಧರಿಸಿ
ನಿಮ್ಮೊಂದಿಗೆ ಉಸಿರಾಡುವ
ಲಿನೆನ್ ಬಟ್ಟೆಗಳೊಂದಿಗೆ!

LINEN PARK®

SHIRTS • TROUSERS • FABRICS

By

RAMRAJ

STORE LOCATION

Available at Ramraj Showrooms and All Leading Textile Shops | Shop Online at www.ramrajcotton.in

ಗೌರವಾನ್ವಿತರಿಗೆ...
RAMRAJ
ಕಾಟನ್
ಭಾರತೀಯ ಸಂಸ್ಕೃತಿ

ತಮಗೂ ತಮ್ಮನ್ನು ಪ್ರೀತಿಸುವವರಿಗೂ
ಹೆಮ್ಮೆ ತರುವಂತಹ ಕಾರ್ಯಗಳನ್ನು ಮಾಡಿ
ಅದ್ಭುತವಾದ ಜೀವನ ನಡೆಸಲು ದಾರಿ ತೋರಿಸುವ

ಹೆಮ್ಮೆ ವಿಶೇಷಾಂಕ

ಎನ್ನುವ ಈ ಸುಮಧುರ ಸಂಚಿಕೆಯನ್ನು ನಿಮಗೆ
ನೀಡಲು ನಾವು ಹೆಮ್ಮೆ ಪಡುತ್ತೇವೆ.

ಗೌರವಾನ್ವಿತರಿಗೆ...

ನಮಸ್ಕಾರ.

ಎಲ್ಲರೂ ಹೆಮ್ಮೆ ಪಡುವಂತಹ ಜೀವನವನ್ನು ನಡೆಸಬೇಕೆಂಬುದು ಎಲ್ಲರ ಬಯಕೆಯಾಗಿರುತ್ತದೆ. ಆದರೆ, ಯಾವುದು ಹೆಮ್ಮೆ ಎಂಬ ವಿಷಯದ ಬಗ್ಗೆ ಸ್ಪಷ್ಟತೆ ಇರಬೇಕಾದುದು ಅಗತ್ಯ. ಒಳ್ಳೆಯ ಭಾವನೆಗಳೂ, ಒಳ್ಳೆಯ ಕಾರ್ಯಗಳೂ ಹೆಮ್ಮೆಯ ಜೀವನವನ್ನು ನಮಗೆ ಕಾಣಿಕೆಯಾಗಿ ನೀಡುತ್ತವೆ. ಅದನ್ನು ಚಿಕ್ಕಂದಿನಿಂದಲೇ ಮಕ್ಕಳ ಮನಸ್ಸಿನಲ್ಲಿ ಬಿತ್ತುವುದು ಮುಖ್ಯವಾಗಿರುತ್ತದೆ. ಒಳ್ಳೆಯದೂ ಕೆಟ್ಟದೂ ಎರಡೂ ತುಂಬಿರುವ ಈ ಸಮಾಜದಲ್ಲಿ, ನಮ್ಮ ಮಕ್ಕಳು ಇಕ್ಕಟ್ಟಾದ ವಾತಾವರಣದಲ್ಲೂ ಕೂಡ ನಮ್ಮ ಮಕ್ಕಳು ಒಳ್ಳೆಯದನ್ನು ಆಯ್ಕೆ ಮಾಡಿಕೊಳ್ಳಲೂ, ಒಳ್ಳೆಯದರ ಕಡೆಗೆ ನಿಲ್ಲಲೂ ಕಲಿಸಿಕೊಡಬೇಕು.

ಒಬ್ಬ ಸಾಮಾನ್ಯ ಚಪ್ಪಲಿ ತಯಾರಿಸುವ ವ್ಯಕ್ತಿಯ ಮಗನಾಗಿ ಜನಿಸಿ, ಅಮೇರಿಕ ದೇಶದ ಅಸಾಮಾನ್ಯ ನಾಯಕನಾಗಿ, ಅಧ್ಯಕ್ಷನಾಗಿ ಬೆಳೆದವರು ಅಬ್ರಹಾಂ ಲಿಂಕನ್ ಅವರು. ಇತಿಹಾಸವೇ ಹೆಮ್ಮೆ ಪಡುವಂತಹ ಹೆಮ್ಮೆಯ ಬದುಕು ಬದುಕಿದವರು ಅವರು. ಅವರು ಅತಿ ದೊಡ್ಡ ರಾಷ್ಟ್ರನಾಯಕರಾಗಿ ಬೆಳೆದ ನಂತರ, ವಿರೋಧ ಪಕ್ಷದ ಒಬ್ಬ ವ್ಯಕ್ತಿ ಅವರಿಗೆ ಅಗೌರವ ಸಲ್ಲಿಸುವಂತೆ ನಡೆದುಕೊಂಡರು. 'ಮಾನ್ಯ ಲಿಂಕನ್ ಅವರೇ, ನನ್ನ ತಂದೆ ಯಾವಾಗಲೂ ನಿಮ್ಮ ತಂದೆಯವರ ಬಳಿಯೇ ಶೂ ಹೊಲಿಸಿಕೊಳ್ಳುತ್ತಿದ್ದರು' ಎಂದು ಅವರು ಗೇಲಿಯಾಗಿ ಹೇಳಿದರು. ಹೀಗೆ ಹೇಳುವ ಮೂಲಕ ತನ್ನನ್ನು ಅವಮಾನಿಸಲು ನೋಡುತ್ತಿರುವ ಆ ವ್ಯಕ್ತಿಯನ್ನು ನೋಡಿ ನಕ್ಕು, 'ಶ್ರಮ ಪಟ್ಟು ದುಡಿದು ಪ್ರಾಮಾಣಿಕವಾದ ಜೀವನ ನಡೆಸಿದ ನನ್ನ ತಂದೆಯನ್ನು ನೀವು ನೆನಪಿಸಿಕೊಳ್ಳುತ್ತಿರುವುದಕ್ಕಾಗಿ ಧನ್ಯವಾದಗಳು. ಅವರ ಬಳಿ ನಾನು ಕೂಡ ಚೆನ್ನಾಗಿ ಶೂ ತಯಾರಿಸುವುದು ಹೇಗೆಂಬುದನ್ನು ಕಲಿತುಕೊಂಡಿದ್ದೇನೆ. ನಿಮ್ಮ ಶೂ ಏನಾದರೂ ಹರಿದು ಹೋದರೆ ನನ್ನ ಬಳಿ ತೆಗೆದುಕೊಂಡು ಬನ್ನಿ. ತನ್ನ ಪ್ರೀತಿಯ ತಂದೆ ಹೊಲಿದುಕೊಡುತ್ತಿದ್ದಂತೆಯೇ ಸರಿಯಾಗಿ ಮತ್ತು ಚೆನ್ನಾಗಿ ನಾನೂ ಹೊಲಿದುಕೊಡುತ್ತೇನೆ' ಎಂದು ಲಿಂಕನ್ ಹೇಳಿದರು. ಲಿಂಕನ್ ಅವರ ಈ ಉತ್ತರ ಕೇಳಿ ಯಾವುದು ಹೆಮ್ಮೆಯ ಜೀವನ ಎಂಬುದನ್ನು ವಿರೋಧ ಪಕ್ಷದ ಆ ವ್ಯಕ್ತಿ ಚೆನ್ನಾಗಿ ಮನಗಂಡರು.

'ಯಾವ ಕೆಲಸವನ್ನು ಮಾಡಿದರೂ ಅದು ಅವಮಾನಕರವಾದುದಲ್ಲ. ಪ್ರಾಮಾಣಿಕತೆಯಿಂದಲೂ ಶ್ರದ್ಧೆಯಿಂದಲೂ ಮಾಡುವುದೇ ಹೆಮ್ಮೆಯ ಸಂಗತಿ' ಎನ್ನುವುದನ್ನು ಅವರು ಅರ್ಥ ಮಾಡಿಕೊಂಡರು.

ಒಂದು ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಒಬ್ಬ ವ್ಯಕ್ತಿ ಜಗತ್ತಿನ ಅತಿ ಪ್ರಬಲ ದೇಶದ ಅಧ್ಯಕ್ಷರಾಗಿ ಬೆಳೆದ ಸಾಹಸಕ್ಕಿಂತಲೂ, ಲಿಂಕನ್ ಅವರ ದೃಢತೆಯೂ, ಬಿಡುವಿಲ್ಲದ ದುಡಿಮೆಯೂ, ಸದ್ಗುಣಗಳೂ ಇತಿಹಾಸವು ಅವರನ್ನು ಹೆಮ್ಮಿಯಿಂದ ಸ್ಮರಿಸುವಂತೆ ಮಾಡಿವೆ. ತನ್ನ ತಂದೆಯ ಬಳಿಯಿಂದ ಯಾವುದನ್ನು ತಾನು ಕಲಿತುಕೊಂಡಿದ್ದೇನೆ ಎಂದು ಹೆಮ್ಮೆಯಿಂದ ಗಟ್ಟಿಯಾಗಿ ಹೇಳಿದ ಲಿಂಕನ್, ತನ್ನ ಮಗನಿಗೆ ಅವನ ಶಿಕ್ಷಕರು ಏನೇನನ್ನೆಲ್ಲ ಹೇಳಿಕೊಡಬೇಕು ಎಂಬುದನ್ನು ಅವರಿಗೆ ಒಂದು ಪತ್ರದಲ್ಲಿ ಬರೆದು ತಿಳಿಸಿದರಂತೆ. ಆ ಪತ್ರವು ನಿಜವಾಗಿಯೂ ಯಾವುದು ಹೆಮ್ಮೆಯ ಜೀವನ ಎಂಬುದನ್ನು ಅರ್ಥ ಮಾಡಿಸುತ್ತದೆ.

"ನನ್ನ ಮಗನಿಗೆ, ಪುಸ್ತಕಗಳು ಎನ್ನುವ ಅದ್ಭುತ ಜಗತ್ತಿನ ಬಾಗಿಲನ್ನು ತೆರೆದು ತೋರಿಸಿ. ಅದೇ ಸಮಯದಲ್ಲಿ ಪ್ರಕೃತಿಯ ಅಸಾಮಾನ್ಯವಾದ ಅತಿಶಯಗಳನ್ನು ಆಶ್ಚರ್ಯದಿಂದ ನೋಡುವುದನ್ನೂ ಕಲಿಸಿಕೊಡಿ. ಬಾನಿನಲ್ಲಿ ಹಾರುವ ಹಕ್ಕಿಗಳ ಸ್ವಾತಂತ್ರ್ಯವನ್ನೂ, ಜೇನು ನೊಣಗಳ ಅವಿರತ ಚಟುವಟಿಕೆಯನ್ನೂ, ಹಸುರು ತುಂಬಿದ ಪರ್ವತದ ತಪ್ಪಲಿನಲ್ಲಿ ಅರಳಿರುವ ಹೂಗಳ ಸೌಂದರ್ಯವನ್ನೂ ಆಸ್ವಾದಿಸುವುದನ್ನು ಕಲಿಸಿ ಕೊಡಿ.

ಈ ಜಗತ್ತಿನಲ್ಲಿರುವ ಎಲ್ಲಾ ಮನುಷ್ಯರೂ ಪ್ರಾಮಾಣಿಕರೇನಲ್ಲ ಎಂಬ ವಾಸ್ತವವನ್ನೂ ಅವನಿಗೆ ತಿಳಿಸಿಕೊಡಿ. ಆದರೆ ಶತ್ರುಗಳ ನಡುವೆ ಪ್ರೀತಿಯಿಂದ ಸ್ನೇಹದ ಹಸ್ತ ಚಾಚುವ ಮನುಷ್ಯರೂ ಇದ್ದಾರೆ ಎನ್ನುವ ನಂಬಿಕೆಯನ್ನು ಅವನಿಗೆ ನೀಡಿ.

ಅಸೂಯೆಯೆಂಬುದು ಅವನ ಮನಸ್ಸಿನೊಳಗೆ ಪ್ರವೇಶಿಸದಂತೆ ಎಚ್ಚರಿಕೆ ವಹಿಸಿ. ಎಲ್ಲದಕ್ಕೂ ಹೆದರಿಕೊಂಡು ಹಿಂಜರಿಯುವುದು ಹೇಡಿತನ ಎಂಬುದನ್ನು ಅವನಿಗೆ ಅರ್ಥ ಮಾಡಿಸಿ. ಎಲ್ಲಕ್ಕಿಂತ ಮುಖ್ಯವಾಗಿ ಮೋಸ ಮಾಡುವುದಕ್ಕಿಂತಲೂ ಸೋತು ಹೋಗುವುದು ಎಷ್ಟೋ ಉತ್ತಮ ಎನ್ನುವುದನ್ನು ನನ್ನ ಪ್ರೀತಿಯ ಮಗನಿಗೆ ಮನವರಿಕೆ ಮಾಡಿಕೊಡಿ. ಇತರರು 'ತಪ್ಪು' ಎಂದು ವಿಮರ್ಶೆ ಮಾಡಿದರೂ, ತನ್ನ 'ಸ್ವಚಿಂತನೆ'ಯ ಮೇಲೆ ಕದಲಿಸಲಾರದಷ್ಟು ನಂಬಿಕೆಯನ್ನು ಇಟ್ಟುಕೊಳ್ಳಬೇಕೆಂಬುದನ್ನು ತಿಳಿಸಿ.

ಮೃದುವಾದ ಮನುಷ್ಯರ ಜೊತೆ ಮೃದುವಾಗಿಯೂ, ಒರಟಾದ ವ್ಯಕ್ತಿಗಳ ಜೊತೆ ಕಠಿಣವಾಗಿಯೂ ನಡೆದುಕೊಳ್ಳುವುದು ಹೇಗೆಂಬುದನ್ನು ಅವನಿಗೆ ಕಲಿಸಿ. ಸಹ ಮನುಷ್ಯರ ಧ್ವನಿಗೆ ಅವನು ಕಿವಿಗೊಡಬೇಕು ಎಂದು ತಿಳುವಳಿಕೆ ನೀಡಿ. ಆದರೂ ಸತ್ಯ ಎನ್ನುವ ಬಟ್ಟೆಯಲ್ಲಿ ಸೋಸಿ ಒಳ್ಳೆಯದನ್ನು ಮಾತ್ರವೇ ಬೇರ್ಪಡಿಸಿ ತೆಗೆದುಕೊಳ್ಳುವುದು ಹೇಗೆಂಬುದೂ ಅವನಿಗೆ ತಿಳಿದಿರುವಂತೆ ನೋಡಿಕೊಳ್ಳಿ.

ಕಷ್ಟಕರವಾದ ಸಂದರ್ಭಗಳಲ್ಲೂ ನಗುವುದು ಹೇಗೆ ಎಂದು ಅವನಿಗೆ ಕಲಿಸಿಕೊಡಿ. ಅಗತ್ಯ ಸಂದರ್ಭದಲ್ಲಿ ಕಣ್ಣೀರು ಸುರಿಸುವುದರಲ್ಲಿ ತಪ್ಪೇನಿಲ್ಲ ಎಂಬುದನ್ನೂ ಅವನು ಅರ್ಥ ಮಾಡಿಕೊಳ್ಳುವುದು ಒಳ್ಳೆಯದು. ಕೃತಕವಾದ ಜೀವನ ವಿಧಾನವನ್ನು ನೋಡಿ ನಗುವುದಕ್ಕೂ, ಹುಸಿ ಮೆಚ್ಚುಗೆಯ ನುಡಿಗಳನ್ನು ಕೇಳಿ ಎಚ್ಚರಿಕೆಯಿಂದ ಇರುವುದಕ್ಕೂ ಅವನಿಗೆ ತರಬೇತಿ ಕೊಡಿ.

ಸಣ್ಣತನದ ವರ್ತನೆಯನ್ನು ಕಂಡರೆ ಕೂಡಲೇ ಸಿಡಿದೇಳುವ ಗುಣ ಅವನೊಳಗೆ ಹುದುಗಿರಲಿ. ಅದೇ ಸಮಯದಲ್ಲಿ ತನ್ನ ಶಕ್ತಿಯನ್ನು ದೃಢವಾಗಿ ಹೊರ ಹಾಕುವುದನ್ನೂ ತಾಳ್ಮೆಯಿಂದ ಅವನಿಗೆ ಕಲಿಸಿಕೊಡಿ" ಎಂದು ಅವರು ಆ ಪತ್ರದಲ್ಲಿ ಬರೆದಿದ್ದರಂತೆ.

ಒಬ್ಬ ತಂದೆಯಾಗಿ ತನ್ನ ಮಗ ಎಂತಹ ಹೆಮ್ಮೆಯ ಜೀವನವನ್ನು ನಡೆಸಬೇಕು ಎನ್ನುವುದನ್ನು ಬಯಸಿ, ಅದೆಲ್ಲವನ್ನೂ ಹೇಳಿಕೊಡಬೇಕು ಎಂದು ಶಿಕ್ಷಕರ ಬಳಿ ಕೇಳಿಕೊಂಡ ಈ ಪತ್ರದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಅಗತ್ಯವಾದ ಸದ್ಗುಣಗಳ ಪಟ್ಟಿಯಿದೆ.

ಮಕ್ಕಳನ್ನು ಹೆತ್ತ ತಂದೆತಾಯಿಗಳು ಯಾವುದರಲ್ಲಿ ಹೆಮ್ಮೆಯನ್ನು ಅನುಭವಿಸುತ್ತಾರೆ ಎನ್ನುವುದನ್ನು ನಮ್ಮ ಹಿರಿಯರೂ ಕೂಡ ತಿಳಿಸಿದ್ದಾರೆ. "ಮಗ ತುಂಬ ಶ್ರೀಮಂತನಾಗಿದ್ದಾನೆ ಎನ್ನುವುದು ತಾಯಿಗೆ ಮುಖ್ಯವಾದ ಸಂಗತಿ ಅಲ್ಲವೇ ಅಲ್ಲ. ಒಳ್ಳೆಯ ಪದವಿಯಲ್ಲಿದ್ದಾನೆ ಎಂಬುದೂ ದೊಡ್ಡ ವಿಷಯವಲ್ಲ. ಆದರೆ'ಒಳ್ಳೆಯ ಗುಣಗಳನ್ನು ಹೊಂದಿರುವ, ಒಳ್ಳೆಯ ಕಾರ್ಯಗಳನ್ನು ಮಾಡುವ ಅತ್ಯುತ್ತಮ ವ್ಯಕ್ತಿ ನಿಮ್ಮ ಮಗ' ಎಂದು ಇತರರು ಅವನ ತಾಯಿಯ ಬಳಿ ಹೇಳುವಾಗ, ಆ ತಾಯಿ ತನ್ನ ಮಗನನ್ನು ಹೆತ್ತಾಗ ಅನುಭವಿಸಿದ ಸಂತೋಷಕ್ಕಿಂತಲೂ ದುಪ್ಪಟ್ಟು ಸಂತೋಷವನ್ನು ಅನುಭವಿಸುತ್ತಾಳೆ" ಎಂದು ನಮ್ಮ ಹಿರಿಯರು ಹೇಳಿದ್ದಾರೆ.

ಅದೇ ರೀತಿಯಾಗಿ, ಕಠಿಣವಾಗಿ ದುಡಿದು ತನ್ನನ್ನು ಮನುಷ್ಯನನ್ನಾಗಿ ಮಾಡಿದ ತಂದೆಗೆ ಮಗನಾದವನು ತಂದು ಕೊಡುವ ಹೆಮ್ಮೆ ಯಾವುದೆಂಬುದನ್ನೂ ನಮ್ಮ ಹಿರಿಯರು ಹೇಳಿದ್ದಾರೆ: 'ಇಂತಹ ಒಬ್ಬ ಮಗನನ್ನು ಹೆರಲು ಇವನ ತಂದೆ ಎಂತಹ ಪುಣ್ಯ ಮಾಡಿದ್ದನೋ ಎಂದು ಇತರರು ಹೇಳುವ ಮಟ್ಟಿಗೆ ಸದ್ಗುಣಗಳು ತುಂಬಿದ ಜೀವನ ನಡೆಸಿ, ತಂದೆಗೆ ಹೆಮ್ಮೆ ತರಬೇಕು' ಎಂದು ಅವರು ಹೇಳಿದ್ದಾರೆ. ಒಬ್ಬ ವ್ಯಕ್ತಿ ಜೀವಿಸುವ ಜೀವನವೇ ಅವನ ಪೋಷಕರಿಗೆ ಹೆಮ್ಮೆಯನ್ನು ತರುವುದು.

ಒಬ್ಬ ವ್ಯಕ್ತಿ ತನ್ನ ಶಿಕ್ಷಣ, ಕೆಲಸ, ದುಡಿಮೆ, ವ್ಯವಹಾರ, ತನ್ನ ಸಾಮರ್ಥ್ಯ ಇತ್ಯಾದಿಗಳನ್ನು ಕುರಿತು ಹೆಮ್ಮೆ ಪಡಬಹುದು. ಇವುಗಳ ಮೂಲಕ ತಾನು ಗಳಿಸಿರುವ ಎತ್ತರವನ್ನು ಕಂಡು ಕೂಡ ಹೆಮ್ಮೆ ಪಡಬಹುದು. ಆ ಹೆಮ್ಮೆ ಅವರೊಳಗೆ ಆತ್ಮವಿಶ್ವಾಸವನ್ನು ಮೂಡಿಸುತ್ತದೆ. ಅವರಿಗೆ ಜೀವನದಲ್ಲಿ ಸಂತೃಪ್ತಿಯೂ ದೊರಕುತ್ತದೆ. ಅದೇ ಅವರನ್ನು ಇನ್ನಷ್ಟು ಸಾಧಿಸಲು ಪ್ರೇರೇಪಿಸುತ್ತದೆ.

ಈ ಹೆಮ್ಮೆಗೂ ಒಂದು ಎಲ್ಲೆ ಎಂಬುದು ಇರುತ್ತದೆ. ಆ ಗೆರೆಯನ್ನು ದಾಟಿದರೆ ಅದು ಸ್ವಪ್ರಶಂಸೆ ಆಗುತ್ತದೆ. ಆ ಗುಣ ಒಬ್ಬ ವ್ಯಕ್ತಿಯನ್ನು ತಲೆಕೆಳಗಾಗಿ ಬದಲಾಯಿಸುತ್ತದೆ. 'ನಮ್ಮಂತೆಯೇ ವಿದ್ಯಾವಂತರಾದವರು ಯಾರೂ ಇಲ್ಲ' ಎಂಬ ಭಾವ ಮೂಡುತ್ತದೆ. 'ನಾವೇ ಎಲ್ಲರಿಗಿಂತ ಸಮರ್ಥರು. ನಮಗಿಂತ ಹೆಚ್ಚು ಯಾರು ದುಡಿಯುತ್ತಾರೆ' ಎಂಬ ಅವಹೇಳನವೂ ಏಳುತ್ತದೆ. ಈ ಗುಣ ಆ ವ್ಯಕ್ತಿಯ ಬೆಳವಣಿಗೆಗೆ ತಡೆ ಹಾಕುತ್ತದೆ. ಆದುದರಿಂದಲೇ, 'ಹೆಮ್ಮೆ'ಯ ವಿಷಯದಲ್ಲಿ ಎಚ್ಚರಿಕೆ-ಯೂ ಅಗತ್ಯ.

ಶಿಕ್ಷಣ, ಕೆಲಸ, ಬೆಳವಣಿಗೆ ಇತ್ಯಾದಿ ಎಲ್ಲವುಗಳಿಗೂ ನಮ್ಮ ಮಕ್ಕಳನ್ನು ನಾವು ಸಿದ್ಧಪಡಿಸುತ್ತೇವೆ. ಅದೇ ಸಮಯದಲ್ಲಿ ಅವರು ಮನೆಗೂ ದೇಶಕ್ಕೂ ಹೆಮ್ಮೆ ತರುವಂತಹ ತುಂಬುಜೀವನವನ್ನು ನಡೆಸಬೇಕಾದುದೂ ಅಗತ್ಯ. ಮುಂದಿನ ತಲೆಮಾರಿನವರಿಗೆ ಸದ್ಗುಣಗಳನ್ನೂ ಒಳ್ಳೆಯ ಕಾರ್ಯಗಳನ್ನೂ ಮಾಡುವುದು ಹೇಗೆಂದು ಹೇಳಿಕೊಡಬೇಕು. ಈ ಬಿಡುವಿನ ದಿನಗಳಲ್ಲಿ ಮಕ್ಕಳೊಂದಿಗೆ ಉತ್ಸಾಹದಿಂದ ಸಮಯ ಕಳೆಯೋಣ. ಅದಕ್ಕೆ ಈ ತಿಂಗಳು 'ಬಿಳುಪು ಭಾವನೆ'ಗಳು ಸಂಚಿಕೆ-ಯು ನಿಮಗೆ ನೆರವಾಗುತ್ತದೆ.

The Culturepreneur

ಗುರುಕೃಪೆ
ಬಾಳ್ಗೆ ಭೂಮಂಡಲ –ಬಾಳ್ಗೆ
ಸಮೃದ್ಧಿಯೊಂದಿಗೆ

ಕೆ.ಆರ್. ನಾಗರಾಜನ್
ಸಂಸ್ಥಾಪಕರು – ರಾಮ್‌ರಾಜ್ ಕಾಟನ್

ದೇವರು ಪ್ರತಿದಿನವೂ ಸವಾರಿ ಮಾಡುವ ರಥವನ್ನು ಎಳೆದೊಯ್ಯುವ ಒಂದು ಕುದುರೆ ಇತ್ತು. ಆ ಕುದುರೆಯು ನೋಡಲು ಭವ್ಯವೂ ಸುಂದರವೂ ಆಗಿತ್ತು. ದೇವರು ಕುಳಿತುಕೊಳ್ಳುವ ರಥವನ್ನು ಎಳೆಯುವ ಕುದುರೆಯಾಗಿದ್ದುದರಿಂದ ಅದಕ್ಕೆ ಹೆಚ್ಚಿನ ಗೌರವವೂ ದೊರೆಯೊತ್ತಿತ್ತು. ಆದಾಗ್ಯೂ, ಆ ಕುದುರೆಗೆ ಒಂದು ಆಸೆಯಿತ್ತು. ತಾನು ಇನ್ನೂ ಹೆಚ್ಚು ಸುಂದರವಾಗಿ ಕಾಣಬೇಕೆಂಬ ಹಂಬಲ ಅದಕ್ಕೆ. 'ತನ್ನಷ್ಟು ಸುಂದರವಾದ ಬೇರೊಂದು ಪ್ರಾಣಿ ಈ ಜಗತ್ತಿನಲ್ಲಿ ಬೇರಾವುದೂ ಇಲ್ಲ' ಎಂಬ ಹೆಮ್ಮೆಯ ಸ್ಥಾನಮಾನವನ್ನು ಪಡೆಯಬೇಕೆಂದು ಅದು ಕನಸು ಕಾಣುತ್ತಿತ್ತು.

ಒಂದು ದಿನ ಅದು ಹಿಂಜರಿಯುತ್ತಾ ದೇವರ ಬಳಿ ತನ್ನ ಆಸೆಯನ್ನು ಹೇಳಿಕೊಂಡಿತು. 'ದೇವರೇ! ನೀನು ನನಗೆ ಸೌಂದರ್ಯ ಮತ್ತು ಸದ್ಗುಣಗಳನ್ನು ನೀಡಿದ್ದೀಯ. ಆದರೆ ನಾನು ಇನ್ನೂ ಸುಂದರವಾದ ರೂಪವನ್ನು ಹೊಂದಲು ಬಯಸುತ್ತೇನೆ. ನೀನು ಹಾಗೆ ಮಾಡಿದರೆ ನನ್ನ ಜೀವನವಿಡೀ ನಾನು ನಿನಗೆ ಕೃತಜ್ಞನಾಗಿರುತ್ತೇನೆ' ಎಂದು ಕುದುರೆಯು ದೇವರ ಬಳಿ ಕೇಳಿತು. ದೇವರು ತಕ್ಷಣ ಅದಕ್ಕೆ ತನ್ನ ಸಮ್ಮತಿಯನ್ನು ಸೂಚಿಸಿ 'ನಿನಗೆ ಹೇಗಿರಬೇಕೋ ಹಾಗೆ ಹೇಳು! ನಾನು ನಿನಗೆ ಆ ವರವನ್ನು ಕೊಡುತ್ತೇನೆ' ಎಂದು ಹೇಳಿದ.

'ನನ್ನ ದೇಹವು ಸಮವಾಗಿ ಇಲ್ಲದುದರಿಂದ ನನ್ನ ರೂಪವು ಹಾಳಾಗುತ್ತಿದೆ. ನನ್ನ ಕುತ್ತಿಗೆಯನ್ನು ಸ್ವಲ್ಪ ಉದ್ದವಾಗಿಸಿ, ಬೆನ್ನನ್ನು ಇನ್ನೂ ಸ್ವಲ್ಪ ದೊಡ್ಡದಾಗಿಸಿದರೆನನ್ನ ದೇಹದ ಮೇಲ್ಭಾಗ ನೋಡಲು ಇನ್ನೂ ಚೆನ್ನಾಗಿರುತ್ತದೆ. ಹಾಗೆಯೇ ಕಾಲುಗಳ ಉದ್ದ ಸ್ವಲ್ಪ ಕಡಿಮೆಯಾಗಿಯೂ, ಅವು ದಪ್ಪಗೂ ಇದೆ. ಕಾಲುಗಳನ್ನು ಇನ್ನಷ್ಟು ಉದ್ದವಾಗಿಸಿ, ತೆಳ್ಳಗಾಗಿಸಿದರೆ ನನ್ನ ದೇಹದ ಕೆಳ ಭಾಗವೂ ಚೆನ್ನಾಗಿರುತ್ತದೆ' ಎಂದು ಕುದುರೆ ಹೇಳಿತು.

'ಸರಿ. ಹಾಗಾದರೆ ನೀನು ಬಯಸಿದಂತೆಯೇ ಆಗಲಿ' ಎಂದು ದೇವರು ಹೇಳಿದ. ಕೂಡಲೇ ಕುದುರೆ ಒಂಟೆಯಂತೆ ಬದಲಾಯಿತು. ತನ್ನ ಆಕಾರವನ್ನು ನೋಡಿ ಕುದುರೆ ಆಘಾತಕ್ಕೊಳಗಾಯಿತು. 'ದೇವರೇ! ಇದೇನು? ನಾನು ಸುಂದರವಾಗುವಂತೆ ವರವನ್ನು ಕೇಳಿದರೆ, ನೀನು ಹೀಗೆ ಮಾಡಿ ಬಿಟ್ಟೆ?' ಎಂದು ಅದು ಗಾಬರಿಯಿಂದ ದೇವರನ್ನು ಪ್ರಶ್ನಿಸಿತು.

ದೇವರು ಹೇಳಿದ: 'ನೀನು ಕೇಳಿದ್ದನ್ನೆಲ್ಲಾ ಮಾಡಿದ್ದೇನೆ. ಕತ್ತು ಉದ್ದವಾಗಿದೆ, ಕಾಲುಗಳು ತೆಳ್ಳಗೂ ನೀಳವಾಗಿಯೂ ಆಗಿವೆ. ಬೆನ್ನು ದೊಡ್ಡದಾಗಿದೆ. ಹೀಗಾಗಿ ನೀನು ಒಂಟೆಯಾಗಿದ್ದೀಯಾ!'

'ಆದರೆ ನಾನು ಒಂಟೆಯಾಗಲು ಬಯಸುವುದಿಲ್ಲ. ನಾನು ಕುದು–ರೆಯಾಗಿದ್ದಾಗ ಎಲ್ಲರೂ ನನ್ನನ್ನು ಇಷ್ಟಪಟ್ಟರು. ನನ್ನ ಹಳೆಯ ರೂಪಕ್ಕೇ ನನ್ನನ್ನು ಬದಲಿಸಿಬಿಡು' ಎಂದು ಕುದುರೆ ಮನವಿ ಮಾಡಿಕೊಂಡಿತು.

ಮತ್ತೆ ಅದನ್ನು ಕುದುರೆಯಾಗಿ ಪರಿವರ್ತಿಸಿದ ದೇವರು, 'ಕುದುರೆಯಾಗಿರುವುದಕ್ಕಾಗಿ ನೀನು ಹೆಮ್ಮೆ ಪಡಬೇಕು. ಯಾರೂ ಇತರರಂತೆ ಆಗಲು ಹಾತೊರೆಯಬಾರದು. ಪ್ರತಿಯೊಬ್ಬರಿಗೂ ಅವರವರದೇ ಆದ ವಿಶಿಷ್ಟವಾದ ಗುಣವಿದೆ. ನಿನ್ನ ವೇಗ ಮತ್ತು ಗಾಂಭೀರ್ಯ ಒಂಟೆಗಿಲ್ಲ, ಸರಿ... ಆದರೆ ನೀನು ಮರುಭೂಮಿಯಲ್ಲಿ ಬದುಕಲು ಸಾಧ್ಯವಿಲ್ಲ' ಎಂದು ಹೇಳಿದ.

ಒಬ್ಬ ವ್ಯಕ್ತಿಯು ತನ್ನ ಬಗೆಗೆ ಸ್ವಾಭಿಮಾನವನ್ನು ಹೊಂದಿದ್ದಾಗ ಮಾತ್ರ ಅವನಲ್ಲಿ ಹೆಮ್ಮೆ ಮತ್ತು ಆತ್ಮವಿಶ್ವಾಸ ಮೂಡುತ್ತದೆ. ಆಗ ಆತ ತನ್ನ ಕೌಶಲ್ಯ ಮತ್ತು ಸಾಧನೆಗಳ ಬಗ್ಗೆ ಹೆಮ್ಮೆಪಡುತ್ತಾನೆ.

ಪ್ರತಿಯೊಬ್ಬರೂ ತಮ್ಮ ಬಗ್ಗೆ ಹೆಮ್ಮೆ ಪಡಲು ಏನು ಮಾಡಬೇಕು?

● ತನ್ನನ್ನು ಇತರರೊಂದಿಗೆ ಹೋಲಿಸಿಕೊಂಡು 'ನನ್ನ ಬಳಿ ಅವರಲ್ಲಿರುವಂತೆ ಅದೆಲ್ಲ ಇಲ್ಲ' ಎಂದುಕೊಳ್ಳುವುದೇ ನಕಾರಾತ್ಮಕ ಚಿಂತನೆ. ಬದಲಾಗಿ, ನಿಮ್ಮ ಬಳಿ ಏನಿದೆ ಎಂಬುದರ ಪಟ್ಟಿಯನ್ನು

ಮಾಡಿ ಮತ್ತು ಅದಕ್ಕಾಗಿ ನೀವು ಕೃತಜ್ಞರಾಗಿರಿ. ಈ ರೀತಿಯಲ್ಲಿ ನೀವು ಹೋಲಿಕೆ ಮಾಡಿಕೊಳ್ಳುವುದನ್ನು ಬದಲಾಯಿಸಿಕೊಳ್ಳುವುದರಿಂದ ಹಲವು ಪ್ರಯೋಜನಗಳಿವೆ. ಉದಾಹರಣೆಗೆ, 'ನನಗೆ ಸಿಕ್ಕಿರುವಂತಹ ಸ್ನೇಹಿತರು ಈ ಜಗತ್ತಿನಲ್ಲಿ ಬೇರ್‍ಯಾರಿಗೂ ಇಲ್ಲ' ಎಂದು ಹೆಮ್ಮೆ ಪಡಬಹುದು. 'ನನ್ನಷ್ಟು ಆರೋಗ್ಯವಂತವಾಗಿ ದೇಹವನ್ನು ನೋಡಿಕೊಳ್ಳುವವರು ಕಡಿಮೆ' ಎಂದು ಖುಷಿ ಪಡಬಹುದು. ಇಂತಹ ಯೋಚನೆಗಳು ಸಕಾರಾತ್ಮಕ ಚಿಂತನೆಯನ್ನು ಸೃಷ್ಟಿಸುತ್ತವೆ.

● ನಕಾರಾತ್ಮಕ ಆಲೋಚನೆಗಳು ಉದ್ಭವಿಸಿದಾಗ, ಅವುಗಳಿಂದ ಮನಸ್ಸನ್ನು ಬಲವಂತವಾಗಿ ಬೇರೆ ಕಡೆಗೆ ತಿರುಗಿಸಿ. ಅಂತಹ ಚಿಂತನೆಗಳನ್ನು ಹುಟ್ಟು ಹಾಕುವ ಗೊಂದಲಮಯ ವಾತಾವರಣದಿಂದ ದೂರ ಇರಿ. ಒಳ್ಳೆಯ ಸ್ನೇಹಿತರೊಂದಿಗೆ ಸಮಯ ಕಳೆಯಿರಿ. ಸಂಗೀತವನ್ನು ಆಲಿಸಿ. ಟಿವಿ ಮತ್ತು ಯೂಟ್ಯೂಬ್‌ಗಳಲ್ಲಿ ಹಾಸ್ಯ ಕಾರ್ಯಕ್ರಮಗಳನ್ನು ವೀಕ್ಷಿಸಬಹುದು. ನೈಸರ್ಗಿಕ ಪರಿಸರದಲ್ಲಿ ವಾಕಿಂಗ್ ಮಾಡಿ. ಇವೆಲ್ಲವೂ ಮನಸ್ಸನ್ನು ಧನಾತ್ಮಕವಾಗಿ ಬದಲಾಯಿಸುವ ಶಕ್ತಿಯನ್ನು ಹೊಂದಿವೆ. ನಕಾರಾತ್ಮಕ ಆಲೋಚನೆಯನ್ನು ಸಕಾರಾತ್ಮಕ ಚಿಂತನೆಯಾಗಿ ಪರಿವರ್ತಿಸಿ. 'ನನಗೆ ಕೆಲಸ ಸಿಗುತ್ತಿಲ್ಲ' ಎಂದು ಚಿಂತಿಸುವ ಬದಲು, 'ಉದ್ಯೋಗ ಪಡೆಯಲು ನಾನೇನು ಮಾಡಬೇಕು?' ಎಂದು ಯೋಚಿಸಿ, ಅದಕ್ಕೆ ತಕ್ಕಂತೆ ನಡೆದುಕೊಳ್ಳಿ.

● ನಕಾರಾತ್ಮಕವಾಗಿ ಮಾತನಾಡುವ ಮತ್ತು ಟೀಕೆಯ ಹೆಸರಿನಲ್ಲಿ ಜನರನ್ನು ನೋಯಿಸುವ ಜನರಿಂದ ದೂರವಿರಿ. ಸಕಾರಾತ್ಮಕ ಜನರು ನಿಮ್ಮನ್ನು ಸುತ್ತುವರೆದಿರುವಂತೆ ನೋಡಿಕೊಳ್ಳಿ. ಒಂದು ವೇಳೆ ನಿಮ್ಮ ಮೇಲಧಿಕಾರಿ ಅಥವಾ ನಿಮ್ಮ ಪ್ರಮುಖ ಸಂಬಂಧಿ ಹೀಗಿದ್ದರೆ ಅವರಿಂದ ದೂರವಿರಲು ನಿಮ್ಮಿಂದ ಸಾಧ್ಯವಾಗದೇ ಹೋಗಬಹುದು. ಆದರೆ ಅವರು ಏನನ್ನೇ ನಕಾರಾತ್ಮಕವಾಗಿ ಹೇಳಿದರೂ, ಆಮೇಲೆ ನೀವು ಕನ್ನಡಿಯ ಮುಂದೆ ಹೋಗಿ ನಿಂತುಕೊಂಡು, 'ನಾನು ಅವರು ಹೇಳಿದಂತೆ ಖಂಡಿತವಾಗಿಯೂ ಇಲ್ಲ. ನನ್ನ ಸಾಮರ್ಥ್ಯ ಏನೆಂದು ನನಗೆ ಗೊತ್ತು' ಎಂದು ನಿಮಗೆ ನೀವೇ ದೃಢವಾಗಿ ಹೇಳಿಕೊಳ್ಳಿ. ಹೀಗೆ ಮಾಡುವ ಮೂಲಕ ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಿ.

● ನಮ್ಮ ಕಣ್ಣುಗಳಿಗೆ ಯಾವಾಗಲೂ ನಮ್ಮಲ್ಲಿರುವ ನ್ಯೂನತೆಗಳೇ ಕಾಣಿಸುತ್ತವೆ. 'ಬೇರೆಯವರೆಲ್ಲರೂ ಯಾವಾಗಲೂ ಸಂತೋಷವಾಗಿರುತ್ತಾರೆ. ಚೆನ್ನಾಗಿ ಮತ್ತು ಆರಾಮದಾಯಕವಾಗಿ ಕೆಲಸ ಮಾಡುತ್ತಾರೆ. ನನಗೆ ಮಾತ್ರ ಇಷ್ಟೆಲ್ಲಾ ಸಮಸ್ಯೆಗಳು ಮತ್ತು ಬಿಕ್ಕಟ್ಟುಗಳಿವೆ' ಎಂದು ಕೆಲವರು ಯಾವಾಗಲೂ ತಮ್ಮ ಬಗ್ಗೆ ಚಿಂತಿಸುತ್ತಾರೆ. ಈ ಕಲ್ಪನೆ ತಪ್ಪು. ನ್ಯೂನತೆಗಳು ಅಥವಾ ಸಮಸ್ಯೆಗಳಿಲ್ಲದೆ ಯಾರೂ ಇಲ್ಲ. ಕಚೇರಿಯಲ್ಲಿ ನಾವು ನೋಡುವ ಸಹೋದ್ಯೋಗಿ ತನ್ನ ಸಮಸ್ಯೆಗಳ ಬಗ್ಗೆ ನಮ್ಮೊಂದಿಗೆ ಮಾತನಾಡುವುದಿಲ್ಲ. ಅವರು ನಮಗೆ ಅವರ ಸಂತೋಷವನ್ನು ಮಾತ್ರ ತೋರಿಸುತ್ತಾರೆ. ಹೀಗಾಗಿ ನಾವು ನಮ್ಮ ಕೊರತೆಗಳ ಬಗ್ಗೆ ಅಥವಾ ನ್ಯೂನತೆಗಳ ಬಗ್ಗೆ ಚಿಂತಿಸುವುದರಲ್ಲಿ ಅರ್ಥವಿಲ್ಲ. ಅವುಗಳನ್ನು ಸರಿಪಡಿಸಲು ಪರಿಹಾರಗಳನ್ನು ಕಂಡುಹಿಡಿಯುವುದು ಉತ್ತಮ.

● ಯಾರಾದರೂ ಆರೋಗ್ಯಕರವಾದ ವಿಮರ್ಶೆಗಳನ್ನು ಮಾಡಿದರೆ ಅದನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ. ಆದರೆ ಅದು ನಿಮಗೆ ಮುಜುಗರ ಉಂಟು ಮಾಡುವುದಾಗಲೀ, ಅವಮಾನ ಮಾಡುವಂತೆಯಾಗಲೀ ಇರಬಾರದು. ಆರೋಗ್ಯಕರ ಟೀಕೆಗಳನ್ನು ಧನಾತ್ಮಕವಾಗಿ ತೆಗೆದುಕೊಂಡು ನಮ್ಮನ್ನು ನಾವು ಸುಧಾರಿಸಿಕೊಳ್ಳುವುದಕ್ಕಾಗಿ ನಮ್ಮ ಬಗ್ಗೆ ನಾವು ಹೆಮ್ಮೆಪಡಬೇಕು. ಟೀಕೆಗಳಿಂದ ಮನ ನೊಂದುಕೊಳ್ಳಬೇಕಾದ ಅವಶ್ಯಕತೆಯಿಲ್ಲ. ಆ ವಿಮರ್ಶೆಯು ಚಿಂತನಶೀಲವಾಗಿ ಬಂದರೆ, ಅದಕ್ಕೆ ಧನ್ಯವಾದಗಳನ್ನು ತಿಳಿಸಿ. ಒಂದು ಅಥವಾ ಎರಡು ದಿನ ಆ ಟೀಕೆಯನ್ನು ಕುರಿತು ಧ್ಯಾನಿಸಿ ಮತ್ತು ನಿಮ್ಮನ್ನು ಬದಲಾಯಿಸಿಕೊಳ್ಳುವುದು ಹೇಗೆ ಎಂದು ಯೋಚಿಸಿ, ಆ ನಿಟ್ಟಿನಲ್ಲಿ ಪ್ರಯತ್ನಿಸಿ. ವಿದ್ಯಾರ್ಥಿಯ ಉತ್ತರ ಪತ್ರಿಕೆ ಸರಿಪಡಿಸಿ ಅಂಕ ಕೊಡುವ ಶಿಕ್ಷಕರು ಮುಂದಿನ ಬಾರಿ ಉತ್ತಮ ಅಂಕ ಗಳಿಸಬೇಕು ಎಂಬ ಕಾರಣಕ್ಕಾಗಿಯೇ ಅದನ್ನು ಮೌಲ್ಯಮಾಪನ ಮಾಡಿ ತಿದ್ದುತ್ತಾರೆ. ಟೀಕೆಯನ್ನು ಕೂಡ ಹೀಗೆಯೇ ತೆಗೆದುಕೊಳ್ಳಿ.

● ಪ್ರಾಮಾಣಿಕ ವಿಮರ್ಶೆಗಳಿಗೆ ಯಾವಾಗಲೂ ಸ್ವಾಗತವಿರಲಿ. ಆದರೆ ಟೀಕೆಯ ಹೆಸರಿನಲ್ಲಿ ನಿಮ್ಮನ್ನು ನೋಯಿಸುವ, ಅವಮಾನಿಸುವ ಅಥವಾ ಅಪಹಾಸ್ಯ ಮಾಡುವ ಹಕ್ಕು ಯಾರಿಗೂ ಇಲ್ಲ. ಅವರು ನಿಜವಾಗಿಯೂ ನಿಮ್ಮ ಆತ್ಮವಿಶ್ವಾಸವನ್ನು ನಾಶ ಮಾಡಲು ಬಯಸುತ್ತಾರೆ. ಅದು ಟೀಕೆಯಲ್ಲ. ಅವರು ನಿಮ್ಮ ಒಳಿತಿಗಾಗಿ ಮಾತನಾಡುತ್ತಿಲ್ಲ. ಅವರು ತಮ್ಮ ಅಸಮಾಧಾನವನ್ನು ಈ ಮೂಲಕ ವ್ಯಕ್ತಪಡಿಸುತ್ತಿದ್ದಾರೆ ಎಂದು ಅರಿತುಕೊಂಡು ಅಲ್ಲಿಂದ ಹೊರ ನಡೆಯಿರಿ. ●

ಕಥಾ ಸಮಯ!

ಯುವಕನೊಬ್ಬ ಸೂಪರ್ ಮಾರ್ಕೆಟ್‌ನಲ್ಲಿ ಶಾಪಿಂಗ್ ಮಾಡುತ್ತಿದ್ದ. ಅವನು ವಸ್ತುಗಳನ್ನು ತೆಗೆದುಕೊಳ್ಳಲು ಯಾವ ಸಾಲಿನ ಕಡೆಗೆ ಹೋದರೂ, ಅಲ್ಲಿಗೆ ಅವನ ಹಿಂದೆಯೇ ಒಬ್ಬ ಯುವತಿಯೂ ಬರುತ್ತಿದ್ದಳು. ಅವಳು ಅವನನ್ನು ಪದೇಪದೇಓರೆಗಣ್ಣಿನಿಂದ ನೋಡುತ್ತಿದ್ದಳು. ಸ್ವಲ್ಪ ಸಮಯದ ನಂತರ ಯುವಕನಿಗೆ ಆಕೆ ಏಕೆ ಹಾಗೆ ತನ್ನ ಹಿಂದೆ ಹಿಂದೆಯೇ ಬರುತ್ತಿದ್ದಾಳೆ ಎಂಬುದು ಅರ್ಥವಾಯಿತು.

ಆಕೆಗೆ ಸುಮಾರು 35 ವರ್ಷಗಳಿರಬಹುದು. ಆದರೆ ಅವಳ ವಯಸ್ಸು ಎಷ್ಟೆಂದು ಕಾಣಿಸದಷ್ಟು ತುಂಬಾ ಸುಂದರವಾಗಿ ಕಾಣುತ್ತಿದ್ದಳು. ಯುವಕಆಕೆಯನ್ನು ನೋಡಿ ಮುಗುಳ್ನಕ್ಕ. ಅವಳೂ ಪ್ರತಿಯಾಗಿ ಅವನ ಕಡೆಗೆ ಒಂದು ನಗೆ ಬೀರಿದಳು. ಅವನು ವಿವರಿಸಲಾಗದ ರೋಮಾಂಚನವನ್ನು ಅನುಭವಿಸಿದ. ಕೂದಲನ್ನು ಬೆರಳುಗಳಿಂದ ಕೆದರಿಕೊಂಡ. ಕರ್ಚೀಫ್ ತೆಗೆದು ಮುಖವನ್ನು ಗಟ್ಟಿಯಾಗಿ ಒರೆಸಿಕೊಂಡ. ಹೋಗಿ ಹೋಗಿ ಇಂದೇಕೊಳೆಯಾದ ಹಳೆಯ ಜೀನ್ಸ್ ತೊಟ್ಟಿದ್ದಕ್ಕೆ ವಿಷಾದಿಸಿಕೊಂಡ. ಆ ಯುವತಿ ಅವನನ್ನು ಆಗಾಗಓರೆಗಣ್ಣಿನಿಂದ ನೋಡುವುದನ್ನು ನಿಲ್ಲಿಸಲಿಲ್ಲ.

ಶಾಪಿಂಗ್ ಮುಗಿಸಿ ಬಿಲ್ ಪಾವತಿಸುವ ಸಮಯ ಬಂತು. ಸರತಿ ಸಾಲಿನಲ್ಲಿ ಬಂದು ನಿಂತುಕೊಂಡ. ಆ ಯುವತಿ ಅವಸರದಿಂದ ಅವನ ಮುಂದೆ ಬಂದು ನಿಂತಳು. ಅವನತ್ತ ತಿರುಗಿ, "ನಾನು ನಿನ್ನನ್ನು ಆಗಾಗ ನೋಡಿದ್ದರಿಂದ ನನ್ನ ಬಗ್ಗೆ ನೀನು ತಪ್ಪು ತಿಳಿದುಕೊಂಡಿರಬಹುದು! ನನಗೆ ಒಬ್ಬ ಮಗನಿದ್ದ. ಅವನು ನೋಡಲು ಅಚ್ಚ ಅಸಲು ನಿನ್ನಂತೆಯೇ ಕಾಣುತ್ತಿದ್ದ. ಆದರೆ ನೀನು ಅವನಿಗಿಂತ ಇನ್ನೂ ಬೆಳ್ಳಗೆ ಮತ್ತು ಸುಂದರವಾಗಿದ್ದೀಯ. ಅವನು ಕಳೆದ ತಿಂಗಳು ಅಪಘಾತದಲ್ಲಿ ಇದ್ದಕ್ಕಿದ್ದಂತೆ ತೀರಿ ಹೋದ" ಎಂದು ತನ್ನ ಕಣ್ಣುಗಳನ್ನು ಒರೆಸಿಕೊಂಡಳು.

ತರುಣನೊಳಗೆ ಮೂಡಿದ್ದ ಭಾವನೆಗಳೆಲ್ಲ ದೂರವಾದವು! “ಕ್ಷಮಿಸಿ... ನಾನೇನೂ ತಪ್ಪಾಗಿ ಭಾವಿಸಲಿಲ್ಲ, ಬಿಡಿ’ ಎಂದ ಪಶ್ಚಾತ್ತಾಪದ ಧ್ವನಿಯಲ್ಲಿ.

"ನೀವು ಈ ಅಮ್ಮನಿಗೆ ಒಂದು ಉಪಕಾರ ಮಾಡಬೇಕು. ನಾನು ಹೊರಡುವಾಗ ‘ಗುಡ್ ಬೈ ಮಮ್ಮಿ’ ಎಂದು ಹೇಳಿ. ನಿಮ್ಮ ಧ್ವನಿ ಕೂಡ ನನ್ನ ಮಗನ ಧ್ವನಿಯಂತೆಯೇ ಇದೆ!" ಎಂದಳು ಆ ಮಹಿಳೆ. ಅವನು ಹಾಗೆಯೇ ಮಾಡಿದ. ಆಕೆ ಕಣ್ಣುಗಳನ್ನು ಒರೆಸಿಕೊಂಡು ಮುಂದೆ ಸಾಗಿದಳು.

ಬಿಲ್ಲಿಂಗ್ ಮಾಡುತ್ತಿದ್ದ ಅಂಗಡಿಯ ಹುಡುಗ ಇವನ ಕೈಗೆ ಬಿಲ್ ಕೊಟ್ಟು, ‘ಐದು ಸಾವಿರ ರೂಪಾಯಿ ಕೊಡಿ’ ಎಂದ. ಯುವಕ ‘ನಾನು ಕೊಂಡಿರುವ ವಸ್ತುಗಳಿಗೆ ಸಾವಿರ ರೂಪಾಯಿಯೂ ಆಗುವುದಿಲ್ಲವಲ್ಲ!’ ಎಂದು ಸಂದೇಹದಿಂದ ಕೇಳಿದ. ‘ನಿಮ್ಮ ಅಮ್ಮ ಕೊಂಡದ್ದಕ್ಕೂ ಸೇರಿಸಿ ನೀವೇ ಹಣ ಕೊಡುತ್ತೀರಿ ಎಂದು ಅವರು ಹೇಳಿದ್ದಾರೆ’ ಎಂದ ಆ ಹುಡುಗ. ಆಗಲೇ ಅವನಿಗೆ ವಾಸ್ತವ ಏನೆಂಬುದು ಅರಿವಿಗೆ ಬಂದದ್ದು.

ಭಾವುಕವಾಗಿ ಮಾತನಾಡಿ ಮೋಸ ಮಾಡುವವರ ಬಗ್ಗೆ ಎಚ್ಚರದಿಂದಿರಿ!

ಸೈನಿಕರಿಗೆ ಅಗತ್ಯವಾಗುವ ಮಿಲಿಟರಿ ಉಪಕರಣಗಳು ಮತ್ತು ಶಸ್ತ್ರಾಸ್ತ್ರಗಳನ್ನು ಉತ್ಪಾದಿಸುವ ಒಂದು ಕಾರ್ಖಾನೆ ಇತ್ತು. ಸುತ್ತಲೂ ವಿದ್ಯುತ್ ಬೇಲಿಗಳಿಂದ ಆವೃತವಾಗಿದ್ದ ಮುಖ್ಯ ಸ್ಥಳ ಅದು. ಪ್ರವೇಶದ್ವಾರದಲ್ಲಿ ಯಾವಾಗಲೂ ಹೆಚ್ಚಿನ ಕಾವಲು ಇರುತ್ತಿತ್ತು. ಒಂದು ದಿನ ಮಧ್ಯರಾತ್ರಿಯಲ್ಲಿ ಯಾವುದೋ ಕೆಲಸದ ಮೇಲೆ ಅಲ್ಲಿಗೆ ಬಂದ ಹಿರಿಯ ಅಧಿಕಾರಿಯೊಬ್ಬರು ಬಾಗಿಲಲ್ಲಿ ಮಲಗಿದ್ದ ಅನೇಕ ಸೈನಿಕರನ್ನು ಕಂಡು ತುಂಬ ಕೋಪಗೊಂಡರು. ‘ಮನುಷ್ಯರನ್ನು ನಂಬಿ ಪ್ರಯೋಜನವಿಲ್ಲ. ಇನ್ನು ಮುಂದೆ ಭದ್ರತಾ ಕಾರ್ಯಕ್ಕೆ ತರಬೇತಿ ಪಡೆದಿರುವ ನಾಯಿಗಳನ್ನು ಬಳಸಿ’ ಎಂದು ಆದೇಶಿಸಿದರು.

ಉತ್ತಮ ಗುಣಮಟ್ಟದ ನಾಯಿಗಳನ್ನು ತಕ್ಷಣವೇ ಖರೀದಿಸಲಾಯಿತು. ಅವುಗಳಿಗೆ ಅಲ್ಲಿ ಹೇಗೆ ಕಾವಲು ಕಾಯಬೇಕು ಎಂಬ ವಿಷಯದ ಬಗ್ಗೆ ಹಲವು ದಿನಗಳ ಕಾಲ ತರಬೇತಿ ನೀಡಲಾಯಿತು. ಕಾರ್ಖಾನೆ ಆವರಣದ ಎಲ್ಲಾ ಭದ್ರತಾ ಕಾರ್ಯಗಳನ್ನೂ ಅವು ಹಗಲಿರುಳೂ ಸಮರ್ಥವಾಗಿ ನಿರ್ವಹಿಸುತ್ತಿದ್ದವು.

ಒಂದು ಚರ್ಚ್‌ನಲ್ಲಿ ಭಾನುವಾರದ ಉಪದೇಶ ಮಾಡಲು ಹೊಸದಾಗಿ ಬಂದಿದ್ದ ಒಬ್ಬ ಪಾದ್ರಿ, ಅಲ್ಲಿಗೆ ಪ್ರಾರ್ಥನೆ ಮಾಡಲು ಬರುವವರಿಗೆ ದೊಡ್ಡ ತಲೆನೋವಾಗಿದ್ದರು. ಗಂಟೆಗಟ್ಟಲೆ ಉಪದೇಶ ನೀಡಿ ಎಲ್ಲರಿಗೂ ಬೇಸರ ಉಂಟು ಮಾಡುತ್ತಿದ್ದರು. ಕೆಲವರು ಇದನ್ನು ಸೂಕ್ಷ್ಮವಾಗಿ ಅವರ ಗಮನಕ್ಕೂ ತಂದರು.

ಮುಂದಿನ ವಾರ ಪಾದ್ರಿ ಒಬ್ಬ ಹೊಸ ಸಹಾಯಕರನ್ನು ನೇಮಕ ಮಾಡಿಕೊಂಡಿದ್ದರು. ಅವನ ಕೈಯಲ್ಲಿ ಒಂದು ಹುಂಡಿ ಇತ್ತು. 'ನಾವು ಚರ್ಚ್‌ನ ನವೀಕರಣಕ್ಕಾಗಿ ಹಣವನ್ನು ಸಂಗ್ರಹಿಸುತ್ತಿದ್ದೇವೆ. ನೀವೆಲ್ಲರೂ ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಕೊಡುಗೆ ನೀಡಿದರೆ ನಾನು 5 ನಿಮಿಷ ಮಾತ್ರ ಮಾತನಾಡುತ್ತೇನೆ; ಐನೂರು ರೂಪಾಯಿಯಾದರೆ ಅರ್ಧ ಗಂಟೆ ಮಾತನಾಡುತ್ತೇನೆ. ನೂರು ರೂಪಾಯಿಗಿಂತ ಕಡಿಮೆಯಿದ್ದರೆ ಒಂದು ಗಂಟೆಗೂ ಹೆಚ್ಚು ಕಾಲ ಬೋಧಿಸುತ್ತೇನೆ...' ಎಂದು ಪಾದ್ರಿ ಘೋಷಿಸಿದರು.



ಸಹಾಯಕನನ್ನು ಹುಂಡಿ ಹಿಡಿದುಕೊಂಡು ಜನರಿದ್ದ ಕಡೆಗೆ ಕಳುಹಿಸಿದರು. ಜನ ಹೆದರಿ ಹುಂಡಿಗೆ ಹಣ ಹಾಕಿದರು. ಎಣಿಸಿ ನೋಡಿದರೆ ಸಾವಿರ ದಾಟಿತ್ತು. ಅಂದಿನಿಂದ ಅದು ಪ್ರತಿವಾರವೂ ರೂಢಿಯಾಗಿದೆ. ಪಾದ್ರಿ ಕೂಡ ತನ್ನ ಮಾತುಗಳನ್ನು ನಿಲ್ಲಿಸಿದ.

ವರ್ಷ ಉರುಳಿತು. ಒಂದು ಪ್ರಾರ್ಥನೆಯ ದಿನದಂದು ಪಾದ್ರಿ ವಿದೇಶಕ್ಕೆ ತೆರಳಲಿದ್ದಾರೆ ಎಂದು ಘೋಷಿಸಲಾಯಿತು. 'ಮುಂದಿನ ವಾರ ನಾನು ವಿದಾಯ ಹೇಳುತ್ತೇನೆ. ಹೊಸ ಪಾದ್ರಿ ಬಂದು ಇಲ್ಲಿ ಅಧಿಕಾರ ವಹಿಸಿಕೊಳ್ಳುತ್ತಾರೆ' ಎಂದು ಅವರು ಹೇಳಿದರು. ಇದನ್ನು ಕೇಳಿ ಅನೇಕ ಜನರು ಕೈ ಚಪ್ಪಾಳೆ ತಟ್ಟಿದರು. ಪಾದ್ರಿ ಬೆಚ್ಚಿಬಿದ್ದರು.

ಪ್ರಾರ್ಥನೆಯ ಕೊನೆಯಲ್ಲಿ ಎಲ್ಲರೂ ವಿದಾಯ ಹೇಳುತ್ತಿರುವಾಗ, ವಯಸ್ಸಾದ ಒಬ್ಬ ಮುದುಕಿ ಕಣ್ಣೀರು ಹಾಕುತ್ತಾ ಪಾದ್ರಿಯ ಬಳಿಗೆ ಬಂದಳು. ಆ ಮುದುಕಿ ತಾನು ವಿದೇಶಕ್ಕೆ ಹೋಗುತ್ತಿರುವುದರಿಂದ ಬೇಸರಿಸಿಕೊಂಡಿರಬಹುದು ಎಂದುಕೊಂಡ ಪಾದ್ರಿ, 'ಚಿಂತೆ ಮಾಡಬೇಡ ತಾಯಿ! ಬರಲಿರುವ ಪಾದ್ರಿ ನನಗಿಂತ ಒಳ್ಳೆಯವರು' ಎಂದರು. ಮುದುಕಿ ನಿಟ್ಟುಸಿರು ಬಿಟ್ಟು, 'ಪ್ರತಿ ಬಾರಿಯೂ ಎಲ್ಲರೂ ಹೀಗೆಯೇ ಹೇಳುತ್ತಾರೆ. ಆದರೆ ನಡೆಯುವುದೇ ಬೇರೆ...' ಎಂದಳು.

ಅಧಿಕಾರದ ಮೂಲಕ ಹಣ ಗಳಿಸಲು ಬಯಸುವವರಿಗೆ ಕೀರ್ತಿ ಲಭಿಸುವುದಿಲ್ಲ!

ಇದರಿಂದ ಆ ಅಧಿಕಾರಿಯೂ ಸಂತೃಪ್ತರಾದರು. 'ವಾಹನ ತಪಾಸಣೆಗೆ ಇದೇ ನಾಯಿಗಳನ್ನು ಏಕೆ ಬಳಸಬಾರದು?" ಎಂದು ಅವರಿಗನ್ನಿಸಿತು. ಸರಕುಗಳನ್ನು ತುಂಬಿದ ಅನೇಕ ವಾಹನಗಳು ಹೊರಗಿನಿಂದ ಕಾರ್ಖಾನೆಗೆ ಬಂದು ಹೋಗುತ್ತಿದ್ದವು. ಕಾರ್ಖಾನೆಯೊಳಗಿರುವ ಯಾವ ವಸ್ತುವೂ ಕಳ್ಳತನವಾಗಬಾರದು ಎಂದು ಎಲ್ಲರೂ ಚಿಂತಿಸುತ್ತಿದ್ದರು. 'ನಾಯಿಗೆ ಯಾವುದು ನಮ್ಮ ವಸ್ತುಗಳು, ಯಾವ ವಸ್ತುಗಳು ಕಳ್ಳತನವಾಗಬಾರದು ಎಂಬುದು ಹೇಗೆ ತಿಳಿಯುತ್ತದೆ? ಕೆಲವು ಕೆಲಸಗಳನ್ನು ಮನುಷ್ಯರಿಂದ ಮಾತ್ರವೇ ಮಾಡಲು ಸಾಧ್ಯ' ಎಂದು ಇತರ ಅಧಿಕಾರಿಗಳು ಹೇಳಿದರು.

'ಕಾವಲು ಕಾಯುವ ಕೆಲಸವನ್ನೇ ನಾಯಿಗಳು ಮಾಡುತ್ತಿರುವಾಗ ಈ ಕೆಲಸವನ್ನು ಮಾಡಲು ಅವುಗಳಿಂದ ಸಾಧ್ಯವಿಲ್ಲವೇನು?' ಎಂದ ಆ ಅಧಿಕಾರಿ, ಆಗಷ್ಟೇ ಹೊರಗೆ ಹೋಗಲು ಸಿದ್ಧವಾಗಿದ್ದ ಟ್ರಕ್‌ನಲ್ಲಿ ಒಂದು ನಾಯಿಯನ್ನು ಹತ್ತಿಸಿ ಬಿಟ್ಟರು. ಅದು ಇಡೀ ಟ್ರಕ್ ತುಂಬಾ ಓಡಾಡಿ ವಾಸನೆ ನೋಡಿಕೊಂಡು, ನಂತರ ಡ್ರೈವರ್ ಕ್ಯಾಬಿನ್‌ನೊಳಗೆ ಪ್ರವೇಶಿಸಿ, ಅಲ್ಲಿದ್ದ ಯಾವುದೋ ಒಂದನ್ನು ಬಾಯಲ್ಲಿ ಕಚ್ಚುತ್ತಿರುವುದು ಕಾಣಿಸಿತು. ಅಧಿಕಾರಿ ಹೆಮ್ಮೆಯಿಂದ ಇತರರ ಕಡೆ ನೋಡಿದರು. ಕೆಲವು ಕ್ಷಣಗಳಾದರೂ ನಾಯಿ ಆ ಸ್ಥಳದಿಂದ ಕದಲದಿರುವುದನ್ನು ನೋಡಿ ಅದರ ಸಮೀಪ ಹೋಗಿ ಏನು ಮಾಡುತ್ತಿದೆ ಎಂದು ನೋಡಿದರೆ, ಅದು ಲಾರಿಯ ಚಾಲಕ ತಂದಿದ್ದ ಆಹಾರವನ್ನು ತಿನ್ನುತ್ತಿತ್ತು.!

ಎಲ್ಲರೂ ಎಲ್ಲಾ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ! ●

ಹೆಮ್ಮೆಪಡುವ ವ್ಯಕ್ತಿಯಾಗಿ ಬದಲಾಗಿ

ಕಾಡಿನಲ್ಲಿ ವಾಸಿಸುತ್ತಿದ್ದ ಒಂದು ಇಲಿ, ತುಂಬಾ ಬೇಸರದಲ್ಲಿತ್ತು.'ಈ ಇಡೀ ಕಾಡಿನಲ್ಲಿ ಕೃಶವಾಗಿರುವ ಏಕೈಕ ಜೀವಿ ನಾನೊಂದೇ' ಎಂದು ಅದು ನೊಂದುಕೊಂಡಿತು. ಆದುದರಿಂದ ಅದು ತನ್ನ ಆಕಾರವನ್ನು ಬದಲಾಯಿಸಿಕೊಳ್ಳಲು ಬಯಸಿತು. ಅದು ಹೋಗಿ ಕಾಡಿನ ರಾಜ ಸಿಂಹವನ್ನು ನೋಡಿತು. 'ನಾನೂ ನಿಮ್ಮಂತೆ ನಾಯಕನಾಗಲು ಯಾವ ಮಾರ್ಗವಿದೆ?' ಎಂದು ಕೇಳಿತು.

ಇಲಿ ಹೇಳಿದ್ದನ್ನು ಕೇಳಿ ಸಿಂಹಕ್ಕೆ ನಗು ಬಂತು.ನಂತರ ಅದು ಧ್ವನಿ ಎತ್ತಿ ಜೋರಾಗಿ ಘರ್ಜನೆ ಮಾಡಿತು. ಅದರ ಧ್ವನಿಯು ಕಾಡಿನಾದ್ಯಂತ ಪ್ರತಿಧ್ವನಿಸಿತು.ಅದನ್ನು ಕೇಳಿ ಅನೇಕ ಪ್ರಾಣಿಗಳು ಭಯದಿಂದ ದೂರ ಓಡಿಹೋದವು. 'ಕೇಳಿದೆಯಾ? ನನ್ನ ಈ ಧ್ವನಿ, ನನ್ನ ನೋಟ ಮತ್ತು ಆಕಾರವೇ ನನ್ನನ್ನು ಕಾಡಿನ ರಾಜನನ್ನಾಗಿ ಮಾಡಿರುವುದು. ಇದ್ಯಾವುದೂ ನಿನ್ನಲ್ಲಿಲ್ಲ! ನನ್ನ ಬೆರಳಿನ ಗಾತ್ರದಲ್ಲಿರುವ ನೀನು ಕಾಡಿನ ನಾಯಕನಾಗಲುಬಯಸಬಹುದೇ?' ಎಂದು ಸಿಂಹ ಅಣಕಿಸುತ್ತಾ ಕೇಳಿತು.

ಕಣ್ಣಲ್ಲಿ ನೀರು ತುಂಬಿಕೊಂಡು ಅಲ್ಲಿಂದ ಹಿಂದಿರುಗಿದ ಇಲಿಗೆ ದಾರಿಯಲ್ಲಿ ಒಂದು ಜಿಂಕೆ ಕಾಣಿಸಿತು. ಜಿಂಕೆಗೂ ಅದೇ ಪ್ರಶ್ನೆಯನ್ನು ಇಲಿ ಕೇಳಿತು. 'ನನ್ನ ಕಾಲುಗಳನ್ನು ನೋಡು? ಎಷ್ಟು ಉದ್ದವಿದೆ. ಈ ಕಾಲುಗಳಿಂದ ನಾನು ಸಿಂಹಕ್ಕಿಂತ ವೇಗವಾಗಿ ಓಡಬಲ್ಲೆ, ಅದು ನಿನಗೆ ಗೊತ್ತಾ? ನಿನ್ನ ಕಾಲುಗಳು ಎಷ್ಟು ಚಿಕ್ಕದಾಗಿವೆ ನೋಡು?' ಎಂದು ಹೇಳಿ ಜಿಂಕೆ ನಕ್ಕಿತು.

ಇಲಿಯ ಕಣ್ಣೀರು ಇನ್ನೂ ಹೆಚ್ಚಾಯಿತು. ಅದು ಇದರಿಂದ ಇನ್ನಷ್ಟು ಬೇಸತ್ತು, ಹಿಂದಿರುಗುವಾಗ ದಾರಿಯಲ್ಲಿ ಒಂದು ಕೋತಿ ಕಾಣಿಸಿತು. 'ನಿನ್ನಷ್ಟು ವೇಗವಾಗಿ ನಾನು ಮರವನ್ನು ಏರಲು ಸಾಧ್ಯವಾದರೆ, ನಾನು ಈ ಕಾಡಿನ ನಾಯಕನಾಗಬಹುದೇ?' ಇಲಿ ಕೇಳಿತು, 'ನನಗೆ ಉದ್ದವಾದ ಬಾಲವಿದೆ, ಆದ್ದರಿಂದ ನಾನು ಸುಲಭವಾಗಿ ಮರವನ್ನು ಹತ್ತಬಲ್ಲೆ. ನಿನ್ನ ಬಾಲವನ್ನು ನೋಡು. ಅದು ತೆಳ್ಳಗಿದೆ. ಅದನ್ನು ಸುತ್ತಿಕೊಳ್ಳುವುದಕ್ಕೂ ನಿನ್ನಿಂದ ಸಾಧ್ಯವಿಲ್ಲ. ಇಂತಹ ಬಾಲವನ್ನಿಟ್ಟುಕೊಂಡು ನೀನೇನು ಮಾಡಬಹುದು?'ಎಂದು ಮಂಗ ಇಲಿಯನ್ನು ಚುಡಾಯಿಸಿತು.

ಇಲಿ ಬೇಗ ಬಂದು ಒಂದು ಬಿಲದೊಳಗೆ ಅಡಗಿಕೊಂಡಿತು. ಹೊರಗೆ ಹೋಗಲು ಅದಕ್ಕೆ ಅವಮಾನಕರವಾಗಿತ್ತು. ತನ್ನದು ಎಷ್ಟೊಂದು ಸಣ್ಣ ಆಕೃತಿ, ಸಣ್ಣಸಣ್ಣ ಕಾಲುಗಳು, ತೆಳ್ಳಗಿನ ಬಾಲ... ಅದಕ್ಕೆ ತನ್ನ ದೇಹದಲ್ಲಿರುವ ಯಾವುದೂ ಇಷ್ಟವಾಗಲಿಲ್ಲ. 'ಈ ಕಾಡಿನಲ್ಲಿರುವ ಎಲ್ಲ ಪ್ರಾಣಿಗಳಿಗೂ ಯಾವುದೋ ಒಂದು ವಿಶೇಷತೆ ಇದೆ. ನನ್ನ ಬಳಿ ಏನೂ ಇಲ್ಲ' ಎಂದು ಭಾವಿಸಿ ಅದಕ್ಕೆ ಕಣ್ಣಿನಲ್ಲಿ ನೀರು ಸುರಿಯತೊಡಗಿತು.

ಆಗ ಇಡೀ ಕಾಡೇ ಅದುರುವಂತೆ ಜೋರಾದ ಶಬ್ದ ಕೇಳಿಸಿತು. ಭೂಕಂಪವೇನಾದರೂ ಬಂದಿತೇ ಎಂದು ಭಯದಿಂದ ಪುಟ್ಟ ಇಲಿ ತನ್ನ ಬಿಲದಿಂದ ಹೊರಬಂದು ಇಣುಕಿ ನೋಡಿತು. ಅಲ್ಲಿ ಕಾಣಿಸಿದ ದೃಶ್ಯವನ್ನು ನೋಡಿ ಅದು ಬೆಚ್ಚಿಬಿದ್ದಿತು. ಕೆಲವು ಬೇಟೆಗಾರರು ಕಾಡಿಗೆ ಬಂದು ಸಿಂಹ, ಜಿಂಕೆ ಮತ್ತು ಕೋತಿಗಳನ್ನು ಹಿಡಿದು ದೊಡ್ಡ ದೊಡ್ಡ ಪಂಜರಗಳಲ್ಲಿ ಬಂಧಿಸಿಟ್ಟಿದ್ದರು. ಅವುಗಳನ್ನು ಅಲ್ಲಿಂದ ತೆಗೆದುಕೊಂಡು ಹೋಗುವ ವ್ಯವಸ್ಥೆ ಮಾಡುತ್ತಿದ್ದರು. ಪಂಜರದಲ್ಲಿದ್ದ ಅವು ಮೂರೂ ಪ್ರಾಣ ಭಯದಿಂದ ಜೋರಾಗಿ ಕಿರುಚುತ್ತಿದ್ದವು.

ಬೇಟೆಗಾರರು ದೂರದಲ್ಲಿದ್ದ ತಮ್ಮ ವಾಹನವನ್ನು ತೆಗೆದದು–ಕೊಂಡು ಬರುವುದಕ್ಕಾಗಿ ಹೋದಾಗ, ಇಲಿ ವೇಗವಾಗಿ ಪಂಜರಗಳ ಬಳಿಗೆ ಬಂದಿತು. ಪಂಜರಗಳಲ್ಲಿ ಅವುಗಳನ್ನು ಕೇವಲ ಹಗ್ಗದಿಂದ ಕಟ್ಟಿ ಹಾಕಿರುವುದನ್ನು ನೋಡಿದ ಇಲಿ ಹಗ್ಗವನ್ನು ತನ್ನ ಹಲ್ಲುಗಳಿಂದ ಕಚ್ಚಿ ಕತ್ತರಿಸಿ ಹಾಕಿ ಅವುಗಳು ತಪ್ಪಿಸಿಕೊಂಡು ಹೋಗಲು ಸಹಾಯ ಮಾಡಿತು. ಅವು ಮೂರೂ ಪಂಜರದಿಂದ ಹೊರಗೆ ಹಾರಿ ಕಾಡಿನೊಳಗೆ ಓಡಿ ಹೋದವು. ನಂತರ ಸಿಂಹವು ಇಲಿಗೆ ಧನ್ಯವಾದ ತಿಳಿಸಿ, 'ಕಾಡಿನ ರಾಜನನ್ನು ಉಳಿಸುವ ಮೂಲಕ ನೀವೇ ನಾಯಕ ಎಂದು ನೀವು ಸಾಬೀತುಪಡಿಸಿದ್ದೀರಿ' ಎಂದು ಹೇಳಿತು. ಇಲಿಯು ತನ್ನ ಅನನ್ಯತೆ ಮತ್ತು ಅದರಿಂದ ತನಗೆ ದೊರೆತ ಹೆಮ್ಮೆಯನ್ನು ಅರ್ಥಮಾಡಿಕೊಂಡಿತು.

ಪ್ರತಿಯೊಬ್ಬರೂ ತಮ್ಮ ಅನನ್ಯತೆ ಮತ್ತು ಹೆಮ್ಮೆಯನ್ನು ಅರಿತುಕೊಳ್ಳಲು ಯಾವುದೋ ಒಂದು ಕ್ಷಣ ಬರುತ್ತದೆ.ಅಂತಹ ಅವಕಾಶವನ್ನು ನಾವೇ ಕೂಡ ರೂಪಿಸಿಕೊಳ್ಳಬಹುದು. ಅದನ್ನು ಮಾಡಲು ಇದೋ ಕೆಲವು ವಿಧಾನಗಳು ಇಲ್ಲಿವೆ:

❖ ನೀವು ಕೆಲವೊಮ್ಮೆ ಅನೇಕ ಸಣ್ಣಸಣ್ಣ ವಿಜಯಗಳನ್ನು ಗಳಿಸಿರುತ್ತೀರಿ. ಆ ಕ್ಷಣಗಳನ್ನು ನೆನಪಿಸಿಕೊಳ್ಳಿ. ಆಗ ನೀವು ಎಷ್ಟು ಉತ್ಸಾಹದಿಂದಿದ್ದಿರಿ ಮತ್ತು ಆತ್ಮವಿಶ್ವಾಸದಿಂದ ಇದ್ದಿರಿ ಎಂದು ಯೋಚಿಸಿ. ಅಂತಹುದೇ ಮನಸ್ಥಿತಿಯಿಂದ ಯಾವುದನ್ನೇ ಆಗಲಿ ಆರಂಭಿಸಿ. ನೀವು ಎಲ್ಲಾ ಚಟುವಟಿಕೆಗಳಲ್ಲಿ ಯಶಸ್ಸನ್ನು ಸಾಧಿಸುವಿರಿ ಮತ್ತು ಹೆಮ್ಮೆಯ ವ್ಯಕ್ತಿಯಾಗುವಿರಿ.

❖ ನೇರವಾಗಿ ನಡೆಯುವುದು, ನೇರವಾಗಿ ಕುಳಿತುಕೊಳ್ಳುವುದು, ಇತರರ ಕಣ್ಣಿನಲ್ಲಿ ಕಣ್ಣಿಟ್ಟು ನೇರವಾಗಿ ನೋಡಿ ಮಾತನಾಡುವುದು... ಇತ್ಯಾದಿ ವಿಷಯಗಳಲ್ಲಿ ನಿಮ್ಮ ದೇಹದ ಭಾಷೆಯನ್ನು ಬದಲಾಯಿಸಿಕೊಳ್ಳಿ. ಅದು ನಿಮಗೆ ಕೊಡುವ ಆತ್ಮವಿಶ್ವಾಸವನ್ನು ಅಳೆಯಲಾಗದು. ಉದ್ಯೋಗ, ವ್ಯಾಪಾರ–ವ್ಯವಹಾರಗಳು, ಮಾರಾಟ ಇತ್ಯಾದಿ ಕಾರಣಗಳಿಂದಾಗಿ ನೀವು ಯಾರನ್ನಾದರೂ ಭೇಟಿಯಾದಾಗ ಈ ದೇಹ ಭಾಷೆಯನ್ನು ಪ್ರದರ್ಶಿಸಿ. ಅವಕಾಶಗಳು ಮತ್ತು ಯಶಸ್ಸು ನಿಮಗೆ ಸಾಲಾಗಿದೊರಕುತ್ತವೆ.

❖ ನಿಮ್ಮ ಬಟ್ಟೆಗಳು, ನೀವು ತೊಡುವ ಶೂಗಳು, ನೀವು ಅಂದವಾಗಿ ಡ್ರೆಸ್ ಮಾಡುವ ರೀತಿ ಇವೆಲ್ಲವೂ ಒಟ್ಟಾಗಿ ನಿಮ್ಮ ಸ್ವರೂಪವನ್ನು ಹೆಮ್ಮೆಯಿಂದ ಕಾಣುವಂತೆ ಮಾಡುತ್ತವೆ. ಈ ವಿಚಾರದಲ್ಲಿ ಯಾವುದೇ ಸಂದರ್ಭದಲ್ಲೂ ರಾಜಿ ಮಾಡಿಕೊಳ್ಳಬೇಡಿ.

❖ ನಿಮ್ಮ ಸಾಮರ್ಥ್ಯ ಮತ್ತು ಸಾಧನೆಗಳ ಪಟ್ಟಿಯನ್ನು ಮಾಡಿ. ನಿಮ್ಮ ವೈಫಲ್ಯಗಳ ಬಗ್ಗೆ ನೀವು ಯೋಚಿಸುವಾಗ, ಈ ಪಟ್ಟಿಯನ್ನು ಒಮ್ಮೆ ನೋಡಿ. ನಕಾರಾತ್ಮಕವಾಗಿ ಯೋಚಿಸುವ ಬದಲು ಧನಾತ್ಮಕವಾಗಿ ನಿಮ್ಮ ಚಿಂತನೆಯನ್ನು ಕೇಂದ್ರೀಕರಿಸಲು ಇದು ನಿಮಗೆ ಸಹಾಯ ಮಾಡುತ್ತದೆ. ನಿಮ್ಮ ಸಾಧನೆಗಳ ಬಗ್ಗೆ ಹೆಮ್ಮೆಪಡಿರಿ ಮತ್ತು ನಂಬಿಕೆಯಿಂದ ನೀವು ಏನನ್ನು ಸಾಧಿಸಬಹುದು ಎಂದು ಯೋಚಿಸಿ.

❖ ನನ್ನ ಸಾಧನೆ ಮತ್ತು ಯಶಸ್ಸನ್ನು ಇತರರು ನೋಡುತ್ತಾರೆ ಮತ್ತು ಮೆಚ್ಚುತ್ತಾರೆ ಎಂದು ಭಾವಿಸಿ ಸುಮ್ಮನಿರಬೇಡಿ. ನಿಮ್ಮ ಬಗ್ಗೆ ನೀವೇ ಹೇಳಿಕೊಳ್ಳಬೇಕು. ನಿಮ್ಮ ಸಾಧನೆಗಳ ಬಗ್ಗೆ ನಿಮ್ಮ ಸ್ನೇಹಿತರಿಗೆ ತಿಳಿಸಿ, ಸಾಮಾಜಿಕ ಜಾಲತಾಣಗಳಲ್ಲಿ ನಿಮ್ಮ ಸಾಧನೆಗಳ ಬಗ್ಗೆ ಬರೆಯಿರಿ. ಆ ಮೂಲಕ ನಿಮಗೆ ದೊರಕುವ ಮೆಚ್ಚುಗೆ ನಿಮಗೆ ಹೆಮ್ಮೆ ಎನ್ನಿಸುತ್ತದೆ.

❖ ತಪ್ಪುಗಳಾಗುವುದು ಸಹಜ. ತಪ್ಪುಗಳು ಮತ್ತು ವೈಫಲ್ಯಗಳ ಬಗ್ಗೆ ವಿಷಾದಿಸಬೇಡಿ. ತನ್ನನ್ನು ತಾನೇ ಶಿಕ್ಷಿಸಿಕೊಳ್ಳುವುದು ಕೂಡ ಒಳ್ಳೆಯದಲ್ಲ. 'ನಾನು ಈ ತಪ್ಪು ಮಾಡಿದೆ. ಆದರೆ ನಾನು ಅದನ್ನು ಮತ್ತೆ ಸರಿಯಾಗಿ ಮಾಡಬಲ್ಲೆ ಮತ್ತು ಗೆಲ್ಲಬಲ್ಲೆ' ಎಂದು ಅಂದುಕೊಂಡರೆ ಮತ್ತೆ ನೀವು ಅದರಿಂದ ಪುಟಿದೇಳಬಹುದು.

❖ ಇಕ್ಕಟ್ಟಾದ ಕ್ಷಣಗಳಲ್ಲಿ ಸೋತು ಹೋಗಬೇಡಿ.'ಇದು ಕಠಿಣವಾದ ಕೆಲಸ ಸರಿ. ಆದರೆ, ಇದನ್ನು ಮಾಡಿ ಗೆಲ್ಲುವುದು ಹೇಗೆ ಎಂಬುದು ನನಗೆ ಗೊತ್ತು' ಎಂದು ನಿಮಗೆ ನೀವೇ ಹೇಳಿಕೊಳ್ಳಿ. ಖಂಡಿತಾ ಗೆಲ್ಲುವಿರಿ.

❖ ಯಾರೂ ನಿಮ್ಮನ್ನು ಬೆಂಬಲಿಸದಿದ್ದರೂ ಸಹ ನಿಮ್ಮನ್ನು ನೀವೇ ಪ್ರೋತ್ಸಾಹಿಸಿಕೊಳ್ಳಿ. ನಮ್ಮ ನಿರೀಕ್ಷೆಗಳು ಕೆಲವೊಮ್ಮೆ ಸುಳ್ಳಾಗಬಹುದು. ಕೆಲವು ಕೆಲಸಗಳು ನಿಮ್ಮ ನಿರೀಕ್ಷಿತ ಮಟ್ಟದಲ್ಲಿ ನಡೆಯದಿರಬಹುದು. ಆದರೆ ಅದರಿಂದ ನಿರುತ್ಸಾಹಗೊಳ್ಳಬೇಡಿ ಮತ್ತು ನಿಮ್ಮ ಪ್ರಯತ್ನವನ್ನು ನಿಲ್ಲಿಸಬೇಡಿ. ಎಲ್ಲಾ ಮಾರ್ಗಗಳು ಸುಲಭವಲ್ಲ. ನೀವು ಎಷ್ಟು ಕಷ್ಟಗಳನ್ನು ದಾಟಿ ಕಡೆಗೆ ಈ ಗೆಲುವನ್ನು ಸಾಧಿಸಿದ್ದೀರಿ ಎಂಬುದರಲ್ಲಿ ನಿಮ್ಮ ಹೆಮ್ಮೆ ಅಡಗಿದೆ.

ಹೆಮ್ಮೆಯನ್ನು ಹುಡುಕದಿರಿ!

ಪ್ರಾಚೀನ ಕಾಲದಲ್ಲಿ ನಡೆಯುತ್ತಿದ್ದ ಯುದ್ಧಗಳಲ್ಲಿ ಒಂದು ಸಂಪ್ರದಾಯವಿತ್ತು. ಯುದ್ಧವನ್ನು ಗೆದ್ದಾಗ, ವಿಜಯಶಾಲಿಯಾದ ಸೈನ್ಯದ ರಾಜರು ಮತ್ತು ಸೇನಾಪತಿಗಳನ್ನು ಗೌರವಿಸಲು ಒಂದು ಸಮಾರಂಭವನ್ನು ಏರ್ಪಡಿಸಲಾಗುತ್ತಿತ್ತು. ಅವರು ವಿಜಯಶಾಲಿಯಾಗಿ ಹಿಂದಿರುಗುವಾಗ ಅವರ ರಥಗಳು ಸಾಲಾಗಿ ನಿಂತಿರುತ್ತಿದ್ದವು. ಸಾರಥಿಗಳು ಕೆಳಗಿಳಿದು ಮೊಣಕಾಲುಗಳ ಮೇಲೆ ಕುಳಿತುಕೊಳ್ಳುತ್ತಿದ್ದರು. ನಂತರವಿಜಯಶಾಲಿಯಾದವರು ರಥದಿಂದ ಕೆಳಗಿಳಿದಾಗ, ಸಾರಥಿಯು ಅವರಿಗೆ ನಮಸ್ಕರಿಸಿ, ಹಾರವನ್ನು ಹಾಕಿ ವಿಜಯವನ್ನು ಸಾರುತ್ತಿದ್ದ. ರಾಜ ಅಥವಾ ಸೇನಾಧಿಪತಿಗಳು ಕೂಡ ತನಗಾಗಿ ಯುದ್ಧದಲ್ಲಿ ಸಹಕರಿಸಿದಆ ಸಾರಥಿಗೆ ಉಡುಗೊರೆಗಳನ್ನು ನೀಡಿ ಗೌರವಿಸುತ್ತಿದ್ದರು.

ಕುರುಕ್ಷೇತ್ರ ಯುದ್ಧದಲ್ಲಿ ಗೆದ್ದ ಪಾಂಡವರಿಗೆ ಕೂಡ ಹೀಗೆ ವಿಜಯೋತ್ಸವ ನಡೆಯಿತು. ಧರ್ಮರಾಯ, ಭೀಮ, ಅರ್ಜುನ, ನಕುಲ ಮತ್ತು ಸಹದೇವರ ರಥಗಳು ಸಾಲಾಗಿ ನಿಂತಿರಲು, ಸಮಾರಂಭ ಪ್ರಾರಂಭವಾಯಿತು. ಸಾರಥಿಗಳೊಂದಿಗೆ ನಗರವಾಸಿಗಳು ಮತ್ತು ಸೈನಿಕರು ವಿಜಯೋತ್ಸವದ ಘೋಷಣೆಗಳನ್ನು ಕೂಗಿದರು.ಆ ಸ್ಥಳದಲ್ಲಿ ಭಾರಿ ಕೋಲಾಹಲ ಕಂಡುಬಂತು.

ಸಾರಥಿಗಳು ಮೊದಲು ಧರ್ಮನಿಗೆ, ನಂತರ ಭೀಮನಿಗೆ ನಮನ ಸಲ್ಲಿಸಿ ಮುಗಿಸಿದರು. ಮುಂದೆ ಅರ್ಜುನನ ಸರದಿ. 'ಯಾರಿಗೂ ಸಿಗದ ಗೌರವ ನನಗೆ ಸಿಗಲಿದೆ. ಶ್ರೀಕೃಷ್ಣನು ಮಂಡಿಯೂರಿ ನನ್ನನ್ನು ಸ್ತುತಿಸಲಿದ್ದಾನೆ' ಎಂದು ರಥದ ಮೇಲೆ ಕುಳಿತ ಅರ್ಜುನ ಹೆಮ್ಮೆಯಿಂದ ಅಂದುಕೊಂಡ. ಆದರೆ ಶ್ರೀಕೃಷ್ಣ ರಥದಿಂದ ಇಳಿಯಲಿಲ್ಲ. 'ಅರ್ಜುನಾ, ಈ ರಥ ಮಾತ್ರ ಈ ಆಚರಣೆಗೆ ಅಪವಾದ. ನೀನು ಮೊದಲು ರಥದಿಂದ ಕೆಳಗಿಳಿ' ಎಂದು ಭಗವಂತ ಆಜ್ಞಾಪಿಸಿದ. ತನ್ನ ಸಹೋದರರಿಗೆ ಸಿಗುವ ಗೌರವ ತನಗೆ ಸಿಗಲಿಲ್ಲ ಎಂಬ ಕೊರಗಿನಿಂದಲೇ ಅರ್ಜುನ ರಥದಿಂದ ಕೆಳಗಿಳಿದ.

ಅವನು ಇಳಿದ ಮೇಲೆ ಭಗವಂತ ರಥದಿಂದ ಕೆಳಗಿಳಿದ. ಅವನು ಕೆಳಗಿಳಿದ ಕೂಡಲೇ, ಕ್ಷಣಮಾತ್ರದಲ್ಲಿ ರಥ ಉರಿದು ಹೋಯಿತು. ಅದನ್ನು ನೋಡಿ ಎಲ್ಲರೂ ಬೆರಗಾದರು. 'ಅರ್ಜುನಾ, ಈ ರಥದ ಮೇಲೆ ಕುಳಿತು ನಿನ್ನ ಶತ್ರುಗಳು ನಿನ್ನ ಮೇಲೆ ಪ್ರಯೋಗಿಸಿದ ಅಷ್ಟೂ ದುಷ್ಟ ಶಕ್ತಿಗಳನ್ನು ನಾನು ತಡೆ ಹಿಡಿದಿದ್ದೇನೆ. ನಾನು ಸಾರಥಿಯಾಗಿ ಈ ರಥದಲ್ಲಿ ಕುಳಿತಿರುವವರೆಗೂ ಅವೆಲ್ಲವೂ ನಿಷ್ಕ್ರಿಯವಾಗಿದ್ದವು.

ಯಾವುದರಲ್ಲಿದೆ ಹೆಮ್ಮೆ?

ಮಧ್ಯ ಅಮೆರಿಕದ ಹೊಂಡುರಾಸ್ ನಗರದಲ್ಲಿ ಕಳೆದ 1930ರ ದಶಕದಲ್ಲಿ 'ಚೋಲುಟೆಕಾ' ನದಿಗೆ ಅಡ್ಡಲಾಗಿ ಒಂದು ಸೇತುವೆಯನ್ನು ನಿರ್ಮಿಸಲಾಯಿತು. 'ಮಧ್ಯ ಅಮೆರಿಕದಲ್ಲಿ ಇಂತಹ ಸುಂದರವಾದ ಸೇತುವೆ ಮತ್ತೊಂದಿಲ್ಲ' ಎಂದು ಹೇಳುವ ಮಟ್ಟಿಗೆ ಅದು ಹೆಸರುವಾಸಿಯಾಗಿತ್ತು. ಅಮೆರಿಕ ದೇಶದ ಸರ್ಕಾರದ ನೆರವಿನಿಂದ ನಿರ್ಮಿಸಲಾದಆ ಸೇತುವೆ ಯಾವುದೇ ಪ್ರಕೃತಿ ವಿಕೋಪವನ್ನು ಕೂಡ ತಡೆದುಕೊಳ್ಳುತ್ತದೆ ಎಂದು ಹೇಳಲಾಯಿತು.

1998ರಲ್ಲಿ ದೊಡ್ಡ ಚಂಡಮಾರುತವೊಂದು ಅಮೇರಿಕಾಗೆ ಬಂದು ಅಪ್ಪಳಿಸಿದಾಗ ಆ ದೇಶದಲ್ಲಿದ್ದ ಅನೇಕ ಸೇತುವೆಗಳು, ಕಟ್ಟಡಗಳು ಮತ್ತು ರಸ್ತೆಗಳು ನಾಶವಾದವು. ಆದರೆಚೋಲುಟೆಕಾ ಸೇತುವೆ ಮಾತ್ರ ದೃಢವಾಗಿ ನಿಂತಿತ್ತು. ಆದರೆ ಅದರ ನಂತರ ಆ ಸೇತುವೆ ನಿರುಪಯುಕ್ತವಾಗಿ ಹೋಯಿತು. ಏಕೆ? ಸೇತುವೆಗೆ ಹೋಗುವ ಸಂಪರ್ಕ ರಸ್ತೆಗಳೆಲ್ಲ ಪ್ರವಾಹದ ರಭಸಕ್ಕೆ ಕೊಚ್ಚಿ ಹೋಗಿದ್ದವು. ಅಷ್ಟೇ ಅಲ್ಲದೆ, ಚಂಡಮಾರುತದ ಪ್ರಭಾವದಿಂದ ಚೋಲುಟೆಕಾ ನದಿಯೇ ಬೇರೆ ಕಡೆಗೆ ಹರಿಯತೊಡಗಿತು!

ಭಾರಿ ಪ್ರಕೃತಿ ವಿಕೋಪಗಳ ನಡುವೆಯೂ ಗಟ್ಟಿಯಾಗಿ ನಿಂತರೂ ಇಂದು ಚೋಲುಟೆಕಾ ಸೇತುವೆ ನಿರುಪಯುಕ್ತವಾಗಿದೆ. ನದಿಯೇ ದೂರ ಸರಿದ ನಂತರ ಸೇತುವೆಯು ಜನರಿಗೆ ಅಗತ್ಯವಿಲ್ಲ. ಈ ಸೇತುವೆ ಈಗ ಮ್ಯಾನೇಜ್‌ಮೆಂಟ್ ಕೋರ್ಸ್‌ಗಳನ್ನು ಕಲಿಸುವ ಪ್ರತಿಯೊಬ್ಬರೂ ಸೂಚಿಸುವ ಉದಾಹರಣೆಯಾಗಿದೆ. 'ಬದಲಾದ ಕಾಲಕ್ಕೆ ಹೊಂದಿಕೊಳ್ಳದಿದ್ದರೆ ಎಷ್ಟೇ ಬಲಶಾಲಿಯಾಗಿದ್ದರೂ, ಎಷ್ಟೇ ಚೈತನ್ಯವಂತನಾಗಿದ್ದರೂ ನಿಷ್ಪ್ರಯೋಜಕನಾಗುತ್ತಾನೆ' ಎಂಬುದನ್ನುಚೋಲುಟೆಕಾ ಸೇತುವೆ ನಮಗೆ ಕಲಿಸಿದೆ.

ಕಾಲದ ಬದಲಾವಣೆಗಳನ್ನು ದಾಟಿಯೂ ನಾವು ಉಳಿಸಿಕೊಂಡಿದ್ದೇವೆ ಎಂಬುದು ಹೆಮ್ಮೆಯ ವಿಷಯವಲ್ಲ. ಆ ಬದಲಾವಣೆಗಳಿಗೆ ಹೊಂದಿಕೊಳ್ಳಲು ನಮ್ಮನ್ನು ನಾವು ಸಿದ್ಧಪಡಿಸಿಕೊಂಡಿದ್ದೇವೆ ಎಂಬುದರಲ್ಲೇ ನಿಜವಾದ ಹೆಮ್ಮೆ ಇದೆ.

ಈಗ ನಡೆಯುತ್ತಿರುವ ಈ ಸಂಪ್ರದಾಯಕ್ಕಾಗಿ ನಾನು ಮೊದಲುಕೆಳಗಿಳಿದಿದ್ದರೆ ಬಹುಶಃ ನೀನು ರಥದೊಡನೆ ಸುಟ್ಟು ಹೋಗುತ್ತಿದ್ದೆ. ನಿನ್ನನ್ನು ಉಳಿಸುವುದಕ್ಕಾಗಿಯೇ ಮೊದಲು ನಿನ್ನನ್ನು ಕೆಳಗಿಳಿಯುವಂತೆ ಹೇಳಿದೆ. ಅದಕ್ಕಾಗಿಯೇ ನಾನು ಸಂಪ್ರದಾಯವನ್ನು ಮುರಿದದ್ದು' ಎಂದ ಕೃಷ್ಣ!

'ಆದರೆ ನಿನ್ನ ಸಾರಥಿಯಾಗಿ ಸೇವೆ ಸಲ್ಲಿಸಿದ ನಾನು ನಿನಗೆ ತಲೆಬಾಗಿ ನಮಸ್ಕರಿಸಿ ನಿನ್ನ ಉಡುಗೊರೆಯನ್ನು ಸ್ವೀಕರಿಸಲು ಹಿಂದೇಟು ಹಾಕಿದೆ ಎಂದು ನೀನು ಭಾವಿಸಿದೆ. ನನ್ನ ಎಲ್ಲಾ ಕ್ರಿಯೆಗಳಿಗೆ ಕಾರಣವಿದೆ ಎಂದು ನಾನು ನಿಮಗೆ ಅನೇಕ ಸಂದರ್ಭಗಳಲ್ಲಿ ಅರ್ಥ ಮಾಡಿಸಿದ್ದೇನೆ. ಆದರೂ, ನಿನ್ನ ಮನಸ್ಸು ಒಣಹೆಮ್ಮೆಯ ಹುಡುಕಾಟದಲ್ಲಿ ಅಲೆದಾಡುತ್ತದೆ. ಅನಗತ್ಯ ಹೆಮ್ಮೆಗಾಗಿ ನಿನ್ನ ಮನಸ್ಸನ್ನು ಅಲೆದಾಡಲು ಬಿಡಬೇಡ! ನೀನು ಬಯಸಿದಲ್ಲಿ ನಿನಗೆ ನನ್ನ ನಮನಗಳನ್ನು ಸಲ್ಲಿಸಲು ನಾನು ಸಿದ್ಧನಿದ್ದೇನೆ'ಎಂದು ಹೇಳುತ್ತಾ ಶ್ರೀಕೃಷ್ಣ ಮಂಡಿಯೂರಿ ಕುಳಿತುಕೊಳ್ಳಲು ಸಿದ್ಧನಾದ. ಅರ್ಜುನನು ಭಯಭೀತನಾಗಿ ಮರುಕ್ಷಣವೇ ಕೃಷ್ಣನ ಪಾದಗಳ ಬಳಿ ಮಂಡಿಯೂರಿ ತನ್ನ ನಮನಗಳನ್ನು ಸಲ್ಲಿಸಿದ.

ಯಾವುದು ಹೆಮ್ಮೆ?

- ಜೀವನದಲ್ಲಿ ಎದುರಾಗುವ ಎಲ್ಲಾ ಬಿಕ್ಕಟ್ಟು ಮತ್ತು ಸಮಸ್ಯೆಗಳನ್ನೂ ಸಹಿಸಿಕೊಂಡು, ಎಲ್ಲಾ ಸಂದರ್ಭಗಳನ್ನೂ ನಗುಮುಖದಿಂದ ಎದುರುಗೊಳ್ಳುವುದು ನಿಜವಾದ ಹೆಮ್ಮೆ.
- ನಾವು ಯಾವುದೇ ತಪ್ಪು ಮಾಡದಿದ್ದರೂ ಸಹ, ಇತರರ ಮನ ನೋಯಬಾರದು ಎಂಬ ಕಾರಣಕ್ಕಾಗಿ ಸ್ವಯಂಪ್ರೇರಣೆಯಿಂದ ಮುಂದೆ ಬಂದು ಕ್ಷಮೆಯಾಚಿಸುವುದು ಹೆಮ್ಮೆಯ ವಿಷಯ.
- ನಮ್ಮನ್ನು ನೋಯಿಸಿದವರು, ಗೊತ್ತಿದ್ದೂ ನಮಗೆ ದ್ರೋಹ ಬಗೆದವರು, ನಮಗೆ ನಷ್ಟ ಉಂಟು ಮಾಡಿದವರು ಎಲ್ಲರನ್ನೂ ಕ್ಷಮಿಸಿ, ಮುಂದೆ ಸಾಗುವುದು ಹೆಮ್ಮೆ.
- ದೊರೆತದ್ದು ಯಶಸ್ಸು ಅಥವಾ ವೈಫಲ್ಯ ಯಾವುದಾದರೂ ಆಗಿರಲಿ, ನನ್ನ ಕೈಲಾದಷ್ಟು ಸಂಪೂರ್ಣ ಪರಿಶ್ರಮ ಹಾಕಿ ನನ್ನ ಕೆಲಸ ಮಾಡಿದ್ದೇನೆ ಎಂಬುದು ಹೆಮ್ಮೆ.
- ಭಯ ಹುಟ್ಟಿಸುವಂತಹ ಸನ್ನಿವೇಶಗಳು ಎದುರಾದಾಗಲೂ ಆ ಭಯವನ್ನು ವ್ಯಕ್ತಪಡಿಸಿ ಸುತ್ತಲಿನವರಿಗೆ ತೊಂದರೆಯಾಗದಂತೆ, ಧೈರ್ಯದಿಂದ ವರ್ತಿಸಿ ಎಲ್ಲರಲ್ಲೂ ಆತ್ಮವಿಶ್ವಾಸ ತುಂಬುವುದು ಹೆಮ್ಮೆಯ ಸಂಗತಿ.
- ಪ್ರತಿಯಾಗಿ ಪ್ರೀತಿ ಸಿಗದಿದ್ದರೂ ಎಲ್ಲರನ್ನೂ ಬೇಷರತ್ತಾಗಿ ಪ್ರೀತಿಸುವುದು ಹೆಮ್ಮೆ.
- ಅಪರಿಚಿತರಿಗೂ ಸಹ ಕಾಳಜಿಯಿಂದ ಸಹಾಯ ಮಾಡುವುದು ಮತ್ತು ಅಪರಿಚಿತರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರುವುದು ಹೆಮ್ಮೆ.

ದೂರದರ್ಶನದಲ್ಲಿ ಪ್ರಸಾರವಾಗುವ ಚರ್ಚಾಗೋಷ್ಠಿಗಳನ್ನುಅನುಕ್ರಮವಾಗಿ ನೋಡುವವರಿಗೆ ಒಂದು ವಿಷಯ ಚೆನ್ನಾಗಿ ಅರ್ಥವಾಗುತ್ತದೆ. ಯಾವುದಾದರೂ ಎರಡು ವಿಷಯಗಳನ್ನು ತುಲನೆ ಮಾಡಿ, ಎರಡರಲ್ಲಿ ಯಾವುದು ಉತ್ತಮ ಎಂದು ಚರ್ಚಿಸಲು ಅದು ವೇದಿಕೆಯಾಗಿರುತ್ತದೆ. ತಮ್ಮ ಕಡೆಯವರ ಬಗ್ಗೆ ಹೆಮ್ಮೆಯಿಂದ ಮಾತನಾಡುವ ಭಾಷಣಕಾರರು, ಇನ್ನೊಂದು ಕಡೆಯವರನ್ನು ಕೀಳಾಗಿ ಕಾಣಲು ಹಿಂಜರಿಯುವುದಿಲ್ಲ. ಇತರರನ್ನು ಕೆಳಗಿಳಿಸುವ ಮತ್ತು ತಮ್ಮನ್ನು ತಾವು ಉನ್ನತೀಕರಿಸಿಕೊಳ್ಳುವ ಈ ಮನೋಭಾವ ಆ ಕ್ಷಣದಲ್ಲಿ ಮೆಚ್ಚಲು ಸರಿಯಾಗಿರಬಹುದು. ಆದರೆ ಜೀವನದಲ್ಲಿ ಅನುಕರಿಸಲು ಅಲ್ಲ!

ಯಾರ ಹೆಮ್ಮೆಯ ಬಗ್ಗೆ ಮಾತನಾಡುತ್ತಿದ್ದೀರಿ?

ನೀವು ಒಂದು ಗೆರೆಯನ್ನು ಚಿಕ್ಕದಾಗಿಸಲು ಬಯಸಿದರೆ, ಅದರ ಪಕ್ಕದಲ್ಲಿ ಅದಕ್ಕಿಂತ ದೊಡ್ಡದಾಗಿ ಒಂದು ಗೆರೆಯನ್ನು ಎಳೆಯಬೇಕು ಎಂಬುದು ಗಣಿತದ ಪಾಠ. ಆದರೆ ಖಂಡಿತವಾಗಿಯೂ ಇದು ಜೀವನದ ಪಾಠವಲ್ಲ! ಇನ್ನೊಬ್ಬರನ್ನು ಕೀಳಾಗಿ ಕಾಣಬೇಡಿ ಮತ್ತು ಯಾವುದರ ಬಗ್ಗೆಯೂ ಹೆಮ್ಮೆ ಪಡಬೇಡಿ. ಇದು ನೈಸರ್ಗಿಕ ನಿಯಮವಲ್ಲ. ಉದಾಹರಣೆಗೆ 'ನಾನು ತಿನ್ನುವ ಆಹಾರವೇ ಶ್ರೇಷ್ಠ, ಇತರರ ಆಹಾರ ಕೀಳು' ಎಂದು ಆಹಾರದ ಮೇಲೆ ಆರೋಪ ಮಾಡುವುದು ತಪ್ಪು. ಅಂತೆಯೇ, ನನ್ನ ಊರು ಮತ್ತು ನನ್ನ ದೇಶವೇ ಶ್ರೇಷ್ಠ ಎಂದು ಬೇರೆ ಊರುಗಳನ್ನು ಕೀಳಾಗಿ ಕಾಣುವುದು ತಪ್ಪು. ನನ್ನ ಸಂಸ್ಕೃತಿ ಉನ್ನತವಾದುದು,ನನ್ನ ಭಾಷೆಯೇ ಶ್ರೇಷ್ಠವಾದುದು, ನಮ್ಮ ಹಬ್ಬಗಳು ಶ್ರೇಷ್ಠವಾದುವು, ನಮ್ಮ ಸಂಪ್ರದಾಯಗಳಂತೆ ಪ್ರಪಂಚದಲ್ಲಿ ಬೇರಾವುದೂ ಇಲ್ಲ ಎಂದು ಹೇಳುವುದೆಲ್ಲ ಸಂಘರ್ಷವನ್ನು ಇನ್ನಷ್ಟು ಹೆಚ್ಚಿಸುತ್ತವೆ, ಅಷ್ಟೇ!

ಇಂತಹ ಹೋಲಿಕೆಗಳು ಯಾವಾಗಲೂ ನ್ಯಾಯವಾದವುಗಳು ಅಲ್ಲ.ಅದರಲ್ಲೂ ಮನುಷ್ಯ ಸಂಬಂಧಗಳಲ್ಲಿ ಹೇಗೆ ನೋಡಿದರೂ ಇಂತಹ ಹೋಲಿಕೆಗಳು ಸರಿಯಾದುವಲ್ಲ. ಆದರೂ, 'ಅವನು ನನಗಿಂತ ಯಾವ ರೀತಿಯಲ್ಲಿ ಉತ್ತಮ?' ಎಂದು ಕೇಳಿ ಜಗಳ ಮಾಡುವವವರಿದ್ದಾರೆ. 'ನನ್ನ ಸಂಬಂಧ ಬೇಕಾದರೆ ಆ ಸಂಬಂಧವನ್ನು ಮುರಿದುಕೊಂಡು ಬಾ' ಎಂದು ಆದೇಶಿಸುವವರೂ ಇದ್ದಾರೆ. ಈ ಕಾರಣದಿಂದಾಗಿ ಅನೇಕ ಜನರು ಮದುವೆಯ ಮೊದಲು ಒಂದು ಬಗೆಯ ಜೀವನ ಮತ್ತು ಮದುವೆಯ ನಂತರ ಬೇರೊಂದು ಬಗೆಯ ಜೀವನವನ್ನು ನಡೆಸಬೇಕಾಗುತ್ತದೆ.

ಸಂಬಂಧಗಳಲ್ಲಿ ಹೆಚ್ಚು ಚರ್ಚೆಯಾಗುವ ವಿಷಯವೆಂದರೆ, 'ತಾಯಿ ಅಥವಾ ಹೆಂಡತಿ? ಇವರಲ್ಲಿ ಯಾರು ಮುಖ್ಯ' ಎಂಬ ವಿಷಯ. ಇದು ಕೊನೆಯಿಲ್ಲದ ಚರ್ಚೆಯಾಗಿ ಮುಂದುವರಿಯುತ್ತದೆ. ಮ್ಯಾನೇಜ್‌ಮೆಂಟ್ ಕಾಲೇಜೊಂದರಲ್ಲಿ ಚರ್ಚಾ ಕೌಶಲ್ಯವನ್ನು ಹೆಚ್ಚಿಸಲು ಮತ್ತು ತಾರ್ಕಿಕವಾಗಿ ಮಾತನಾಡುವ ಕೌಶಲ್ಯವನ್ನು ಉತ್ತೇಜಿಸಲು ಒಂದು ತರಗತಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ನಡುವೆ ಒಂದು ಚರ್ಚೆಯನ್ನು ಏರ್ಪಡಿಸಿದರು. 'ತಾಯಿ, ಹೆಂಡತಿ – ಇಬ್ಬರಲ್ಲಿ ಯಾರು ಹೆಮ್ಮೆಗೆ ಅರ್ಹರಾದವರು' ಎಂಬುದು ಶೀರ್ಷಿಕೆ. ಕಾಲೇಜು ವಿದ್ಯಾರ್ಥಿಗಳಲ್ಲಿ ಯಾರು ಹೆಂಡತಿಯರ ಬಗ್ಗೆ ಮಾತನಾಡಲು ಸಾಧ್ಯ ಹೇಳಿ? ಅಮ್ಮನ ಬಗ್ಗೆ ಅಭಿಮಾನದ ಮಾತನಾಡಲು ಸಾಕಷ್ಟು ಮಂದಿ ಪೈಪೋಟಿಗಿಳಿದು ಹೆಸರು ಕೊಟ್ಟರು.

ಒಂದು ವಿಷಯದ ಕಡೆ ಮಾತ್ರ ಬಲಿಷ್ಠವಾಗಿರುವುದು ಆಟದಲ್ಲಿ ಆಸಕ್ತಿಕರವಾಗಿರುವುದಿಲ್ಲ ಮತ್ತು ಇಂತಹ ಚರ್ಚೆಯಲ್ಲೂ ಆಸಕ್ತಿ ಇರುವುದಿಲ್ಲ. ಆದ್ದರಿಂದ, ಪ್ರಾಧ್ಯಾಪಕರು ಕೆಲವು ವಿದ್ಯಾರ್ಥಿಗಳನ್ನು ವಿರೋಧವಾಗಿ ಮಾತನಾಡುವಂತೆ ಆಹ್ವಾನಿಸಿದರು. 'ಈ ಚರ್ಚೆಯಲ್ಲಿ ನಾವು ತಾಯಿಯ ಹೆಮ್ಮೆಯನ್ನು ಅಗೌರವಗೊಳಿಸಿದರೆ ಹೇಗೆ ಸಾರ್? ಅಲ್ಲದೆ ಹೆಂಡತಿಯನ್ನು ಕುರಿತು ಕೀಳಾಗಿ

ಮಾತನಾಡಿದರೆ ಮಾತ್ರವೇ ನಾವು ಗೆಲ್ಲಲು ಸಾಧ್ಯ. ಸೋತು ಹೋಗುವ ವಿಷಯದ ಬಗ್ಗೆ ನಾವು ಹೇಗೆ ಚರ್ಚೆ ಮಾಡಲು ಸಾಧ್ಯ ಸಾರ್?'ಎಂದು ಅವರು ಅದನ್ನು ನಿರಾಕರಿಸಿದರು. ಪ್ರಾಧ್ಯಾಪಕರು ಅಸಹಾಯಕರಾಗಿ ಅವರನ್ನು ವೀಕ್ಷಿಸಿದರು. 'ನೀವು ಸೋಲುತ್ತೀರಿ ಎಂಬುದು ನಿಮಗೆ ಗೊತ್ತಿದ್ದರೂ, ಹೆಸರಿಗಾದರೂ ಚರ್ಚೆ ನಡೆಯಬೇಕಲ್ಲವೇ? ಯಾರೂ ಈ ಬಗ್ಗೆ ಮಾತನಾಡಲು ಮುಂದೆ ಬರದಿದ್ದರೆ ಚರ್ಚಾಗೋಷ್ಠಿ ಹೇಗೆ ನಡೆಯಲು ಸಾಧ್ಯ?' ಎಂದು ಕೇಳಿದರು. ತಕ್ಷಣ ಒಬ್ಬ ವಿದ್ಯಾರ್ಥಿ ಎದ್ದ. 'ನಾನು ಭಾಗವಹಿಸುತ್ತೇನೆ ಸಾರ್! ಅಮ್ಮನ ಮಹಿಮೆಯ ಬಗ್ಗೆ ಎಷ್ಟು ಜನ ಬೇಕಾದರೂ ಮಾತನಾಡಲಿ. ಅವರ ಜೊತೆ ಏಕಾಂಗಿಯಾಗಿ ನಾನು ಚರ್ಚೆಗೆ ಸಿದ್ಧ' ಎಂದ. ತರಗತಿಯಲ್ಲಿದ್ದವರು ಅವನನ್ನು ನೋಡಿ ನಕ್ಕರು. ಕಾರಣ, ಅವನು ತನ್ನ ಸಹವರ್ತಿ ವಿದ್ಯಾರ್ಥಿಗಳೊಂದಿಗೆ ಮಾತನಾಡುವುದಕ್ಕೂಕೂಡ ಹಿಂಜರಿಯುತ್ತಿದ್ದ. 'ಇಂತಹವನು ವೇದಿಕೆ ಏರಿ ಮೈಕ್ ಹಿಡಿದು ಚರ್ಚೆ ಮಾಡುತ್ತಾನಾ? ಅದೂ ವಿರೋಧ ಪಕ್ಷದ ಪರವಾಗಿ!?' ಎಂದು ಅವರು ಅವನನ್ನು ಲೇವಡಿ ಮಾಡಿದರು. ಅಧ್ಯಾಪಕರಿಗೂ ಬೇರೆ ದಾರಿ ಇರಲಿಲ್ಲ. ಆ ವಿದ್ಯಾರ್ಥಿಯ ಹೆಸರನ್ನು ಬರೆದುಕೊಂಡರು.

ಚರ್ಚಾಗೋಷ್ಠಿಯ ದಿನ ಹಲವರು ಒಬ್ಬರ ನಂತರ ಒಬ್ಬರಂತೆ ಮೈಕ್ ಹಿಡಿದುಕೊಂಡು ಅಮ್ಮನ ಬಗ್ಗೆ ಅಭಿಮಾನದ ಮಾತುಗಳನ್ನು ಹೇಳಿದರು. ಅಮ್ಮನ ಸೆಂಟಿಮೆಂಟ್ ಯಾರಿಗೆ ತಾನೇ ಇಷ್ಟ ಆಗುವುದಿಲ್ಲ ಹೇಳಿ? ಅಮ್ಮನ ತ್ಯಾಗವನ್ನು ಪಟ್ಟಿಮಾಡಿದಾಗ ಚಪ್ಪಾಳೆ ಕಿವಿಗಡಚುತ್ತಿತ್ತು. ಅವರೆಲ್ಲರೂ ಹೆಂಡತಿಯರ ಸ್ವಭಾವವನ್ನು ಗೇಲಿ ಮಾಡಿದರು. ಹೆಂಡತಿಯ ಗುಣಗಳ ಬಗ್ಗೆ ಸಾಧ್ಯವಾದಷ್ಟೂ ಅವಹೇಳನಕರವಾಗಿ ಮಾತನಾಡಿದರು. ಸಭಿಕರಿಂದ ಜೋರಾಗಿ ನಗು ಮತ್ತು ಚಪ್ಪಾಳೆ ಬಂತು. 'ತಾಯಿಯೇ ಹೆಮ್ಮೆಗೆ ಅರ್ಹವಾದವಳು' ಎಂದು ತೀರ್ಪು ಪ್ರಕಟಿಸಲು ಮಧ್ಯಸ್ಥರು ಹಿಂಜರಿಯಬೇಕಿಲ್ಲ ಎಂಬಂತೆ ಅವರ ವಾದ ಮುಂದುವರೆಯಿತು.

ಕೊನೆಯದಾಗಿ ಆ ವಿದ್ಯಾರ್ಥಿ ಮಾತನಾಡಲು ವೇದಿಕೆಯನ್ನೇರಿದ. ಎಲ್ಲರೂ ಅವನನ್ನುಕನಿಕರದಿಂದ ನೋಡಿದರು. ಸೋಲುವ ಪಕ್ಷದ ಪ್ರತಿನಿಧಿಯಲ್ಲವೇ? ಆದರೆ ಅವನು ತನ್ನ ಬಗ್ಗೆ ಹಾಗೆ ಯೋಚಿಸಲಿಲ್ಲ. ಮೈಕ್ ಮುಂದೆ ನಿಂತಿದ್ದವನು 'ಹೆಂಡತಿಯ ಹೆಮ್ಮೆಯ ಬಗ್ಗೆ ಮಾತನಾಡಬೇಕು ಎಂಬುದಕ್ಕಾಗಿ ನಾನು ಅಮ್ಮನನ್ನು ಕುರಿತು ಒಂದೇ ಒಂದು ಪದ ಕೂಡ ಕೀಳಾಗಿ ಮಾತನಾಡುವುದಿಲ್ಲ. ಅದು ನ್ಯಾಯವೂ ಅಲ್ಲ. ಹೆಂಡತಿಯ ಬಗ್ಗೆ ಹೆಮ್ಮೆಯಿಂದ ಮಾತನಾಡುವುದಕ್ಕಾಗಿ ತಾಯಿಯನ್ನು ಕುರಿತು ಕೀಳಾಗಿ ಮಾತನಾಡಬಾರದು' ಎಂಬುದು ನನಗೆ ಗೊತ್ತು ಎಂದು ಅವನು ಮಾತುಗಳನ್ನು ಆರಂಭಿಸಿದ.

❖ ಜಗತ್ತಿನ ಮೊದಲ ಸಂಬಂಧ ರೂಪುಗೊಂಡದ್ದೇ ಪತಿ–ಪತ್ನಿಯರದ್ದು. ಪುರುಷ ಮತ್ತು ಮಹಿಳೆ ಪ್ರಪಂಚದ ಮೊದಲ ಸೃಷ್ಟಿಗಳು. ಕುಟುಂಬ ಎಂಬ ಸಂಘಟನೆಯನ್ನು ರೂಪಿಸಲು ಇವರು ಮನೆಯಲ್ಲಿ ಒಟ್ಟಿಗೆ ಸೇರಿ ಬದುಕಿದರು. ಆ ಮೊದಲ ಹೆಂಡತಿಯೇ ತಮ್ಮ ಮಕ್ಕಳನ್ನು ಹೆರುವ ಮೂಲಕ ಜಗತ್ತಿನ ಮೊದಲ ತಾಯಿಯೂ ಆದಳು. 'ಹೆಂಡತಿ' ಎಂಬ ಪ್ರತೀಕವಿರುವ ಆ ಮೊದಲ ಮಹಿಳೆಯೇ ಮನುಕುಲದ ಸೃಷ್ಟಿಗೆ ಕಾರಣ. ಹೀಗಾಗಿ ಜಗತ್ತಿನ ಎಲ್ಲ ಸಂಬಂಧಗಳಿಗೂ ಆಧಾರ ಪತಿ–ಪತ್ನಿಯರ ಸಂಬಂಧ.

❖ ಹೆಂಡತಿಯ ಸ್ಥಾನಮಾನವನ್ನು ಪಡೆದ ನಂತರವಷ್ಟೇಒಬ್ಬ ಮಹಿಳೆ ತಾಯಿಯ ಸ್ಥಾನವನ್ನು ಪಡೆಯುವುದು. ಒಳ್ಳೆಯ ತಾಯಿಯಾಗಲು ಒಬ್ಬ ಮಹಿಳೆ ಮೊದಲು ಒಳ್ಳೆಯ ಹೆಂಡತಿಯಾಗಬೇಕು.

❖ ಕುಟುಂಬದಲ್ಲಿ ಹಿರಿಯರು ಮರಣ ಹೊಂದಿದ ನಂತರ ಮಕ್ಕಳು ಅವರ ಫೋಟೋ ಇಟ್ಟು ಅದಕ್ಕೆ ಪೂಜೆ ಸಲ್ಲಿಸುತ್ತಾರೆ. ಆ ವ್ಯಕ್ತಿ ಯಾರೇ ಆಗಿದ್ದರೂ ಅವರ ಫೋಟೋ ಜೊತೆ ಅವರ ಹೆಂಡತಿಯ ಫೋಟೋವನ್ನು ಮಾತ್ರವೇ ಇಟ್ಟು ಪೂಜಿಸಲಾಗುತ್ತದೆ. ಬೇರೆ ಯಾವುದೇ ಸಂಬಂಧಕ್ಕೂ ಅಲ್ಲಿ ಅವಕಾಶ ಇಲ್ಲವೇ ಇಲ್ಲ!

❖ ಒಬ್ಬ ಅಪರಿಚಿತ ವ್ಯಕ್ತಿಗೆ ಹೆಂಡತಿಯಾಗಿ ಅವನ ಮನೆಗೆ ಬರುವ ಮಹಿಳೆ, ತನ್ನ ಪೋಷಕರನ್ನು, ತನ್ನ ಕುಟುಂಬವನ್ನು, ತಾನು ಹುಟ್ಟಿದ ಊರನ್ನು ಬಿಟ್ಟು ಬಂದು ಬೇರೆಲ್ಲೋ ವಾಸಿಸುತ್ತಾಳೆ. ಆ ಕುಟುಂಬದೊಂದಿಗೆ ಹೊಂದಿಕೊಂಡು ಬದುಕುತ್ತಾಳೆ. ನಾಳೆ ನಮ್ಮ ಸಹೋದರಿಯರು ಕೂಡ ಇದೇ ರೀತಿ ಇರುತ್ತಾರೆ. ಇದಕ್ಕಿಂತ ದೊಡ್ಡ ತ್ಯಾಗ ಇನ್ನೊಂದಿಲ್ಲ.

❖ ತಾಯಿಯ ಹೆಮ್ಮೆಯ ಬಗ್ಗೆ ಮಾತನಾಡುವವರೆಲ್ಲರೂ ನಮ್ಮ ತಾಯಿ ಗೆಲ್ಲಬೇಕು ಎಂದು ಭಾವಿಸುತ್ತಾರೆ. 'ತಾಯಿ' ಎಂದರೆ 'ನನ್ನ ತಾಯಿ' ಎಂದು ಭಾವಿಸುತ್ತಾರೆ ಮತ್ತು ಹೆಂಡತಿ ಎಂದರೆ 'ನನ್ನ ಭಾವಿ ಪತ್ನಿ' ಎಂದು ಅವರು ಭಾವಿಸುತ್ತಾರೆ. ನಾನು ಹಾಗೆಂದುಕೊಂಡು ಮಾತನಾಡುತ್ತಿಲ್ಲ. ನಾನು ಹೆಂಡತಿಯ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತಿರುವುದು, ನಿಮ್ಮೆಲ್ಲರ ತಂದೆಯಹೆಂಡತಿಯ ಬಗ್ಗೆ. ಹೆಂಡತಿಯಾಗಿಯೂ, ತಾಯಿಯಾಗಿಯೂ ತ್ಯಾಗ ಮಾಡುವವಳು ಅದೇ ಹೆಣ್ಣು!

ಆ ವಿದ್ಯಾರ್ಥಿ ಮಾತು ಮುಗಿಸಿದ ನಂತರ ಎದ್ದ ಚಪ್ಪಾಳೆ ನಿಲ್ಲಲಿಲ್ಲ. ಕೊನೆಯಲ್ಲಿ ಆತ ಚರ್ಚೆಯಲ್ಲಿ ಜಯ ಗಳಿಸಿದ್ದ! ●

ಶಿಕ್ಷಕರು, ಸಹ ವಿದ್ಯಾರ್ಥಿಗಳು, ಸ್ನೇಹಿತರು... ಈ ಮೂವರದ್ದೂ ನಮ್ಮ ಬದುಕನ್ನು ರೂಪಿಸುವಲ್ಲಿ ದೊಡ್ಡ ಪಾತ್ರ. ಈ ಮೂರು ಅದ್ಭುತ ವ್ಯಕ್ತಿಗಳ ಬಗ್ಗೆ ಇರುವ ಕಥೆಗಳು

ಹೆಮ್ಮೆಗೆ ಅರ್ಹರಾದ ಮೂವರು!

ವಿದ್ಯಾರ್ಥಿಯೊಬ್ಬ ತನ್ನ ಹಳೆಯ ಶಿಕ್ಷಕರನ್ನು ಸಮಾರಂಭವೊಂದರಲ್ಲಿ ಭೇಟಿಯಾದ. "ನಾನು ನಿಮ್ಮ ಹಳೆಯ ವಿದ್ಯಾರ್ಥಿ. ನೀವು ನನ್ನನ್ನು ಗುರುತು ಹಿಡಿದಿರಾ?" ಎಂದು ಆ ಯುವಕ ಕೇಳಿದ. ಗುರುಗಳು ಅವನನ್ನುನೋಡಿ ಹೇಳಿದರು: "ನನಗೆ ನೆನಪಿಲ್ಲ... ಪರವಾಗಿಲ್ಲ ಬಿಡಿ, ಅದಕ್ಕೇನು? ನಿಮ್ಮನ್ನು ಭೇಟಿಯಾದದ್ದು ನನಗೆ ತುಂಬಾ ಸಂತೋಷವಾಗಿದೆ. ನೀವು ಈಗ ಏನು ಮಾಡುತ್ತಿದ್ದೀರಿ?" ಎಂದು ಶಿಕ್ಷಕರು ಅವನನ್ನು ಕೇಳಿದರು. ಯುವಕ ಹೇಳಿದ: "ನಾನು ಶಿಕ್ಷಕ". "ನಿಮಗೆ ಶಿಕ್ಷಕರಾಗಲು ಯಾರು ಸ್ಫೂರ್ತಿ?" ಎಂದು ಆ ಶಿಕ್ಷಕರು ಅವನನ್ನು ಕೇಳಿದರು. "ನೀವೇ ಸಾರ್" ಎಂದ ಆತ. ಆ ಶಿಕ್ಷಕನಿಗೆ ಆಶ್ಚರ್ಯವಾಯಿತು. "ಅದು ಹೇಗೆ?" ಎಂದು ಕೇಳಿದರು.

"ನಾನು ನಿಮಗೆ ಒಂದು ಕಥೆ ಹೇಳುತ್ತೇನೆ, ಸರ್?" ಎಂದು ಆ ಯುವಕ ಶುರು ಮಾಡಿದ. "ಒಂದು ದಿನ ನನ್ನ ಸಹಪಾಠಿಯೊಬ್ಬ ದುಬಾರಿ ವಾಚ್ ಧರಿಸಿ ಶಾಲೆಗೆ ಬಂದ. ನಾನು ಅದನ್ನು ತೆಗೆದುಕೊಳ್ಳಲು ಬಯಸಿದೆ. ಊಟ ಮಾಡುವಾಗ ಅವನು ವಾಚ್ ಬಿಚ್ಚಿ ತನ್ನ ಜೇಬಿಗೆ ಹಾಕಿಕೊಂಡ.ನಾನು ಅದನ್ನು ಅವನಿಗೆ ತಿಳಿಯದಂತೆ ತೆಗೆದುಕೊಂಡು ಬಿಟ್ಟೆ. ಊಟ ಮುಗಿಸಿ ತರಗತಿಯೊಳಗೆ ಬರುತ್ತಿದ್ದಂತೆ ಅವನು ತನ್ನ ಜೇಬಿಗೆ ಕೈ ಹಾಕಿ ನೋಡಿ, ತನ್ನ ವಾಚ್ ಕಾಣೆಯಾಗಿರುವುದನ್ನು ಅರಿತುಶಿಕ್ಷಕರಿಗೆ ದೂರು ನೀಡಿದ.

ಶಿಕ್ಷಕರು ತಕ್ಷಣ ತರಗತಿಯ ಬಾಗಿಲು ಮುಚ್ಚಿದರು. ನನಗೆ ತುಂಬಾ ಅವಮಾನ ಎನ್ನಿಸುತ್ತಿತ್ತು. ಪರಿಶೀಲಿಸಿದರೆ ಖಂಡಿತಾ ಸಿಕ್ಕಿಬೀಳುತ್ತೇನೆ ಎಂದು ಭಯವಾಯಿತು. ಆಗ ಶಿಕ್ಷಕರು, 'ವಿದ್ಯಾರ್ಥಿಗಳೇ, ಎಲ್ಲರೂ ಸಾಲಾಗಿ ನಿಲ್ಲಿರಿ. ಆದರೆ ಎಲ್ಲರೂ ಕಣ್ಣು ಮುಚ್ಚಿ ನಿಲ್ಲಬೇಕು' ಎಂದು ಕಟ್ಟುನಿಟ್ಟಾಗಿ ಹೇಳಿದರು. ಶಿಕ್ಷಕರು ಸ್ವತಃ ತಾವೇಸಾಲಾಗಿ ನಿಂತಿದ್ದ ಎಲ್ಲಾ ವಿದ್ಯಾರ್ಥಿಗಳ ಜೇಬುಗಳನ್ನು ಪರಿಶೀಲಿಸಿದರು. ಅವರು ನನ್ನ ಜೇಬಿಗೆ ಕೈ ಹಾಕಿ ವಾಚ್ ತೆಗೆದುಕೊಂಡರು. ಆದರೆ ವಿದ್ಯಾರ್ಥಿಗಳೆಲ್ಲ ಕಣ್ಣು ಮುಚ್ಚಿ ನಿಂತಿದ್ದುದರಿಂದ ಯಾರೂ ಅದನ್ನು ನೋಡಲಿಲ್ಲ. ನಂತರ ಅವರು ಆ ಗಡಿಯಾರವನ್ನು ಆ ವಿದ್ಯಾರ್ಥಿಗೆ ನೀಡಿದರು. ಆದರೆ ಅದರ ಬಗ್ಗೆ ನನ್ನ ಬಳಿ ಒಂದೇ ಒಂದು ಮಾತು ಕೂಡ ಕೇಳಲಿಲ್ಲ. ಬೇರೆಯವರ ಬಳಿ ದೂರು ಕೂಡ ಹೇಳಲಿಲ್ಲ.

ಆ ಶಿಕ್ಷಕರು ನೀವೇ. ನೀವು ನನ್ನನ್ನು ಕಳ್ಳ, ಮೋಸಗಾರ ಎಂದು ಬೈಯ್ಯುವುದಕ್ಕೆ ಬದಲಾಗಿ ನನ್ನನ್ನು ಕ್ಷಮಿಸಿದಿರಿ.

ನನ್ನ ಮರ್ಯಾದೆಯನ್ನೂ ಉಳಿಸಿದಿರಿ. 'ತಪ್ಪು ಮಾಡಿದವರನ್ನು ಶಿಕ್ಷಕರು ಹೀಗೂ ಕ್ಷಮಿಸಬಲ್ಲರೇ?' ಎಂದು ನನಗೆ ಆಶ್ಚರ್ಯವಾಯಿತು. ನನ್ನ ಜೀವನದಲ್ಲಿ ನಾನೂ ಇದನ್ನೇಮಾಡಲು ಬಯಸಿದೆ. ಅದಕ್ಕೇ ನಾನೂ ಟೀಚರ್ ಆದೆ. ಈಗ ನಿಮಗೆ ನನ್ನ ಗುರುತು ಸಿಕ್ಕಿತೇ?' ಎಂದು ಆ ಯುವಕ ಕೇಳಿದ.

'ಇಲ್ಲ ಈಗಲೂ ನನಗೆ ನಿನ್ನ ನೆನಪಾಗುತ್ತಿಲ್ಲ. ಏಕೆಂದರೆ ವಿದ್ಯಾರ್ಥಿಗಳು ಕಣ್ಣು ಮುಚ್ಚಿಕೊಂಡಿದ್ದಂತೆ ನಾನೂ ಅಂದು ಕಣ್ಣು ಮುಚ್ಚಿಕೊಂಡಿದ್ದೆ. ಆದುದರಿಂದ ಆ ವಿದ್ಯಾರ್ಥಿ ಯಾರೆಂಬುದು ನನಗೂ ತಿಳಿಯದು' ಎಂದು ಶಿಕ್ಷಕರು ಹೇಳಿದರು!

ಶಿಕ್ಷಕರೊಬ್ಬರು ತಮ್ಮ ವಿದ್ಯಾರ್ಥಿನಿಯರಿಗೆ ಪರೀಕ್ಷೆಯನ್ನು ಏರ್ಪಡಿಸಿದರು. ಮೊದಲ ಅಂಕ ಪಡೆದ ವಿದ್ಯಾರ್ಥಿಗೆ ಹೊಸ ಶೂ ನೀಡುವುದಾಗಿ ಅವರು ಘೋಷಿಸಿದರು. ಎಲ್ಲ ವಿದ್ಯಾರ್ಥಿಗಳೂ ಉತ್ಸಾಹದಿಂದ ಪರೀಕ್ಷೆ ಬರೆದರು. ಶಿಕ್ಷಕರು ಉತ್ತತ ಪತ್ರಿಕೆಗಳನ್ನು ಪರೀಕ್ಷಿಸುವಾಗ ಎಲ್ಲರೂ ಸರಿ ಉತ್ತರ ಬರೆದು ಮೊದಲ ಸ್ಥಾನ ಪಡೆದಿದ್ದರು.

ಇವರಲ್ಲಿ ಯಾರಿಗೆ ಉಡುಗೊರೆ ಕೊಡಬೇಕು ಎಂಬ ಗೊಂದಲ ಅವರಿಗೆ. ಎಲ್ಲಾ ವಿದ್ಯಾರ್ಥಿಗಳೂ ತಮ್ಮ ತಮ್ಮಹೆಸರನ್ನು ಚೀಟಿಯಲ್ಲಿ ಬರೆದು ಪೆಟ್ಟಿಗೆಯಲ್ಲಿ ಹಾಕುವಂತೆ ಹೇಳಿದರು. ಎಲ್ಲರೂ ಚೀಟಿ ಹಾಕಿದ ಮೇಲೆ, ಶಿಕ್ಷಕರು ಪೆಟ್ಟಿಗೆಯನ್ನು ಅಲ್ಲಾಡಿಸಿ ಒಂದು ಚೀಟಿಯನ್ನು ತೆಗೆದರು. ಅದರ ಮೇಲೆ 'ಸುಧಾ' ಎಂಬ ವಿದ್ಯಾರ್ಥಿನಿಯ ಹೆಸರಿತ್ತು. ಶಿಕ್ಷಕರಿಗೂ ಆ ಹೆಸರನ್ನು ನೋಡಿ ಸಮಾಧಾನವಾಯಿತು. ಸುಧೆ ತನ್ನ ತರಗತಿಯಲ್ಲೇ ಅತ್ಯಂತ ಬಡ ವಿದ್ಯಾರ್ಥಿನಿ. ಅವಳು ಬೂಟುಗಳಿಲ್ಲದೆ ಬರಿಗಾಲಿನಲ್ಲಿ ಶಾಲೆಗೆ ಬರುತ್ತಿದ್ದಳು. ಸರಿಯಾದ ವ್ಯಕ್ತಿಗೆ ಉಡುಗೊರೆ ಸಿಕ್ಕಿದೆ ಎಂದು ಅವರು ತೃಪ್ತ ಭಾವವನ್ನು ಅನುಭವಿಸಿದರು. ಆ ವಿದ್ಯಾರ್ಥಿಯೂ ತುಂಬಾ ಸಂತೋಷಪಟ್ಟಳು.

ತರಗತಿ ಮುಗಿದ ನಂತರ ಶಿಕ್ಷಕರ ವಿಶ್ರಾಂತಿ ಕೋಣೆಗೆ ಬಂದ ಶಿಕ್ಷಕಿ ತನ್ನ ಸಹ ಶಿಕ್ಷಕರಿಗೆ ಸಂತೋಷದಿಂದ ಈ ವಿಷಯ ತಿಳಿಸಿದರು. ಅವರು ಅನುಮಾನಗೊಂಡು ಬಾಕ್ಸ್‌ನಲ್ಲಿದ್ದ ಇತರ ಚೀಟಿಗಳನ್ನು ತೆರೆದು ನೋಡಿದರು. ವಿದ್ಯಾರ್ಥಿನಿಯರೆಲ್ಲರೂ ತಮ್ಮ ಹೆಸರಿನ ಬದಲು ಸುಧಾಳ ಹೆಸರನ್ನು ಬರೆದಿದ್ದರು. ತನ್ನ ವಿದ್ಯಾರ್ಥಿಗಳೆಲ್ಲರೂ ಇತರರ ಬಗ್ಗೆ ಕಾಳಜಿಯುಳ್ಳವರು ಎಂದು ಭಾವಿಸಿ ಆಕೆ ಸಂತೋಷದ ಕಣ್ಣೀರು ಸುರಿಸಿದಳು.

ರಮೇಶ್ ತನ್ನ ಸ್ನೇಹಿತನ ಮನೆಗೆ ಔತಣಕ್ಕೆ ಹೋಗಿದ್ದ. ಅವನ ಜೊತೆ ಶಾಲೆಗೆ ಹೋಗುತ್ತಿದ್ದ ಅವನ ಮಗನೂ ಬಂದಿದ್ದ. ಊಟಕ್ಕೆ ಮೊದಲು ಸೂಪ್ ನೀಡಲಾಯಿತು. ಅವನ ಕೈಯಲ್ಲಿದ್ದ ಸೂಪ್ ಕಪ್ ಜಾರಿ ಕೆಳಗೆ ಬಿದ್ದು ಒಡೆದು ಹೋಯಿತು.

ಶಬ್ದ ಕೇಳಿ ಮಲಗುವ ಕೋಣೆಯಿಂದ ಸ್ನೇಹಿತ ಹೊರಗೋಡಿ ಬಂದು ನೋಡಿದ. ಒಡೆದ ಬಟ್ಟಲನ್ನು ನೋಡಿದ ಅವನು, "ನಾನು ಈ ಸುಂದರವಾದ ಕಪ್ ಅನ್ನು ಚೀನಾದಿಂದ ಖರೀದಿಸಿ ತಂದಿದ್ದೆ. ಅದು ಹೇಗೆ ಒಡೆದುಹೋಯಿತು?" ಎಂದು ಬೇಸರದಿಂದ ಕೇಳಿದ. ಕೈ ಜಾರಿ ಬಿದ್ದು ಒಡೆದು ಹೋಯಿತು' ಎಂದು ರಮೇಶ್ ಹಿಂಜರಿಯುತ್ತಲೇ ಹೇಳಿದ. 'ಪರವಾಗಿಲ್ಲ ಬಿಡಿ' ಎಂದು ಗೆಳೆಯ ಸಮಾಧಾನ ಹೇಳಿದ.

ಪಾರ್ಟಿ ಮುಗಿಸಿ ಮನೆಗೆ ವಾಪಸಾಗುತ್ತಿದ್ದಾಗ ಮಗ ರಮೇಶ್ ತಂದೆಯನ್ನು ಕೇಳಿದ. "ನಿಮ್ಮ ಕೈ ಆ ಕಪ್ ಅನ್ನು ಮುಟ್ಟಲೇ ಇಲ್ಲ, ಅಪ್ಪ! ಆದರೂ ನೀವೇಕೆ ತಪ್ಪನ್ನು ಒಪ್ಪಿಕೊಂಡಿರಿ?' ಎಂದು.

'ನಿಜ. ಆ ಕಪ್ ಅನ್ನು ಅಲ್ಲಿ ತಂದಿಟ್ಟದ್ದು ನನ್ನ ಸ್ನೇಹಿತನ ಮಗಳು. ಅವಳು ಅದನ್ನು ಸರಿಯಾಗಿ ಮೇಜಿನ ಮೇಲೆ ಇಡದೇ ಇದ್ದುದರಿಂದ ಅದು ಜಾರಿ ಕೆಳಗೆ ಬಿದ್ದು ಒಡೆದು ಹೋಯಿತು. ಅದನ್ನು ಹೇಳಿದರೆ ಖಂಡಿತವಾಗಿಯೂ ಆತ ಮಗಳ ಮೇಲೆ ಕೋಪ ಮಾಡಿಕೊಳ್ಳುತ್ತಿದ್ದ. ಆ ನಂತರ ಅವರ ಮಗಳಿಗೆ ನನ್ನನ್ನು ಕಂಡರೆ ಯಾವಾಗಲೂ ಇಷ್ಟವಾಗುವುದೇ ಇಲ್ಲ. ಈ ಕಾರಣದಿಂದಾಗಿ ನಿಧಾನವಾಗಿ ನಮ್ಮಿಬ್ಬರ ಸ್ನೇಹದಲ್ಲಿ ಕೂಡ ಬಿರುಕು ಮೂಡಲು ಆರಂಭಿಸುತ್ತದೆ. ಸಂಬಂಧಗಳು ಹಳಸದಂತೆ ನೋಡಿಕೊಳ್ಳಲು ಇಂತಹ ಸಣ್ಣ ಪುಟ್ಟ ಸುಳ್ಳುಗಳು ಬೇಕು. ಸಂಬಂಧಗಳನ್ನು ಗೌರವಿಸುವುದು ಹೆಮ್ಮೆಯ ವಿಷಯ' ಎಂದು ಅಪ್ಪ ಹೇಳಿದರು.

●

ಬಿಳುಪು

ಭಾವನೆಗಳು

ಸಂಚಿಕೆ 7 ಸಂಪುಟ 12

ಮೇ 2025

ಪ್ರಕಾಶಕರು ಮತ್ತು ಪ್ರಧಾನ ಸಂಪಾದಕರು

ಕೆ.ಆರ್. ನಾಗರಾಜನ್

ಲೇಖಕರು

ತ.ಸೆ. ಜ್ಞಾನವೇಲ್

ಗೌರವ ಸಂಪಾದಕರು ಮತ್ತು
ಕನ್ನಡಾನುವಾದ

ಡಾ. ತಮಿಳ್ ಸೆಲ್ವಿ
ಎಂ.ಎ., ಪಿಎಚ್.ಡಿ., ಡಿ.ಲಿಟ್.,
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ.

ಪುಸ್ತಕ ರಚನೆ ಮತ್ತು ವಿನ್ಯಾಸ
ತರು ಮೀಡಿಯಾ (ಪ್ರೈ) ಲಿ.,
ಎ2, ನೆಲಮಹಡಿ,
ಸಂ:110, ಟ್ರಿನಿಟಿ ಕಾಂಪ್ಲೆಕ್ಸ್,
4ನೇ ಅವೆನ್ಯೂ, ಅಶೋಕ್ ನಗರ್,
ಚೆನ್ನೈ– 83.
ದೂರವಾಣಿ: 9952920801

ಈ ಸಂಚಿಕೆಯಲ್ಲಿರುವ ಯಾವುದೇ ಭಾಗವನ್ನಾಗಲೀ ವಿಷಯಗಳನ್ನಾಗಲೀ ಸಂಪಾದಕರ ಲಿಖಿತ ಪೂರ್ವ ಅನುಮತಿ ಪಡೆಯದೆ ಮರುಪ್ರಕಟಣೆ ಮಾಡುವುದಾಗಲೀ, ಅಂತರ್‌ಜಾಲ ತಾಣಗಳಲ್ಲಿ ಪುನರ್‌ದಾಖಲಿಸುವುದಾಗಲೀ ಮಾಹಿತಿ ಹಕ್ಕು ಕಾನೂನು ಬಾಹಿರ ಪ್ರಕ್ರಿಯೆಯಾಗಿರುತ್ತದೆ.

Published by
K.R. NAGARAJAN,
Published from
10, Sengunthapuram, Mangalam Road,
TIRUPUR - 641 604.
Ph: 0421-4304106

ಹೆಮ್ಮೆಯ ನುಡಿಗಳು!

- ನೀವು ಹೆಚ್ಚು ಮಾತನಾಡಿದರೆ ನಿಮ್ಮ ಸಂಯಮವನ್ನು ಕಳೆದುಕೊಳ್ಳುತ್ತೀರಿ. ಅಹಂಕಾರದಿಂದ ಮಾತನಾಡಿದರೆ ಪ್ರೀತಿಯನ್ನು ಕಳೆದುಕೊಳ್ಳುತ್ತೀರಿ. ಕೋಪದಿಂದ ಮಾತನಾಡಿದರೆ ಚಾರಿತ್ರ್ಯ ಕಳೆದುಕೊಳ್ಳುತ್ತೀರಿ. ನೀವು ಹೆಚ್ಚು ಹೊತ್ತು ಮಾತನಾಡಿದರೆ ನಿಮ್ಮ ಹೆಸರನ್ನು ಕಳೆದುಕೊಳ್ಳುತ್ತೀರಿ. ನೀವು ಹೆಮ್ಮೆಯಿಂದ ಮಾತನಾಡಿದರೆ, ಭಗವಂತನ ಪ್ರೀತಿಯನ್ನು ಕಳೆದುಕೊಳ್ಳುತ್ತೀರಿ.
- ನಮ್ಮ ಅತಿ ದೊಡ್ಡ ಹೆಮ್ಮೆ ನಾವು ಕೆಳಗೆ ಬೀಳಲೇ ಇಲ್ಲ ಎಂದು ಹೇಳಿಕೊಳ್ಳುವುದರಲ್ಲಿಲ್ಲ, ಬಿದ್ದರೂ ಮತ್ತೆ ಮೇಲೇಳುವುದರಲ್ಲಿದೆ!
- ಮರ ಹತ್ತಲಾರದವನು ಮಾತ್ರವೇ, 'ನಾನು ಯಾವತ್ತೂ ಮರದಿಂದ ಬಿದ್ದಿಲ್ಲ' ಎಂದು ಜಂಭ ಕೊಚ್ಚಿಕೊಳ್ಳಲು ಸಾಧ್ಯ!
- ಆಯುಷ್ಯದ ಹೆಮ್ಮೆ ಹೆಚ್ಚು ವರ್ಷ ಜೀವಿಸುವುದರಲ್ಲಿಲ್ಲ, ಜೀವನ ವಿಧಾನದಲ್ಲಿ ಅಡಗಿದೆ.
- ನೀವು ಮಾಡುವ ಕೆಲಸದ ಬಗ್ಗೆ ಬಹಳ ಹೆಮ್ಮೆಪಡಿರಿ. ಯಾವ ಸಂದರ್ಭದಲ್ಲೂ ಆ ಹೆಮ್ಮೆಯನ್ನು ಬಿಟ್ಟು ಕೊಡಬೇಡಿ. ನಿಮ್ಮ ಪ್ರಗತಿಯು ತಾನಾಗಿಯೇ ನಡೆಯುತ್ತದೆ.
- ಗತಕಾಲದ ಬಗ್ಗೆ ಯೋಚಿಸಬೇಡಿ. ಅದು ಭವಿಷ್ಯದ ಕನಸುಗಳನ್ನು ನಾಶಪಡಿಸುತ್ತದೆ.
- ಅಧಿಕಾರ ಅಥವಾ ಹುದ್ದೆಯು ನಿಮಗೆ ಹೆಮ್ಮೆಯನ್ನು ನೀಡುವ ಬದಲು, ನೀವು ಅದಕ್ಕೆ ಹೆಮ್ಮೆಯನ್ನು ಸೇರಿಸಬೇಕು.
- ನಿಮ್ಮನ್ನು ಯಾರೊಂದಿಗೂ ಹೋಲಿಸಿಕೊಂಡು ಕೀಳು ಭಾವನೆ ಅನುಭವಿಸುವುದು ಬೇಡ. ನೀವು ನೀವಾಗಿಯೇ ಇರುವುದಕ್ಕಾಗಿ ಹೆಮ್ಮೆ ಪಡಿ. ದೇವರು ನಿಮ್ಮನ್ನು ಸೃಷ್ಟಿಸಿದ್ದು ಇದಕ್ಕಾಗಿಯೇ ಎಂದು ತಿಳಿಯಿರಿ.
- ನಾವು ಬದುಕುತ್ತಿರುವ ಊರು, ನಮ್ಮ ದೇಶದ ಬಗ್ಗೆ ಹೆಮ್ಮೆ ಪಡಬೇಕು. ನಮ್ಮ ಜೀವನ, ಆ ಊರು ಮತ್ತು ದೇಶವನ್ನು ಹೆಮ್ಮೆ ಪಡಿಸುವಂತೆ ಇರಬೇಕು.
- ಜೀವನದಲ್ಲಿ ಹಿಂತಿರುಗಿ ನೋಡಿದಾಗ, ಯಾರೂ ತಾವು ತೆಗೆದು-ಕೊಂಡ ನಿರ್ಧಾರಗಳ ಬಗ್ಗೆ ಪ್ರತಿಶತ ನೂರಕ್ಕೆ ನೂರರಷ್ಟು ಹೆಮ್ಮೆಪಡುವುದಿಲ್ಲ. ಆದರೆ ತಾವು ಮಾಡಿದ ತಪ್ಪುಗಳಿಂದ ಪಾಠ ಕಲಿತು ಸರಿಯಾದ ದಾರಿ ಹಿಡಿದವರು ಅದರ ಬಗ್ಗೆ ಹೆಮ್ಮೆ ಪಡಬಹುದು.
- ಪ್ರತಿಯೊಬ್ಬರೂ ತಮ್ಮ ಪರಂಪರೆ ಮತ್ತು ಸಂಪ್ರದಾಯಗಳ ಬಗ್ಗೆ ಹೆಮ್ಮೆ ಪಡಬೇಕು. ಅವುಗಳಿಲ್ಲದೆ ಹೋದರೆ ನಮಗೆ ಅಭಿವೃದ್ಧಿ ಎಂಬುದೇ ಇಲ್ಲ.
- ಮತ್ತೆ ಮತ್ತೆ ಯೋಚಿಸಿ ಯೋಚಿಸಿ ಆ ಕುರಿತು ಹೆಮ್ಮೆಪಡಬಹುದಾದ ವಿಷಯಗಳನ್ನು ಸತತವಾಗಿ ಮಾಡುವುದರಿಂದ ಯಶಸ್ಸು ಸಿದ್ಧಿಸುತ್ತದೆ.
- ಬುದ್ಧಿವಂತ ವ್ಯಕ್ತಿಯು ತನ್ನ ಬುದ್ಧಿವಂತಿಕೆಯ ಬಗ್ಗೆ ಸ್ವಪ್ರಶಂಸೆ ಮಾಡಿಕೊಳ್ಳಬಾರದು. ಅದು, ಒಬ್ಬ ಖೈದಿ. 'ಜೈಲಿನಲ್ಲಿ ನನ್ನ ಸೆಲ್ ಎಷ್ಟು ದೊಡ್ಡದು ಗೊತ್ತಾ?' ಎಂದು ಬಡಾಯಿ ಕೊಚ್ಚಿಕೊಳ್ಳುವಂತಿರುತ್ತದೆ.
- ಎಲ್ಲರೂ ಕೆಲಸ ಮಾಡುತ್ತಾರೆ. ಆದರೆ 'ಈ ಕೆಲಸ ಮಾಡಲು ನನಗೆ ಹೆಮ್ಮೆ ಇದೆ' ಎಂದು ಭಾವಿಸುವವರು ಗೆಲ್ಲುತ್ತಾರೆ.
- ಖ್ಯಾತಿಯ ಉತ್ತುಂಗದಲ್ಲಿ ಬದುಕುವುದು ತೃಪ್ತಿ ದೊರಕುವುದಿಲ್ಲ. ಹೆತ್ತವರು ಮತ್ತು ಕುಟುಂಬದವರು ಹೆಮ್ಮೆ ಪಡುವಂತಹ ಜೀವನ ನಡೆಸುವುದರಿಂದ ಸಾರ್ಥಕತೆ ದೊರಕುತ್ತದೆ.
- ನೀವು ವಿಫಲರಾದರೂ, ಮಾಡುವ ಕೆಲಸದ ಬಗ್ಗೆ ಹೆಮ್ಮೆ ಕಳೆದುಕೊಳ್ಳಬೇಡಿ. ಅದು ಮುಂದಿನ ಯಶಸ್ಸಿಗೆ ಕಾರಣವಾಗಿರುತ್ತದೆ.
- ಜೀವನದಲ್ಲಿ ನಾವು ನಡೆಸುವ ಹೋರಾಟಗಳೇ ನಮ್ಮನ್ನು ಹೆಮ್ಮೆಯ ಮನುಷ್ಯರನ್ನಾಗಿಸಿ ನಮ್ಮನ್ನು ಪರಿಪೂರ್ಣವಾಗಿಸುತ್ತವೆ.
- ನೀವು ಸಾಗಬೇಕಾದ ದಾರಿ ಇನ್ನೂ ಬಹಳ ದೂರವಿರಬಹುದು. ಆದರೆ ನೀವು ಇದುವರೆಗೆ ನಡೆದು ಬಂದಿರುವ ದೂರದ ಬಗ್ಗೆ ಹೆಮ್ಮೆ ಪಡಿ. ಅದು ನಿಮ್ಮನ್ನು ಇನ್ನೂ ಪ್ರಯಾಣಿಸಲು ಉತ್ಸುಕರಾಗುವಂತೆ ಮಾಡುತ್ತದೆ.
- ಬಲಶಾಲಿಯಾಗಿರಿ, ಆದರೆ ಅಸಭ್ಯವಾಗಿ ವರ್ತಿಸಬೇಡಿ. ಕರುಣಾಮಯಿಯಾಗಿರಿ, ಆದ-ರೆ ದುರ್ಬಲರಾಗಬೇಡಿ. ಹೆಮ್ಮೆಯಿಂದಿರಿ, ಆದರೆ ಇತರರನ್ನು ಗೇಲಿ ಮಾಡಬೇಡಿ.
- ನೀವು ಇಲ್ಲಿಯವರೆಗೆ ಸಾಧಿಸಿದ ಎಲ್ಲದರ ಬಗ್ಗೆ ಹೆಮ್ಮೆಪಡಿರಿ. ಅದು ನಿಮಗೆ ಇನ್ನೂ ಅನೇಕ ವಿಷಯಗಳಿಗೆ ಮಾರ್ಗದರ್ಶನ ನೀಡುತ್ತದೆ. ●



The Brand Trust Report - India Study 2021
Power of Trust
India's Most Trusted
Dhotis Brands
RAMRAJ ©
LITTLE STARS ®
KIDS DHOTIS • SHIRTS • KURTA
Available at Ramraj Showrooms & All leading Textile Shops | Shop Online at www.ramrajcotton.in

Culture India™
TRADITIONAL KURTA • DHOTIS
BY
RAMRAJ©
Rooted in Culture. Defined by Style.
Experience the seamless blend of heritage and contemporary style with Ramraj's Kurta and Dhoti/Pyjama collection.
The Brand Trust Report - India Study 2021
Power of Trust
India's Most Trusted Dhotis Brands
Available at Ramraj Showrooms & All leading Textile Shops | Shop Online at www.ramrajcotton.in

RAMRAJ ©
COTTON
DHOTIS • SHIRTS
Pride in Every Thread.
Experience the timeless elegance of Ramraj White Shirts & Dhotis, where tradition meets effortless style. Woven from the finest fabrics for unmatched comfort reflecting the pride of heritage with a modern flair. Wear it with confidence. Wear it with pride.
Available at Ramraj Showrooms & All leading Textile Shops | Shop Online at www.ramrajcotton.in


RAMRAJ
lagnaa
PURE SILK DHOTIS • SHIRTS
SCAN QR CODE
FOR STORE LOCATION
The Brand Trust Report - India Study 2021
Power of Trust
India's Most Trusted
Dhotis Brands
Available at Ramraj Showrooms & All leading Textile Shops | Shop Online at www.ramrajcotton.in

ನಿಮ್ಮ ಮನೆಗೇ ಬರಬೇಕೇ?

ಬಿಳುಪು

ಚಂದಾದಾರರಾಗಿ!

'ಉನ್ನತವಾಧ ಭಾವನೆಗಳು ಈ ಜಗತ್ತಿನಾದ್ಯಂತ ಹೋಗಿ ಸೇರಬೇಕು' ಎನ್ನುವ ಉನ್ನತವಾದ ದೃಷ್ಟಿಯಿಂದ ಮಹತ್ವಪೂರ್ಣವಾದ ಲೇಖನಗಳನ್ನು ನಿರಂತರವಾಗಿ ಪ್ರಕಟಿಸುತ್ತಿದೆ 'ಬಿಳುಪು' ಮಾಸಿಕ ಸಂಚಿಕೆ. ಈ ತಿಂಗಳ ವಿಶೇಷ ಸಂಚಿಕೆಯು ಪ್ರತಿಯೊಂದು ಕುಟುಂಬದಲ್ಲೂ ರಕ್ಷಿಸಿಡಬೇಕಾದ ಬೊಕ್ಕಸವಾಗಿದೆ.

ವಾರ್ಷಿಕ ಚಂದಾ ರೂ. 200
ದ್ವೈವಾರ್ಷಿಕ ಚಂದಾ ರೂ. 380

ಚೆಕ್/ಡಿಡಿ ಮೂಲಕ ಹಣ ಸಂದಾಯ ಮಾಡಬಹುದು. **VENMAII** ಎನ್ನುವ ಹೆಸರಿನಲ್ಲಿ ಚೆಕ್/ಡಿಡಿ ಕಳಿಸಬಹುದು. ಹಿಂಭಾಗದಲ್ಲಿ ನಿಮ್ಮ ಹೆಸರು, ವಿಳಾಸ ಬರೆದಿರಬೇಕು.

ಇಲ್ಲವೇ

VENMAII ಬ್ಯಾಂಕ್ ಖಾತೆ (A/C No:1809135000000299 Karur Vysya Bank, Tirupur SR Nagar Branch - IFSC: KVBL0001809) ಗೆ ಹಣ ಸಂದಾಯ ಮಾಡಿ, ಅದರ ಸ್ವೀಕೃತಿ ಪತ್ರದ ನಕಲು ಪ್ರತಿಯನ್ನು ಕಳಿಸಿ ಕೊಡಬೇಕು.

- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.
- ಎಲ್ಲಾ ರಾಮ್‌ರಾಜ್ ಷೋರೂಮ್‌ಗಳಲ್ಲೂ ಚಂದಾ ಕಟ್ಟಬಹುದು.

ವಿಳಾಸ : Bilupu
Ramraj V tower
10, Sengundapuram, Mangalam Road
Thirupur 641604.
Ph. 0421-4304106, 9842274137
email: venmaii@ramrajcotton.net

ಚಂದಾ ಸಲ್ಲಿಸಲೂ, ಒಟ್ಟಾಗಿ 'ಬಿಳುಪು' ಸಂಚಿಕೆಗಳನ್ನು ಕೊಳ್ಳಲೂ ಈ ಸಂಖ್ಯೆಯನ್ನು ಸಂಪರ್ಕಿಸಿ.

ಫೋನ್ : 0421-4304106, 9842274137.

ಒಂದೇ ನಿಮಿಷದಲ್ಲಿ ಬಿಳುಪು ಚಂದಾದಾರರಾಗಬಹುದು!

ನಿಮ್ಮ ಚಂದಾ ಹಣವನ್ನು PhonePe G Pay Net transfer ಮೂಲಕವೂ ಸಲ್ಲಿಸಬಹುದು.

UPI ಪರಿವರ್ತನೆಯ ಮೂಲಕವೂ ಮೊಬೈಲ್ ಫೋನ್ ನಲ್ಲಿ ಬಿಳುಪು ಸಂಚಿಕೆಯ ಬ್ಯಾಂಕ್ ಖಾತೆಗೆ ಚಂದಾ ಹಣವನ್ನು ಸಲ್ಲಿಸಬಹುದು. ಬಿಳುಪು UPI id: kvbupiqr.75626@kvb

Bharat QR code ಅನುಕೂಲವಿರುವ ಮೊಬೈಲ್ ಬ್ಯಾಂಕಿಂಗ್ ಆಪ್ ಇರುವವರು, ಅದರಲ್ಲಿ ಇಲ್ಲಿರುವ ಬಿಳುಪು ಖಾತೆಯ QR code ಅನ್ನು ಸ್ಕ್ಯಾನ್ ಮಾಡಿ ಚಂದಾ ಸಲ್ಲಿಸಬಹುದು.

ಹಣ ಸಂದಾಯ ಮಾಡಿರುವುದಕ್ಕೆ ಸಂಬಂಧಿಸಿದ ಬ್ಯಾಂಕಿನ ಮಾಹಿತಿಯನ್ನು Forward ಮಾಡಿರಿ.

ಜೊತೆಗೆ ನಿಮ್ಮ ಪೂರ್ಣ ವಿಳಾಸವನ್ನು ದೂರವಾಣಿ ಸಂಖ್ಯೆಯ ಜೊತೆಗೆ ವಾಟ್ಸ್ ಆಪ್ ಮಾಡಿ. ದೂರವಾಣಿ ಸಂಖ್ಯೆ 98422 74137.

ಬ್ಯಾಂಕ್ ಖಾತೆಯ ವಿವರ Venmaii
A/C No: 1809135000000299
Karur Vysya Bank,Tirupur SR Nagar Branch
IFSC Code: KVBL0001809.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ

(ಆರನೇ ತರಗತಿಯ ನಂತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ರಿಯಾಯಿತಿ ಲಭ್ಯ. ಚಂದಾ ಹಣ ಪಾವತಿಸುವಾಗ, ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು).

ವಾರ್ಷಿಕ ಚಂದಾ	ದ್ವೈವಾರ್ಷಿಕ ಚಂದಾ
ರೂ.~~200~~ ರೂ.125 ಮಾತ್ರ	ರೂ.~~380~~ ರೂ.250 ಮಾತ್ರ

ಹಿರಿಯ ನಾಗರಿಕರಿಗೆ ವಿಶೇಷ ರಿಯಾಯಿತಿ

(60 ವರ್ಷಗಳಿಗಿಂತ ಮೇಲ್ಪಟ್ಟವರು ಮಾತ್ರ ಈ ರಿಯಾಯಿತಿಯನ್ನು ಪಡೆದುಕೊಳ್ಳಬಹುದು. ತಾವು ಹುಟ್ಟಿದ ದಿನಾಂಕದ ಮಾಹಿತಿ ಇರುವ ಆಧಾರ್ ಕಾರ್ಡ್‌ನ ನಕಲನ್ನು ಇದರೊಂದಿಗೆ ಲಗತ್ತಿಸಬೇಕು).

ವಾರ್ಷಿಕ ಚಂದಾ	ದ್ವೈವಾರ್ಷಿಕ ಚಂದಾ
ರೂ.~~200~~ ರೂ.125 ಮಾತ್ರ	ರೂ.~~380~~ ರೂ.250 ಮಾತ್ರ

ರಾಮ್‌ರಾಜ್ ಷೋರೂಂಗಳಲ್ಲಿ ರೂ. 10,000ಕ್ಕಿಂತ ಹೆಚ್ಚಾಗಿ ಕೊಳ್ಳುವವರಿಗೆ ಒಂದು ವರ್ಷದ ಚಂದಾ ಉಚಿತ.

ಬಡಾಯಿ ಕೊಚ್ಚಿಕೊಳ್ಳುವುದು ತಪ್ಪು!

ರವಿಗೆ ಅಮೆರಿಕದ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಓದುವ ಅವಕಾಶ ಸಿಕ್ಕಿತು. ಅದರಿಂದ ಅವನ ತಾಯಿಗೆ ಅಪರಿಮಿತ ಸಂತೋಷ.

ಪಕ್ಕದ ಮನೆಯ ಮಹಿಳೆ ಆಗ ಇವರ ಮನೆಗೆ ಬರುತ್ತಾಳೆ. ಆಕೆಗೆ ಕಾಫಿ ಕೊಟ್ಟ ನಂತರ ರವಿಯ ತಾಯಿ, 'ರವಿಯ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಿದೆ. ಸ್ಕಾಲರ್ ಶಿಪ್ ಕೂಡ ಅವರೇ ಕೊಡುತ್ತಾರೆ. ಹಾಗಾಗಿ ನಮಗೆ ಯಾವುದೇ ಖರ್ಚಿಲ್ಲ. ಜಗತ್ತಿನಲ್ಲೇ ಅಪರೂಪದ ಕೋರ್ಸ್ ಇದಾಗಿದ್ದು, ಓದು ಮುಗಿದ ಮೇಲೆ ಅಲ್ಲಿಯೇ ಅವನಿಗೆ ಕೆಲಸ ಕೂಡ ಸಿಗುತ್ತದೆ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ!

ಇಲ್ಲಿಯವರೆಗೆ ಅವರು ಹೇಳಿದ್ದೆಲ್ಲ ರವಿಯ ಬಗ್ಗೆ ಹೆಮ್ಮೆಯಿಂದ ಮಾತನಾಡಿದ್ದಾಗಿತ್ತು. ಆದರೆ, ಅದಾದ ನಂತರ, ಮುಂದುವರೆದು, 'ರವಿಗೆ ಸಿಕ್ಕಿರುವ ಇಂತಹ ಅವಕಾಶ ಖಂಡಿತ ನಿಮ್ಮ ಮಗನಿಗೆ ಸಿಗುವುದಿಲ್ಲ. ಅದೆಲ್ಲದಕ್ಕೂ ವಿಶೇಷ ಜ್ಞಾನ ಇರಬೇಕು' ಎಂದು ಹೇಳಿದರೆ, ಇದನ್ನೇ ಜಂಭ ಕೊಚ್ಚಿಕೊಳ್ಳುವುದು ಎನ್ನುವುದು.

ಹೆಮ್ಮೆ ಮತ್ತು ಅಹಂಕಾರದ ನಡುವೆ ಒಂದು ಸಣ್ಣ ಎಳೆ ಮಾತ್ರವೇ ವ್ಯತ್ಯಾಸವಿರುತ್ತದೆ. ಆ ಗೆರೆಯನ್ನು ದಾಟಿ ಅನೇಕರು ಅಹಂಕಾರದಿಂದ ಮಾತನಾಡುತ್ತಾರೆ. ಅಹಂಕಾರದ ಉತ್ತುಂಗದಲ್ಲಿ ಇಂತಹ ಮಾತುಗಳು ಬರುತ್ತವೆ.

ಇನ್ನೊಂದು ಘಟನೆ. ಶಾಲಾ ಬಾಲಕನೊಬ್ಬ ಕ್ರೀಡಾ ಸ್ಪರ್ಧೆಗಳಲ್ಲಿ ತಾನು ಗೆದ್ದ ಬಹುಮಾನಗಳನ್ನು ಮನೆಗೆ ತೆಗೆದುಕೊಂಡು ಹೋಗುತ್ತಾನೆ. ಅವನು ಸಂತೋಷದಿಂದ ಅವುಗಳನ್ನು ತನ್ನ ತಾಯಿಗೆ ತೋರಿಸುತ್ತಾನೆ ಮತ್ತು ಪಕ್ಕದ ಮನೆಯಲ್ಲಿರುವ ತನ್ನ ಗೆಳೆಯನಿಗೂ ಅವುಗಳನ್ನು ತೋರಿಸಿ ಆನಂದಿಸುತ್ತಾನೆ. ಅವನು ತನ್ನ ಹೆಮ್ಮೆಯನ್ನು ಹಂಚಿಕೊಳ್ಳುವ ಸನ್ನಿವೇಶ ಅದು.

ಇನ್ನೊಬ್ಬ ಹುಡುಗ ಶಾಲೆಗೆ ಬರುತ್ತಾನೆ. ಅಲ್ಲಿ, 'ನಮ್ಮ ತಂದೆಗೆ ದುಬೈನಲ್ಲಿ ಲಾಟರಿ ಹೊಡೆದು ಕೋಟಿ ರೂಪಾಯಿ ಗೆದ್ದಿದ್ದಾರೆ' ಎನ್ನುತ್ತಾನೆ. 'ಅದರಿಂದ ನಾವು ಹೊಸ ಕಾರು ಖರೀದಿಸುತ್ತೇವೆ, ನಾವು ಹೊಸ ಮನೆಯನ್ನು ಖರೀದಿಸುತ್ತೇವೆ, ಆ ಮನೆಯಲ್ಲಿ ಒಂದು ಇಡೀ ಕೋಣೆ ತುಂಬುವಷ್ಟು ಆಟಿಕೆಗಳನ್ನು ಖರೀದಿಸುತ್ತೇವೆ. ನಾವೆಲ್ಲರೂ ಈಗಿರುವುದಕ್ಕಿಂತ ಇನ್ನೂ ಸುಖವಾದ ರೀತಿಯಲ್ಲಿ ಬದುಕುತ್ತೇವೆ" ಎಂದು ಗೆಳೆಯರ ಬಳಿ ಹೇಳುತ್ತಾನೆ.

ಏನು ಮಾತನಾಡುತ್ತೇವೆ ಎನ್ನುವುದು ಎಷ್ಟು ಮುಖ್ಯವೋ, ನಾವು ಯಾರ ಬಳಿ ಮಾತನಾಡುತ್ತಿದ್ದೇವೆ ಎಂಬುದೂ ಅಷ್ಟೇ ಅಷ್ಟೇ ಮುಖ್ಯ.

ಕ್ರಮವಾಗಿ ಮೂರು ಕಂಪನಿಗಳಲ್ಲಿ ಇಂಟರ್‌ವ್ಯೂಗೆ ಹಾಜರಾಗಿ ರಿಜೆಕ್ಟ್ ಆದ ಗೆಳೆಯನ ಬಳಿ ಹೋಗಿ, 'ನನಗೆ ಜರ್ಮನಿಯಲ್ಲಿ ತಿಂಗಳಿಗೆ ಐದು ಲಕ್ಷ ರೂಪಾಯಿಗಳ ಸಂಬಳದ ಕೆಲಸ ಸಿಕ್ಕಿತು. ಇದು ಯಾರಿಗೂ ಸಿಗದ ಅವಕಾಶ. ಬಹಳಷ್ಟು ಜನ ಇದಕ್ಕೆ ಪ್ರಯತ್ನಿಸಿ ಸೋತಿದ್ದಾರೆ' ಎಂದು ಹೆಮ್ಮೆ ಪಟ್ಟುಕೊಳ್ಳುವುದು ಅತ್ಯಂತ ನೀಚ ಸಂಗತಿ. ತಿಂಗಳ ಮನೆ ಬಾಡಿಗೆಗೇ ಹಣವಿಲ್ಲದೇ ಪರದಾಡುತ್ತಿರುವ ಗೆಳೆಯನ ಬಳೀ, 'ನನಗೆ ವ್ಯಾಪಾರದಲ್ಲಿ ದಿಢೀರನೆ ಜಾಕ್‌ಪಾಟ್ ಹೊಡೆದಿದೆ. ಕಳೆದ ತಿಂಗಳು ಕಡಿಮೆ ಬೆಲೆಗೆ ಖರೀದಿಸಿದ ದಿನಸಿ ಬೆಲೆ ದಿಢೀರ್ ಹೆಚ್ಚಿದ್ದರಿಂದ ಈ ತಿಂಗಳು ಎರಡು ಲಕ್ಷ ರೂಪಾಯಿ ಲಾಭ ಬಂದಿದೆ. ಬೆಲೆ ಇನ್ನೂ ಸ್ವಲ್ಪ ಹೆಚ್ಚಾಗಿದ್ದರೆ ಮೂರು ಲಕ್ಷ ಸಂಪಾದಿಸುತ್ತಿದ್ದೆ' ಎಂದು ಹೇಳುವುದು ನಾಗರಿಕತೆಯಲ್ಲ.

ನಮ್ಮ ಸಾಧನೆ ಮತ್ತು ಯಶಸ್ಸಿನ ಬಗ್ಗೆ ಹೆಮ್ಮೆಯಿಂದ ಮಾತನಾಡುವುದರಲ್ಲಿ ತಪ್ಪೇನಿಲ್ಲ. ನಾವು ಅದರ ಬಗ್ಗೆ ಯಾವ ಸಂದರ್ಭದಲ್ಲಿ ಮಾತನಾಡುತ್ತಿದ್ದೇವೆ? ನಾವು ಯಾರೊಂದಿಗೆ ಮಾತನಾಡುತ್ತಿದ್ದೇವೆ ಮತ್ತು ಅದನ್ನು ವ್ಯಕ್ತಪಡಿಸಲು ನಾವು ಯಾವ ಪದಗಳನ್ನು ಬಳಸುತ್ತೇವೆ ಎಂಬುದು ಮುಖ್ಯ. ಬಹಳಷ್ಟು ಜನರು ತಪ್ಪು ಮಾಡುವುದು ಇಲ್ಲೇ!

❖ ಬಡಾಯಿ ಕೊಚ್ಚಿಕೊಳ್ಳುವವರು ಯಾಕೆ ಹಾಗೆ ಮಾತನಾಡುತ್ತಾರೆ? ಮನಶ್ಶಾಸ್ತ್ರಜ್ಞರು ಇದಕ್ಕೆ ಕೆಲವು ಕಾರಣಗಳನ್ನು ನೀಡುತ್ತಾರೆ. ಬಡಾಯಿ ಕೊಚ್ಚಿಕೊಳ್ಳುವವರು ಅಭದ್ರತೆಯ ಭಾವನೆಯನ್ನು ಹೊಂದಿರುತ್ತಾರೆ. ಅದನ್ನು ಮುಚ್ಚಿಡಲು ಅವರು ಹೆಮ್ಮೆಯ ಮುಖವಾಡವನ್ನು ಧರಿಸುತ್ತಾರೆ. ಇದು ಅವರಿಗೆ ಆತ್ಮವಿಶ್ವಾಸವನ್ನು ನೀಡುತ್ತದೆ ಎಂದು ಅವರು ಭಾವಿಸುತ್ತಾರೆ. ಅದೇ ಸಂದರ್ಭದಲ್ಲಿ ತಾವು ಬಡಾಯಿ ಕೊಚ್ಚಿಕೊಳ್ಳುವ ಮೂಲಕ ಇತರರಲ್ಲಿ ಅಭದ್ರತೆಯ ಭಾವವನ್ನು ಇವರು ತುಂಬುತ್ತಾರೆ.

❖ ಪ್ರತಿಯೊಬ್ಬರೂ ತನ್ನನ್ನು ನೋಡಿ ಆಶ್ಚರ್ಯಪಡಬೇಕು. ಎಲ್ಲರೂ ನನ್ನನ್ನು ಇಷ್ಟಪಡಬೇಕು ಎಂದು ಭಾವಿಸಿ ಅನೇಕರು ಬಡಾಯಿ ಕೊಚ್ಚಿಕೊಳ್ಳುತ್ತಾರೆ. ಆದರೆ ಇವೆರಡೂ ಅವರಿಗೆ ಸಿಗುವುದಿಲ್ಲ ಎಂಬುದು ಅಷ್ಟೇ ಸತ್ಯ.

❖ ಅನೇಕರು ತಾವು ಮಾತನಾಡುತ್ತಿರುವುದು ಬಡಾಯಿ ಎಂದು ಕೂಡ ತಿಳಿಯದೆ ಮಾತನಾಡುತ್ತಾರೆ. 'ನಮಗೆ ಆಗಿರುವ ಒಳ್ಳೆಯದನ್ನು ಸ್ನೇಹಿತರು ಮತ್ತು ಸಂಬಂಧಿಕರಿಗೆ ಹೇಳುವುದರಲ್ಲಿ ತಪ್ಪೇನು?' ಎಂದು ಭಾವಿಸಿಯೇ ಅವರು ಮಾತನಾಡುತ್ತಾರೆ. ಆದರೆ ಮಾತನಾಡುವ ಸ್ವರದಲ್ಲಿ ಅದು ಹೆಗ್ಗಳಿಕೆಯಾಗಿ ಪರಿವರ್ತಿತವಾಗುತ್ತದೆ.

❖ ಅನೇಕರಿಗೆ ಇತರರೊಂದಿಗೆ ಮಾತನಾಡುವಾಗ ತಾವು ಏನು ಮಾತನಾಡಬೇಕು ಎಂಬುದೇ ತಿಳಿದಿರುವುದಿಲ್ಲ. ಸಾಮಾನ್ಯ ವಿಚಾರಣೆಗಳ ನಂತರ, ಮುಂದೆ ಏನು ಮಾತನಾಡಬೇಕೆಂದು ತಿಳಿಯದ ವಾತಾವರಣದಲ್ಲಿ ಅವರು ತಮ್ಮ ಬಗ್ಗೆ ಬಡಾಯಿ ಕೊಚ್ಚಿಕೊಳ್ಳುತ್ತಾರೆ.

❖ ಬಡಾಯಿ ಕೊಚ್ಚಿಕೊಳ್ಳುವವರಲ್ಲಿ ಸಾಮಾನ್ಯವಾಗಿ ಸಾಮಾಜಿಕ ಕಾಳಜಿ ಕಡಿಮೆ ಇರುತ್ತದೆ. ಹೊಸ ಜನರೊಂದಿಗೆ ಸಂವಹನ ನಡೆಸುವುದು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಬೆರೆಯುವುದು ಅವರಿಗೆ ತಿಳಿಯುವುದಿಲ್ಲ. ಸಮಾಜದಲ್ಲಿ ಇತರರೊಂದಿಗೆ ಹೇಗೆ ಸಂವಹನ ನಡೆಸಬೇಕೆಂದು ತಿಳಿದಿಲ್ಲದ ಜನರು ಹೀಗೆ ಏನನ್ನಾದರೂ ಒದರಿ ಬಿಡುತ್ತಾರೆ.

❖ ಯಾವುದೇ ವಿಷಯವನ್ನಾಗಲೀ ಇತರರ ದೃಷ್ಟಿಯಿಂದ ನೋಡುವುದನ್ನು ತಿಳಿದಿರುವ ವ್ಯಕ್ತಿಗಳು ಸಹಾನುಭೂತಿಯುಳ್ಳವರಾಗಿರುತ್ತಾರೆ. 'ನಾವು ಇದನ್ನು ಹೀಗೆ ಹೇಳಿದರೆ ಕೇಳುವವರು ಅದನ್ನು ಹೇಗೆ ಸ್ವೀಕರಿಸುತ್ತಾರೋ?', ಎನ್ನುವ ಕಾಳಜಿ ಅವರಲ್ಲಿರುವುದರಿಂದ, ಪ್ರತಿ ಸನ್ನಿವೇಶದಲ್ಲೂ ಎಚ್ಚರಿಕೆಯಿಂದ ಮಾತನಾಡುತ್ತಾರೆ. ಬಡಾಯಿ ಕೊಚ್ಚಿಕೊಳ್ಳುವವರಲ್ಲಿ ಈ ಭಾವನೆ ಇರುವುದಿಲ್ಲ.

❖ ಹೆಮ್ಮೆಪಡುವವರಲ್ಲಿ ಅನೇಕರು, 'ನಾವು ಇತರರಿಗಿಂತ ಶ್ರೇಷ್ಠರು' ಎಂಬ ಭಾವವನ್ನು ಹೊಂದಿರುತ್ತಾರೆ. 'ನಮ್ಮೊಂದಿಗೆ ಕುಳಿತು ಮಾತನಾಡಲು ಇವರು ಅರ್ಹರಲ್ಲ' ಎಂಬ ಭಾವವನ್ನು ಹೊಂದಿರುವುದರಿಂದ, ಅವರು ಸಾಮಾನ್ಯ ಸ್ಥಳಗಳಲ್ಲಿ ಕೂಡ ಬಡಾಯಿ ಕೊಚ್ಚಿಕೊಳ್ಳುತ್ತಾರೆ.

❖ ಬಡಾಯಿ ಕೊಚ್ಚಿಕೊಳ್ಳುವ ಕೆಲವರಲ್ಲಿ ಕೆಲವೊಮ್ಮೆ ಕೀಳರಿಮೆಯೂ ಇರುತ್ತದೆ. ಅದನ್ನು ಮುಚ್ಚಿಡಲು ಅವರು ತಮ್ಮ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತಾರೆ. ಇತರರನ್ನು ಕೀಳಾಗಿ ಕಾಣಲು ಮತ್ತು ತಮ್ಮನ್ನು ತಾವು ಉನ್ನತೀಕರಿಸಿಕೊಳ್ಳಲು ಅವರು ಹೀಗೆ ಮಾಡುತ್ತಾರೆ.

❖ ಎಲ್ಲಾ ಸಂದರ್ಭಗಳಲ್ಲೂ ಎಲ್ಲ ಜನರ ಗಮನವೂ ತಮ್ಮ ಕಡೆಗೇ ಇರಬೇಕೆಂದು ಬಯಸುವ ಪ್ರವೃತ್ತಿಯನ್ನು ಕೆಲವರು ಹೊಂದಿರುತ್ತಾರೆ. ಮದುವೆ ಕಾರ್ಯಕ್ರಮಕ್ಕೆ ಹೋದರೂ ಅಲ್ಲಿ ವರನನ್ನೂ ಮೀರಿ ಎಲ್ಲರ ಗಮನ ತಮ್ಮ ಮೇಲೇ ಇರಬೇಕೆಂದು ಅವರು ಬಯಸುತ್ತಾರೆ. ಯಾರಾದಾದರೂ ಸಾವಿನಲ್ಲಿ ಅಂತಿಮ ನಮನ ಸಲ್ಲಿಸಲು ಹೋದರೆ, ಅಲ್ಲಿಯೂ ತಮ್ಮ ಕಡಗೇ ಎಲ್ಲರ ಗಮನ ಇರಬೇಕೆಂದು ಅವರು ಭಾವಿಸುತ್ತಾರೆ. ಹೀಗೆ ಎಲ್ಲರ ಗಮನವನ್ನೂ ತಮ್ಮತ್ತ ಸೆಳೆದುಕೊಳ್ಳಬೇಕೆಂದು ಬಯಸುವುದು ಹೆಮ್ಮೆ ಪಡುವುದರ ಪರಮಾವಧಿಯಾಗಿರುತ್ತದೆ.

❖ ಬಡಾಯಿ ಕೊಚ್ಚಿಕೊಳ್ಳುವುದು ಸಂಬಂಧಗಳನ್ನು ಹಾಳು ಮಾಡುವ ಕೆಟ್ಟ ಅಭ್ಯಾಸವಾಗಿರುತ್ತದೆ. ಯಾರಾದರೂ ನಿಮ್ಮ ಮುಂದೆ ತಮ್ಮ ಬಡಿವಾರ ಹೇಳಲು ಪ್ರಯತ್ನಿಸಿದರೆ, ಅವರೊಂದಿಗೆ ಆ ವಿಷಯ ಬಿಟ್ಟು ಬೇರೆ ಯಾವುದನ್ನಾದರೂ ಮಾತನಾಡಿ ಮತ್ತು ಸಂಭಾಷಣೆಯನ್ನು ಬದಲಾಯಿಸಿ. ನೀವು ಅವರ ಮಾತು ಕೇಳಲು ಇಷ್ಟಪಡುತ್ತಿಲ್ಲ ಎಂಬ ಮುಖ ಭಾವವನ್ನು ಪ್ರದರ್ಶಿಸಿ. ಅವರು ಮಾತನಾಡುವಾಗ ಮಧ್ಯಪ್ರವೇಶಿಸಿ ನಿಮ್ಮ ಬಗ್ಗೆ ಹೇಳಿಕೊಳ್ಳಲು ಆರಂಭಿಸಿ ಮತ್ತು 'ಅಯ್ಯೋ, ನಾನು ಅನಗತ್ಯವಾಗಿ ನನ್ನ ಬಗ್ಗೆಯೇ ಮಾತನಾಡುತ್ತಿದ್ದೇನೆ. ಇದು ಈಗ ಬೇಕಾಗಿಲ್ಲ ಬಿಡಿ" ಎಂದು ಹೇಳಿ. ಇಲ್ಲದಿದ್ದರೆ, ಯಾರೋ ಒಬ್ಬ ಸೆಲೆಬ್ರಿಟಿಯನ್ನು ಉಲ್ಲೇಖಿಸಿ 'ಅವರು ಒಳ್ಳೆಯ ವ್ಯಕ್ತಿ ಸರಿ, ಆದರೆ ಯಾವಾಗಲೂ ತಮ್ಮ ಬಗ್ಗೆ ಬಡಾಯಿ ಕೊಚ್ಚಿಕೊಳ್ಳುತ್ತಿರುತ್ತಾರೆ' ಎಂದು ಸೂಕ್ಷ್ಮವಾಗಿ ಹೇಳಿ ನೋಡಿ. ನೀವು ಮಾಡಿದ ಈ ಯಾವ ಪ್ರಯತ್ನಗಳಿಗೂ ಅವರ ಬಳಿ ಫಲ ದೊರಕದೇ ಹೋದರೆ ಅಂತಹವರಿಂದ ದೂರವಿದ್ದು ಬಿಡಿ. ●

ಇದೆಲ್ಲದರ ಬಗ್ಗೆ ಹೆಮ್ಮೆ ಪಡಿ!



- ನಿಮ್ಮ ಕೆಲಸ, ಕುಟುಂಬ, ಸೌಲಭ್ಯಗಳು ಮತ್ತು ಜವಾಬ್ದಾರಿಗಳ ಒಟ್ಟು ಮೊತ್ತ ನೀವಾಗಿರುತ್ತೀರಿ. ಅದಕ್ಕಾಗಿ ನಿಮ್ಮ ಬಗ್ಗೆ ಹೆಮ್ಮೆ ಪಡಿ.
- ನಿಮ್ಮಲ್ಲಿರುವ ಕೌಶಲ್ಯಗಳ ಬಗ್ಗೆ ಹೆಮ್ಮೆ ಪಡಿರಿ. ಅದರಿಂದ ಎಷ್ಟು ಜನಕ್ಕೆ ಲಾಭವಾಗುತ್ತದೆ ಎಂದು ಹೆಮ್ಮೆ ಪಡಿ.
- ನೀವು ಪೂರ್ಣ ವಿಶ್ವಾಸದಿಂದ ನಿಮ್ಮ ಕೆಲಸವನ್ನು ಹೇಗೆ ಮಾಡುತ್ತಿದ್ದೀರಿ ಎಂಬುದರ ಬಗ್ಗೆ ಹೆಮ್ಮೆ ಪಡಿ.
- ನೀವು ಜಯಿಸಿದ ಸವಾಲುಗಳ ಬಗ್ಗೆ ಹೆಮ್ಮೆ ಪಡಿ. ಹಾದಿಯಲ್ಲಿ ಕಲಿತ ಪಾಠಗಳ ಬಗ್ಗೆ ಹೆಮ್ಮೆ ಪಡಿ.
- ತಪ್ಪಾದಾಗ ಒಪ್ಪಿಕೊಳ್ಳುವ ಧೈರ್ಯವನ್ನು ಹೊಂದಿರುವ ಬಗ್ಗೆ ಹೆಮ್ಮೆಪಡಿ. ವಿನಮ್ರರಾಗಿರುವುದರಲ್ಲಿ ಹೆಮ್ಮೆಪಡಿರಿ ಮತ್ತು ಏನನ್ನಾದರೂ ಸರಿಯಾಗಿ ಮಾಡಿದಾಗ ಅದರ ಬಗ್ಗೆ ಜಂಬ ಕೊಚ್ಚಿಕೊಳ್ಳಬೇಡಿ.
- ನೀವು ಏನಾದರೂ ತಪ್ಪು ಮಾಡಿದರೆ, ತಕ್ಷಣವೇ ನಿಮ್ಮನ್ನು ನೀವೇ ಕ್ಷಮಿಸಿಕೊಳ್ಳುವುದು ನೀವು ಮತ್ತೆ ಸರಿ ದಾರಿಯಲ್ಲಿ ನಡೆಯುವಂತೆ ಮಾಡುತ್ತದೆ. ಇತರರ ತಪ್ಪುಗಳನ್ನು ಕ್ಷಮಿಸುವುದರಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ನಿಮ್ಮಲ್ಲಿ ಈ ಎರಡು ಗುಣಗಳಿದ್ದರೆ ಹೆಮ್ಮೆ ಪಡಿರಿ.
- ಅವ್ಯವಸ್ಥೆಯ ಸಮಯದಲ್ಲಿಯೂ ನೀವು ಶಾಂತವಾಗಿರಲು ಸಾಧ್ಯವಾದರೆ ನಿಮ್ಮ ಬಗ್ಗೆ ಹೆಮ್ಮೆ ಪಡಿರಿ. ಭಯವನ್ನು ಉಂಟುಮಾಡುವ ಕ್ಷಣಗಳನ್ನು ಕೂಡ ನೀವು ಧೈರ್ಯದಿಂದ ಎದುರಿಸಲು ಸಾಧ್ಯವಾದರೆ ಹೆಮ್ಮೆಪಡಿರಿ. ಎಂತಹ ಆತಂಕದ ಸನ್ನಿವೇಶದಲ್ಲೂ ನೀವು ಉತ್ಸಾಹದಿಂದ ಕೆಲಸ ಮಾಡಬಲ್ಲವರಾಗಿದ್ದರೆ ಅದಕ್ಕಾಗಿ ಹೆಮ್ಮೆ ಪಡಿ.
- ಯಾವುದೇ ಪರಿಸರದಲ್ಲಿ ನೀವು ಹೊಸ ಪ್ರಯತ್ನಗಳಿಗೆ ತೆರೆದುಕೊಳ್ಳುತ್ತೀರಿ ಎಂದಾದರೆ, ಈ ಗುಣದ ಬಗ್ಗೆ ಹೆಮ್ಮೆ ಪಡಬೇಕು.
- ಒಬ್ಬ ವ್ಯಕ್ತಿಯು ತನಗೆ ಇಷ್ಟವಿಲ್ಲದ ಕೆಲಸದಲ್ಲಿದ್ದರೂ, ಅವನು ತನ್ನ ಕುಟುಂಬದ ಅಗತ್ಯಗಳನ್ನು ಅರಿತುಕೊಂಡು ಅದನ್ನು ಬದ್ಧತೆಯ ಭಾವದಿಂದ ಸಂಪೂರ್ಣವಾಗಿ ಮಾಡುತ್ತಾನೆ. ಅದೇ ಸಮಯದಲ್ಲಿ ಅವನು ತನ್ನ ಕನಸಾಗಿರುವ ಇನ್ನೊಂದು ಕೆಲಸವನ್ನು ಹುಡುಕುತ್ತಾನೆ. ನೀವು ಅಂತಹ ಕಠಿಣ ಕೆಲಸಗಾರರಾಗಿದ್ದರೆ, ಅದರ ಬಗ್ಗೆ ಹೆಮ್ಮೆ ಪಡಬೇಕು.
- ನೀವು ಮಾಡಲು ಸಾಧ್ಯವಾಗದ ಮತ್ತು ಅದರಿಂದ ಇತರರಿಗೆ ಹೆಚ್ಚು ಪ್ರಯೋಜನವಾಗದ ಕೆಲಸವನ್ನು ನಿರಾಕರಿಸಲು ಹಿಂಜರಿಯಬೇಡಿ. ನಿಮಗೆ ಸಂತೋಷ ಮತ್ತು ಉತ್ತಮ ಫಲಿತಾಂಶಗಳನ್ನು ನೀಡುವ ಉದ್ಯೋಗಗಳನ್ನು ನೀವು ಉತ್ಸಾಹದಿಂದ ಸ್ವೀಕರಿಸಬಹುದು. ನೀವು ಈ ಗುಣವನ್ನು ಹೊಂದಿದ್ದರೆ, ಅದರ ಬಗ್ಗೆ ಹೆಮ್ಮೆಪಡಿರಿ.
- ಯಾವುದೇ ವಯಸ್ಸಿನಲ್ಲಿ ಮತ್ತು ಯಾವುದೇ ಉದ್ಯೋಗದಲ್ಲಿ ಹೊಸದನ್ನು ಕಲಿಯುವ ಮೂಲಕ ನಿಮ್ಮನ್ನು ಸುಧಾರಿಸುವ ಸಾಮರ್ಥ್ಯವನ್ನು ನೀವು ಹೊಂದಿದ್ದೀರಾ? ಅದು ನಿಮ್ಮನ್ನು ಹೆಮ್ಮೆ ಪಡಿಸುವ ಗುಣವೂ ಹೌದು.
- ನೀವು ನಿಮ್ಮನ್ನು ಪ್ರೀತಿಸುವ ಎಲ್ಲರಿಗೂ, ಕುಟುಂಬ, ಸಂಬಂಧಿಕರು ಮತ್ತು ಸ್ನೇಹಿತರಿಗೆ ಪ್ರೀತಿಯನ್ನು ತೋರಿಸುವ ವ್ಯಕ್ತಿಯೇ? ಅಪರಿಚಿತರಿಗೆ ಕೂಡ ಪ್ರೀತಿಯನ್ನು ತೋರಿಸುವವರೇ? ಇದು ನೀವು ಹೆಮ್ಮೆ ಪಡಬೇಕಾದ ಗುಣ.

ನಿಮ್ಮ ಆಕಾರದ ಬಗ್ಗೆ ಹೆಮ್ಮೆ ಪಡಿ!

ಅನೇಕ ಜನರನ್ನು ಕುಗ್ಗಿಸಿ ಹಾಕುವುದು ಅವರ ಆಕಾರದ ಬಗೆಗೆ ಅವರಲ್ಲಿರುವ ಕೀಳರಿಮೆಯೇ ಆಗಿದೆ. ಅದನ್ನು ಒಡೆದು ಹಾಕಿ ಆತ್ಮವಿಶ್ವಾಸವನ್ನು ಗಳಿಸುವುದೇ ಮನಸ್ಸಿನ ಶಾಂತಿಗೆ ಮೊದಲ ಹೆಜ್ಜೆಯಾಗಿದೆ. ಆದಕ್ಕಾಗಿ ನೀವು ಏನು ಮಾಡಬಹುದು?

• 'ಇದೇ ಸೌಂದರ್ಯ' ಎಂದು ಸಿನಿಮಾ, ಕಿರುತೆರೆಗಳಲ್ಲಿ ಒಂದಷ್ಟು ಉದಾಹರಣೆಗಳನ್ನು ತೋರಿಸುತ್ತಾರೆ. ಅವುಗಳನ್ನು ನಿರ್ಲಕ್ಷಿಸಿ. ಸಾಕಷ್ಟು ಮೇಕಪ್ ಮಾಡಿಕೊಂಡು ತಂತ್ರಜ್ಞಾನದ ನೆರವಿನಿಂದ ದೃಶ್ಯಗಳನ್ನು ಎಡಿಟ್ ಮಾಡಿ ಸೃಷ್ಟಿಸಿದ ಸೌಂದರ್ಯವದು. ಅವರೊಂದಿಗೆ ನಿಮ್ಮನ್ನು ಹೋಲಿಸಿಕೊಳ್ಳಬೇಡಿ. ಎಲ್ಲಾ ಬಗೆಯ ರೂಪವೂ ಸುಂದರವೇ ಆಗಿರುತ್ತದೆ.

• 'ನಾನು ಆ ರೀತಿ ಕಾಣುತ್ತಿಲ್ಲ' ಎಂದು ಬೇಸರಿಸಿಕೊಳ್ಳಬೇಡಿ. ಆ ಕುರಿತು ಸ್ವ–ವಿಮರ್ಶೆ ಮಾಡಿಕೊಳ್ಳುವುದೂ ಬೇಡ. 'ಇವುಗಳೆಲ್ಲವೂ ನನ್ನ ದೇಹದಲ್ಲಿ ಚೆನ್ನಾಗಿವೆ ಎಂದು ಸಕಾರಾತ್ಮಕವಾಗಿ ಯೋಚಿಸಿ. 'ನನ್ನ ಈ ಸ್ವರೂಪವು ನನಗೆ ಹೇಗೆಲ್ಲಾ ಸಹಾಯ ಮಾಡುತ್ತದೆ' ಎಂದು ಚಿಂತಿಸಿ ನೋಡಿ. ಅದಕ್ಕಾಗಿ ಕೃತಜ್ಞರಾಗಿರಿ.

'ನಾನು ಕಪ್ಪಗಿದ್ದೇನೆ', 'ತಲೆ ಬಾಚಿದರೆ ಕೂದಲು ಸರಿಯಾಗಿ ನಿಲ್ಲುವುದೇ ಇಲ್ಲ' ಎಂಬಂತಹ ಪೂರ್ವಾಗ್ರಹಗಳೊಂದಿಗೆ ನಿಮ್ಮನ್ನು ನೀವೇ ನೋಡುವುದು ಬೇಡ. ಕನ್ನಡಿಯಲ್ಲಿ ನಿಮ್ಮ ಪ್ರತಿಬಿಂಬವನ್ನು ನೋಡಿ ಧನಾತ್ಮಕವಾಗಿ ಹೀಗೆ ಹೇಳಿಕೊಂಡು ನೋಡಿ: 'ಈ ಆಕಾರವು ಎಲ್ಲವನ್ನೂ ಯಶಸ್ವಿಯಾಗಿ ಪೂರ್ಣಗೊಳಿಸಲು ನನಗೆ ಸ್ಫೂರ್ತಿ ನೀಡುತ್ತದೆ.

• ನಿಮ್ಮ ನೋಟ, ದೇಹ ಭಾಷೆ, ನಗು ಮತ್ತು ನಡವಳಿಕೆಯಂತಹ ನಿಮ್ಮ ವ್ಯಕ್ತಿತ್ವದ ಬಗ್ಗೆ ಜನರು ನಿಮಗೆ ನೀಡುವ ಅಭಿನಂದನೆಗಳನ್ನು ಸದಾ ನೆನಪಿನಲ್ಲಿಡಿ. ಅವುಗಳನ್ನು ಆಗಾಗ್ಗೆ ನೆನಪಿಸಿಕೊಳ್ಳಿ. ಆದರೆ ಯಾರಾದರೂ ನಕಾರಾತ್ಮಕವಾಗಿ ಏನಾದರೂ ಹೇಳಿದರೆ, ತಕ್ಷಣ ಅದನ್ನು ಮರೆತುಬಿಡಿ.

• ನಿಮ್ಮನ್ನು ಪ್ರೀತಿಸುವ ಮೊದಲ ವ್ಯಕ್ತಿ ನೀವೇ ಆಗಿರಿ. ನಿಮ್ಮನ್ನು ನೋಡಿ, 'ಏನು, ಇಷ್ಟೊಂದು ಎತ್ತರವಾಗಿ ಬೆಳೆದಿದ್ದೀಯಾ' ಎಂಬಂತೆ ನಿಮ್ಮ ದೇಹ ಸ್ವರೂಪವನ್ನು ಅವಹೇಳನ ಮಾಡುವವರ ಮಾತುಗಳನ್ನು ನಿರ್ಲಕ್ಷಿಸಿ ಮತ್ತು 'ಈ ಎತ್ತರವು ನನ್ನನ್ನು ಇತರರಿಂದ ಭಿನ್ನವಾಗಿಸುತ್ತದೆ' ಎಂದು ಧನಾತ್ಮಕವಾಗಿ ಯೋಚಿಸಿ. ನಿಮ್ಮ ಮನಸ್ಸಿನ ಜೊತೆ ಸದಾ ವಿನಯವಾಗಿ ಮಾತನಾಡಿ.

• ನಿಮ್ಮ ಸಂಕಷ್ಟದ ಸಮಯದಲ್ಲಿ ನಿಮ್ಮ ಪ್ರೀತಿಪಾತ್ರರಿಂದ ಬೆಂಬಲವನ್ನು ಪಡೆದುಕೊಳ್ಳಿ. ನಿಮ್ಮ ಕುಟುಂಬ, ನಿಮ್ಮ ಎಲ್ಲಾ ಸ್ನೇಹಿತರು ಇವರೆಲ್ಲರೂ ನಿಮ್ಮನ್ನು ಧನಾತ್ಮಕವಾಗಿ ಬೆಂಬಲಿಸುತ್ತಾರೆ. 'ನಿನಗೇನಪ್ಪಾ ಕಮ್ಮಿ ಇದೆ' ಎಂದು ಮತ್ಸರದ ಮಾತುಗಳನ್ನು ಆಡುವವರ ಮನಸ್ಸಿನಲ್ಲಿರುವ ಹತಾಶೆಗಳು ಆ ಮೂಲಕ ಸ್ಪಷ್ಟವಾಗುತ್ತದೆ.

• ದೇಹದ ಆಕಾರದಂತೆಯೇ, ನೀವು ಧರಿಸುವ ಬಟ್ಟೆಗಳು ಸಹ ನಿಮ್ಮ ನೋಟವನ್ನು ನಿರ್ಧರಿಸುತ್ತವೆ. ನಿಮಗೆ ಸೂಕ್ತವಾಗುವ ಉಡುಗೆ ಧರಿಸಿ. ಅಚ್ಚುಕಟ್ಟಾಗಿ, ಸುಕ್ಕುಗಳಿಲ್ಲದೆ ಮತ್ತು ತಮ್ಮ ಕೆಲಸಕ್ಕೆ ಸೂಕ್ತವಾದ ಬಟ್ಟೆಗಳನ್ನು ಧರಿಸುವ ಜನರು ಹೆಚ್ಚಿನ ಆತ್ಮವಿಶ್ವಾಸವನ್ನು ಹೊಂದಿರುತ್ತಾರೆ. ಅವರು ಧರಿಸುವ ಬೂಟುಗಳು ಸಹ ಒಬ್ಬರ ಸೊಬಗನ್ನು ನಿರ್ಧರಿಸುತ್ತವೆ.

• ಡಯಟ್ ಮತ್ತು ವ್ಯಾಯಾಮ ನಿಮ್ಮ ಬಾಹ್ಯ ಸ್ವರೂಪವನ್ನು ಕಾಪಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸಮತೋಲಿತ ಪ್ರಮಾಣದ ಎಲ್ಲಾ ಪೋಷಕಾಂಶಗಳನ್ನು ಒದಗಿಸುವ ಆರೋಗ್ಯಕರ ಆಹಾರಕ್ಕೆ ಬದಲಾಗಿ. ಮರೆಯದೇ ಪ್ರತಿದಿನ ಒಂದಷ್ಟು ವ್ಯಾಯಾಮ ಮಾಡಿ.

• ನಿಮ್ಮ ತೂಕವನ್ನು ಆಗಾಗ್ಗೆ ಪರಿಶೀಲಿಸುವುದು ಒತ್ತಡವನ್ನು ಉಂಟು ಮಾಡಬಹುದು. ತೂಕದ ಯಂತ್ರವನ್ನು ಎತ್ತಿ ಪಕ್ಕಕ್ಕೆ ಇರಿಸಿ. ದೇಹದ ತೂಕದಲ್ಲಿ ಯಾವುದೇ ವ್ಯತಿರಿಕ್ತ ಬದಲಾವಣೆ ಕಂಡುಬಂದರೆ, ನೀವು ಅದನ್ನು ಸ್ವಾಭಾವಿಕವಾಗಿ ಮತ್ತು ಸಹಜವಾಗಿಯೇ ಅರಿಯುವಿರಿ.

• ಯಾವಾಗಲೂ ನಗುತ್ತಿರಿ. ನಗುವ ಮುಖ ಯಾವಾಗಲೂ ನೀವು ಚೆನ್ನಾಗಿ ಕಾಣುವಂತೆ ಮಾಡುತ್ತದೆ.

ಎಚ್ಚರಿಕೆಯಿಂದ ಗಮನಿಸಬೇಕು!

ಕೆಲವು ಚಾಲಕರು ಹೊಸದಾಗಿ ಬಸ್ ಚಾಲನಾ ತರಬೇತಿಗೆ ಸೇರಿದ್ದರು ಮತ್ತು ಅವರಿಗೆ ತರಬೇತಿ ನೀಡಲು ಒಬ್ಬ ಹಿರಿಯ ತರಬೇತುದಾರರು ಬಂದರು. "ಈ ಜಿಲ್ಲೆಯಲ್ಲಿ ನನ್ನಂತೆ ತರಬೇತಿ ಕೊಡುವವರು ಬೇರೆ ಯಾರೂ ಇಲ್ಲ. ನನ್ನ ಬಳಿ ವಾಹನ ಚಾಲನೆ ಮಾಡುವುದನ್ನು ಕಲಿತ ಯಾರೂ ಒಂದೇ ಒಂದು ಅಪಘಾತವನ್ನು ಕೂಡ ಮಾಡಿಲ್ಲ" ಎಂದು ಅವರು ತಮ್ಮ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡರು.

"ಎಲ್ಲವನ್ನೂ ಕೂಲಂಕಷವಾಗಿ, ಸೂಕ್ಷ್ಮವಾಗಿ ನಾನು ಹೇಳಿ ಕೊಡುತ್ತೇನೆ. ಡ್ರೈವರ್‌ಗಳಿಗೆ ಇದು ಬಹಳ ಮುಖ್ಯ. ಯಾವುದೂ ನನ್ನ ಗಮನದಿಂದ ತಪ್ಪಿಸಿಕೊಳ್ಳುವುದಿಲ್ಲ" ಎಂದು ಡ್ರೈವರ್ ಸೀಟಿನಲ್ಲಿ ಕುಳಿತು ಪ್ರತಿಯೊಂದು ಬಿಡಿಭಾಗಗಳ ಬಗ್ಗೆ ವಿವರಿಸಿದರು. ಆಗ ಒಳಗೆ ಬಂದ ಮ್ಯಾನೇಜರ್, "ನೀವು ಎಲ್ಲವನ್ನೂ ಎಚ್ಚರಿಕೆಯಿಂದ ನೋಡುತ್ತೀರಿ, ಸರಿ. ಆದರೆ, ಇದು ನಿಮ್ಮ ಬಸ್ ಹೌದೋ ಅಲ್ಲವೋ ಎಂಬುದನ್ನೂ ನೋಡಬೇಕಲ್ಲವೇ? ನೀವು ಕಲಿಸಬೇಕಾದ ಬಸ್ ಇದಲ್ಲ, ಪಕ್ಕದಲ್ಲಿದೆ, ಹೋಗಿ" ಎಂದು ಹೇಳಿದರು. ಅದುವರೆಗೂ ತನ್ನ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತಿದ್ದ ತರಬೇತುದಾರ ತಲೆ ತಗ್ಗಿಸಿ ಕೆಳಗಿಳಿದ.

ಹೆಮ್ಮೆಯಿಂದ ಬರುವ ಮತ್ತು!

ಇಷ್ಟವಿರಲಿ, ಇಲ್ಲದಿರಲಿ, ಹುಟ್ಟಿನಿಂದ ಸಾಯುವವರೆಗೂ ಯಾವುದಾದರೊಂದು ಹೆಮ್ಮೆಯೊಂದಿಗೇ ಎಲ್ಲರೂ ಬೆಳೆದಿರುತ್ತಾರೆ. ಆ ಹೆಮ್ಮೆಯಲ್ಲಿ ಏನೋ ಒಂದು ಅಮಲು. ಕೆಲವರಿಗೆ ತಮ್ಮ ಕುಲದ ಬಗ್ಗೆ ಹೆಮ್ಮೆ, ಕೆಲವರಿಗೆ ತಮ್ಮ ಜನಾಂಗದ ಬಗ್ಗೆ ಹೆಮ್ಮೆ, ಕೆಲವರಿಗೆ ತಮ್ಮ ಊರಿನ ಬಗ್ಗೆ ಹೆಮ್ಮೆ. ಇಂತಹ ಹೆಮ್ಮೆಯ ಭಾವ ಅವರ ರಕ್ತದಲ್ಲೇ ಊರಿ ಹೋಗಿರುತ್ತದೆ.

ಸ್ವಪ್ರಶಂಸೆ ಮಾಡಿಕೊಳ್ಳುವ ಒಬ್ಬ ವ್ಯಕ್ತಿ, ಅಷ್ಟಕ್ಕೇ ನಿಲ್ಲದೆ ಇತರರನ್ನು ಕೀಳಾಗಿಸಿ ಮಾತನಾಡುವುದೂ ಉಂಟು. ಇದನ್ನು ಹಲವೆಡೆ ಕಾಣಬಹುದು. ಅಸೂಯೆ ಮತ್ತು ಸ್ವಪ್ರಶಂಸೆಗಳೆರಡೂ ಬಹುತೇಕ ಒಂದೇ ರೀತಿಯ ಕಾರ್ಯವನ್ನೇ ಮಾಡುತ್ತವೆ. ಪ್ರತಿ ಬಾರಿ ನಾವು ಹೆಮ್ಮೆ ಪಡುವಂತಹುದನ್ನೇನಾದರೂ ಮಾಡಿದರೆ ಅದರ ಜೊತೆಯಲ್ಲೇ ಅಸೂಯೆ ಪಡುವ ಶತ್ರುವನ್ನೂ ಗಳಿಸಿರುತ್ತೇವೆ. ಕೆಲವರು ನಮ್ಮ ಪ್ರಗತಿಯನ್ನು ಕಂಡು ಅಸೂಯೆ ಪಡುವುದು ಸಹಜ. ಆದರೆ, ಅದನ್ನು ನಾವೇ ಅವರಿಗೆ ಸೃಷ್ಟಿಸಿಕೊಡಬಾರದು.

ವಾಸ್ತವವಾಗಿ, ಹೆಮ್ಮೆಯ ಭಾವವು ನಮ್ಮ ಮನಸ್ಸಿನಲ್ಲಿ ಗರ್ವ, ಅಹಂಕಾರ ಮತ್ತು ಸ್ವ-ಕೇಂದ್ರಿತತೆಯಂತಹ ಹಲವಾರು ಅನಪೇಕ್ಷಿತ ಗುಣಗಳನ್ನು ತರುತ್ತದೆ. ಹೆಮ್ಮೆಯ ಭಾವವನ್ನು ಹೊಂದಿರುವ ವ್ಯಕ್ತಿಯನ್ನು ಹೊಗಳುವ ಮೂಲಕ ಸುಲಭವಾಗಿ ಉರುಳಿಸಬಹುದು. ಈ ಹುಸಿ ಹೊಗಳಿಕೆ ಅತ್ಯಂತ ಅಪಾಯಕಾರಿ ಅಸ್ತ್ರವಾಗಿದೆ. ಸ್ತೋತ್ರಗಳು ಗುಂಡುಗಳಿಗಿಂತ ಬಲವಾಗಿರುತ್ತವೆ. ಆದ್ದರಿಂದ ಅಹಂಕಾರವೆಂಬ ವಿಷಯದಿಂದ ದೂರವಿರುವುದು ಉತ್ತಮ. ಅಹಂಕಾರವು ಸಣ್ಣತನಕ್ಕೆ ಕಾರಣವಾಗುತ್ತದೆ. ನಾವು ಅದನ್ನು ಯಾವಾಗಲೂ ದ್ವೇಷಿಸುತ್ತೇವೆ.

ಮದುವೆಯ ಮಾತು!

ಯುವಕನೊಬ್ಬ ಮದುವೆಯಾದ. ಮದುವೆಯ ಆರತಕ್ಷತೆಯ ಸಮಾರಂಭದಲ್ಲಿ ಆತ ಎಲ್ಲರಿಗೂ ಧನ್ಯವಾದ ಅರ್ಪಿಸಿದ. ತನ್ನ ವೈದ್ಯ ತಂದೆ ತನ್ನನ್ನು ಹೇಗೆ ಬೆಂಬಲಿಸಿದರು ಎಂಬುದರ ಕುರಿತು, ತನ್ನ ಕೈಯಲ್ಲಿದ್ದ ಕಾಗದದಲ್ಲಿ ಬರೆದಿದ್ದನ್ನು ಓದುತ್ತಲೇ ಹೋದ. ಅವನ ಮಾತಿನಲ್ಲಿ ಹಠಾತ್ ತೊದಲುವಿಕೆ ಕಾಣಿಸಿತು.

"ಇದರಲ್ಲಿ ಏನು ಬರೆದಿದೆ ಎಂದು ನನಗೆ ಸರಿಯಾಗಿ ಓದಲು ಸಾಧ್ಯವಾಗುತ್ತಿಲ್ಲ. ಇದು ನನ್ನ ತಂದೆಯ ಕೈ ಬರಹ. ವೈದ್ಯರ ಸಹಿಯನ್ನು ಅರ್ಥ ಮಾಡಿಕೊಳ್ಳುವ ಔಷಧಿ ಅಂಗಡಿಯವರು ಯಾರಾದರೂ ಇಲ್ಲಿದ್ದೀರಾ? ಇದ್ದರೆ ಬಂದು ಇದನ್ನು ಓದಲು ಸಹಾಯ ಮಾಡಿ" ಎಂದು ಅವನು ಹೇಳಿದ. ತನ್ನ ಬಗ್ಗೆ ಹೆಮ್ಮೆಯಿಂದ ಮಾತನಾಡು ಎಂದು ಮಗನಿಗೆ ಚೀಟಿ ಬರೆದುಕೊಟ್ಟ ಆ ವೈದ್ಯನನ್ನು ನೋಡಿ ಎಲ್ಲರೂ ತಲೆ ಚಚ್ಚಿಕೊಂಡರು.

"ತಪ್ಪೇನಿದೆ?"

ಮನುಷ್ಯರ ತದ್ರೂಪವಾದ ಪ್ರತಿಮೆಗಳನ್ನು ಮಾಡುವ ಒಬ್ಬ ಶಿಲ್ಪಿ ಇದ್ದ. ಆತ ಯಾರನ್ನಾದರೂ ಮಾದರಿಯಾಗಿಟ್ಟುಕೊಂಡು ಅವರ ಒಂದು ವಿಗ್ರಹವನ್ನು ಮಾಡಿದರೆ, ಆ ವಿಗ್ರಹ ಮತ್ತು ಆ ವ್ಯಕ್ತಿಯ ನಡುವಿನ ವ್ಯತ್ಯಾಸವನ್ನು ಕಂಡು ಹಿಡಿಯಲು ಯಾರಿಂದಲೂ ಆಗುತ್ತಿರಲಿಲ್ಲ. ಹಾಗೆ ಮೂರ್ತಿಗೆ ಜೀವ ತುಂಬುತ್ತಿದ್ದ ಅವನು. ಅನೇಕ ದೇಶಗಳ ರಾಜರು ಅವನನ್ನು ಮೆಚ್ಚಿ ಹೊಗಳಿ ಮಾತನಾಡಿದ್ದರಿಂದ ಅವನು ಬಹಳ ಹೆಮ್ಮೆ ಮತ್ತು ಗರ್ವದಿಂದ ತನ್ನ ವ್ಯಾಪಾರವನ್ನು ಮಾಡುತ್ತಿದ್ದ.

ಅವನು ಅನೇಕ ದೇವರ ಅನೇಕ ವಿಗ್ರಹಗಳನ್ನು ಕೂಡ ಮಾಡಿದ್ದ. ಹಾಗಾಗಿ ಅವನೊಳಗೆ ಒಂದು ದೈವೀ ಶಕ್ತಿಯೂ ಮೂಡಿತ್ತು. ಹೀಗಾಗಿ ತನ್ನ ವೃದ್ಧಾಪ್ಯದಲ್ಲಿ ಮರಣವು ತನ್ನನ್ನು ಯಾವಾಗ ಸಮೀಪಿಸುತ್ತದೆ ಎಂಬುದನ್ನು ಅವನು ಮೊದಲೇ ತಿಳಿದುಕೊಂಡಿದ್ದ. ಆ ದಿನ ಹತ್ತಿರವಾಯಿತು. ಅವನು ತನ್ನಂತೆಯೇ ಅನೇಕ ಪ್ರತಿಮೆಗಳನ್ನು ಮಾಡಿಟ್ಟುಕೊಂಡಿದ್ದ. ಸಾವಿನ ದಿನ ದೇವದೂತರು ಬಂದಾಗ, ಅವನು ಹೋಗಿ ವಿಗ್ರಹಗಳ ನಡುವೆ ಅಚಲವಾಗಿ ನಿಂತುಕೊಂಡ. ಆ ಶಿಲ್ಪಿ ಮತ್ತು ಅವನ ಪ್ರತಿಮೆಯ ನಡುವೆ ವ್ಯತ್ಯಾಸ ತಿಳಿಯದೆ ದೇವದೂತರು ಗೊಂದಲಗೊಂಡರು.

ಆಗ ಒಬ್ಬ ದೇವದೂತ ಒಂದು ಉಪಾಯ ಮಾಡಿದ. ಒಂದು ಮೂರ್ತಿಯನ್ನು ನೋಡಿ, "ಶಿಲ್ಪಿ ಇದನ್ನು ಕೆತ್ತುವುದರಲ್ಲಿ ಒಂದು ದೊಡ್ಡ ತಪ್ಪು ಮಾಡಿದ್ದಾನೆ" ಎಂದು ಅವನು ಹೇಳಿದ. ಅದನ್ನು ಕೇಳಿ ಶಿಲ್ಪಿಗೆ ಕೋಪ ಬಂತು. "ಏನಾಗಿದೆ ಅದಕ್ಕೆ? ನನ್ನ ಪ್ರತಿಮೆಗಳಲ್ಲಿ ಯಾರೂ ತಪ್ಪು ಹುಡುಕಲು ಸಾಧ್ಯವೇ ಇಲ್ಲ" ಎಂದು ಅವನು ಜೋರಾಗಿ ಕೂಗಿದ. "ಹೌದು, ಅದರಲ್ಲೇನೂ ತಪ್ಪಿಲ್ಲ, ನಿನ್ನನ್ನು ಹುಡುಕುವುದಕ್ಕೇ ಈ ನಾಟಕ" ಎಂದು ಹೇಳಿ ದೇವದೂತರು ಅವನ ಪ್ರಾಣ ತೆಗೆದು ಅವನನ್ನು ಕರೆದುಕೊಂಡು ಹೋದರು.

ಸುಮ್ಮನೆ ಬಡಾಯಿ ಕೊಚ್ಚಿಕೊಳ್ಳುವ ಜನರು ಪರಿಸ್ಥಿತಿ ತಿಳಿಯದೆ ತೊಂದರೆಗೆ ಸಿಲುಕುತ್ತಾರೆ.

ಇವೆಲ್ಲವೂ ಹೆಮ್ಮೆಯ ವಿಷಯಗಳು!

ಜೀವನದಲ್ಲಿ ಕೆಲವು ಸಂಗತಿಗಳು ಸಾಮಾನ್ಯವೆನಿಸಬಹುದು. ಆದರೆ ಅವುಗಳ ಬಗ್ಗೆಯೂ ಹೆಮ್ಮೆ ಪಡಬೇಕು. ಪ್ರತಿದಿನ ಸರಿಯಾದ ಸಮಯಕ್ಕೆ ಏಳುವ ಮತ್ತು ರಾತ್ರಿ ಸರಿಯಾದ ಸಮಯಕ್ಕೆ ಮಲಗುವ ಬಗ್ಗೆ ಹೆಮ್ಮೆ ಪಡಬೇಕು. ಮೂರು ಹೊತ್ತಿನ ಊಟವನ್ನು ಸಮಯಕ್ಕೆ ಸರಿಯಾಗಿ ತಿಂದರೆ ಅದಕ್ಕೂ ಹೆಮ್ಮೆ ಪಡಬೇಕು. ಪ್ರತಿದಿನವೂ ಸರಿಯಾಗಿ ಕೆಲಸ ಮುಗಿಸಿ ತೃಪ್ತಿಯಿಂದ ಮನೆಗೆ ಮರಳಿದರೆ. ಅದರ ಬಗ್ಗೆಯೂ ಹೆಮ್ಮೆ ಪಡಬೇಕು. ನೀವು ಯಾವುದೇ ಕ್ಷೇತ್ರದಲ್ಲಿದ್ದರೂ ಬದಲಾವಣೆಗಳು ಆಗುತ್ತಲೇ ಇರುತ್ತವೆ. ನೀವು ಮಾಡಿದ ಪ್ರಗತಿಯ ಬಗ್ಗೆ ಹೆಮ್ಮೆ ಪಡಬೇಕು. ಅನೇಕರು ಇವುಗಳನ್ನು ಸಹ ಮಾಡುವುದಿಲ್ಲ.

ಹೆಮ್ಮೆಯೊಳಗೂ ವಿನಯ ಇರಬೇಕು!

ಒಬ್ಬ ಸನ್ಯಾಸಿ ರಾಜನನ್ನು ಭೇಟಿಯಾಗಲು ಬಹು ದೂರದಿಂದ ಬಂದಿದ್ದ. ರಾಜನು ಆಸ್ಥಾನದಲ್ಲಿ ಮಹತ್ವದ ಸಮಾಲೋಚನೆಯಲ್ಲಿದ್ದುದರಿಂದ ಸನ್ಯಾಸಿಯು ಬಹಳ ಸಮಯ ಕಾಯಬೇಕಾಯಿತು. ಸಭೆ ಮುಗಿದ ನಂತರ ರಾಜನು ಅವನನ್ನು ಒಳಗೆ ಕರೆದು, "ಕ್ಷಮಿಸಿ, ನನಗೆ ಮುಖ್ಯವಾದ ಕೆಲಸವಿದ್ದುದರಿಂದ ನಾನು ನಿಮ್ಮನ್ನು ಕಾಯಿಸಬೇಕಾಗಿ ಬಂತು" ಎಂದ. ಸನ್ಯಾಸಿಯು ತನ್ನ ಪೇಟವನ್ನು ಕಳಚಿ ಕೈಯಲ್ಲಿ ಹಿಡಿದುಕೊಂಡು, ರಾಜನಿಗೆ ನಮಸ್ಕರಿಸಿ, 'ಪರವಾಗಿಲ್ಲ ಅರಸಾ!" ಎಂದು ಹೇಳಿದ. ರಾಜ ತಕ್ಷಣವೇ ಸಿಂಹಾಸನದಿಂದ ಎದ್ದು ನಿಂತು, ತನ್ನ ಕಿರೀಟವನ್ನು ತೆಗೆದು ತಲೆಬಾಗಿ ಅವನಿಗೆ ನಮಸ್ಕರಿಸಿದ.

ತಕ್ಷಣ ಪ್ರಧಾನ ಮಂತ್ರಿ ಗಾಬರಿಯಿಂದ, 'ಇದೇನು ಅರಸಾ? ಇವರು ಒಬ್ಬ ಸಾಮಾನ್ಯ ಸನ್ಯಾಸಿ. ಆದುದರಿಂದ ಇವರು ತಮ್ಮ ತಲೆಯ ಪೇಟವನ್ನು ತೆಗೆಯುತ್ತಾರೆ. ಆದರೆ ನೀವು ಹೋಗಿ ಇವರಿಗೆ ನಮಸ್ಕರಿಸಲು ನಿಮ್ಮ ಕಿರೀಟವನ್ನು ತೆಗೆದಿಡಬೇಕೇ?" ಎಂದು ಕೇಳಿದ. "ಮಂತ್ರಿಗಳೇ, ಇವರು ಅಪರಿಮಿತ ವಿನಯವನ್ನು ಪ್ರದರ್ಶಿಸಿದ್ದಾರೆ. ಒಬ್ಬ ರಾಜನಾಗಿ ನಾನು ಅವರಿಗಿಂತ ಹೆಚ್ಚು ವಿನಯವನ್ನು ತೋರಿಸುವುದು ತಾನೇ ಸರಿ. ವಿನಯ ಪ್ರದರ್ಶನದಲ್ಲಿ ರಾಜನೇ ಎಲ್ಲರಿಗಿಂತ ಶ್ರೇಷ್ಠನಾಗಿರಬೇಕಲ್ಲವೇ? ಅದಕ್ಕೇ ನಾನು ಹೀಗೆ ಮಾಡಿದ್ದು" ಎಂದು ರಾಜ ಹೇಳಿದ.

ಅಧಿಕಾರ ಇದ್ದಾಗ ಮಾತ್ರ ಅಲ್ಲ, ಯಾವ ರೀತಿಯ ಕೀರ್ತಿ, ಪ್ರಶಸ್ತಿಗಳು ಬಂದರೂ ನಮ್ಮೊಳಗೆ ವಿನಯ ಇರಬೇಕು, ಎಷ್ಟೇ ದೊಡ್ಡವರಾದರೂ 'ಈ ಜಗತ್ತಿನಲ್ಲಿ ನಮಗಿಂತ ದೊಡ್ಡವರಿದ್ದಾರೆ' ಎಂಬ ಭಾವನೆ ನಮ್ಮಲ್ಲಿರಬೇಕು. ನಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯ ಏನು ಎಂದು ನಮಗೆ ತಿಳಿದಿರಬೇಕು. ಒಂದು ಹಂತದಲ್ಲಿ ನಮ್ಮ ಬಲವು ನಮ್ಮನ್ನು ಗೆಲ್ಲುತ್ತದೆ ಮತ್ತು ಇನ್ನೊಂದು ಹಂತದಲ್ಲಿ ನಮ್ಮ ದೌರ್ಬಲ್ಯವು ನಮ್ಮನ್ನು ಮುಜುಗರಕ್ಕೀಡು ಮಾಡುತ್ತದೆ. ಇದನ್ನು ಅರ್ಥ ಮಾಡಿಕೊಳ್ಳಬೇಕು.

"ಈ ವ್ಯಾಪಾರದಲ್ಲಿ ನನ್ನಷ್ಟು ಪರಿಣತಿ ಪಡೆದಿರುವವರು ಯಾರೂ ಇಲ್ಲ" ಎಂದೋ ಅಥವಾ "ನಾನು ಬರುವ ಮುನ್ನ ಈ ಕಛೇರಿ ಹಾಳಾಗಿ ಹೋಗಿತ್ತು. ನಾನು ಬಂದೇ ಎಲ್ಲವನ್ನೂ ಸರಿಯಾಗಿ ಬದಲಾಯಿಸಿದ್ದು" ಎಂದು ಬಡಾಯಿ ಕೊಚ್ಚಿಕೊಳ್ಳುವವರಿಗಿಂತಲೂ ವಿನಯದಿಂದ ನಡೆದುಕೊಳ್ಳುವವರನ್ನೇ ಈ ಜಗತ್ತು ಹೆಚ್ಚು ಪ್ರೀತಿಸುತ್ತದೆ.

ಅದೇ ಸಮಯದಲ್ಲಿ, ವಿನಯದಿಂದ ಇರುತ್ತೇನೆ ಎಂದು ಭಾವಿಸಿ ಅತಿ ವಿನಯ ಪ್ರದರ್ಶಿಸುವದೂ ತರವಲ್ಲ. ನೀವು ಮಾಡುವ ಯಾವುದೇ ಒಳ್ಳೆಯ ಕೆಲಸಗಳೂ ಇತರರ ಗಮನಕ್ಕೆ ಬರುವುದಿಲ್ಲ.

ನಿಮ್ಮ ಶ್ರಮವನ್ನು ಬೇರೆಯವರು ತಮ್ಮದು ಎಂದು ಹೇಳಿಕೊಂಡರೂ ನೀವು ಸುಮ್ಮನಿರುವುದು ಸರಿಯಲ್ಲ. ನಿಮ್ಮನ್ನು ಹೊಗಳಲು ನಿಮ್ಮ ಸ್ನೇಹಿತರಿಗೆ ಸಿಗುವ ಅವಕಾಶವನ್ನು ನೀವು ಕಳೆದು ಬಿಡುತ್ತೀರಿ. ಇದ–ರಿಂದ ಕಚೇರಿಯಲ್ಲಿ ನಿಮಗೆ ಸರಿಯಾದ ಅರ್ಹವಾದ ಬಡ್ತಿ ಸಿಗದೆಯೂ ಹೋಗಬಹುದು.

ನಿಮ್ಮ ಕಠಿಣ ಪರಿಶ್ರಮ, ಯಶಸ್ಸು ಮತ್ತು ಸಾಧನೆಗಳನ್ನು ಬಡಾಯಿಯಂತೆ ತೋರಿಸಿಕೊಳ್ಳದೆ ಹೇಗೆ ತಿಳಿಸುತ್ತೀರಿ?

- ❖ "ನಾನು ಕಷ್ಟಪಟ್ಟು ಇದನ್ನು ಮಾಡಿದ್ದೇನೆ ಮತ್ತು ನಾನು ತುಂಬಾ ದಣಿದಿದ್ದೇನೆ" ಎಂದು ನಿರಾಸಕ್ತಿಯಿಂದ ಹೇಳುವುದು ಅಥವಾ "ಇದು ನನಗೆ ಸಾಮಾನ್ಯವಾದದು ತುಂಬಾ ಸುಲಭವಾದ ಕೆಲಸ" ಎಂದು ಉದಾಸೀನತೆ ತೋರಿಸುವುದು ಬೇಡ. ನೀವು ಕಷ್ಟಕರವಾದ ಒಂದು ಕೆಲಸವನ್ನು ಮಾಡಿ ಮುಗಿಸಿದಾಗ, "ಅದು ತುಂಬಾ ಕಷ್ಟಕರವಾಗಿತ್ತು. ಕಷ್ಟವಾದರೂ ನಾನು ಅದನ್ನು ಮುಗಿಸಲು ಬಯಸಿದೆ ಮತ್ತು ನಾನು ಅದನ್ನು ಮಾಡಿದ್ದೇನೆ" ಎಂದು ನೀವು ವಿನಮ್ರವಾಗಿ ಹೇಳಿರಿ. ಇದರಿಂದ ನಿಮ್ಮ ನಮ್ರತೆಯೂ ಬಹಿರಂಗವಾಗುತ್ತದೆ. ನೀವು ಮಾಡಿರುವ ಕೆಲಸ ಎಲ್ಲರಿಗೂ ಗೊತ್ತಾಗುತ್ತದೆ.
- ❖ ನಿಮ್ಮ ಸಾಧನೆಯನ್ನು ಎತ್ತಿ ತೋರಿಸಲು ಇತರರ ಕಾರ್ಯಗಳನ್ನು ಕಡಿಮೆ ಮಾಡಬೇಡಿ. "ಈ ಕಂಪನಿಯಲ್ಲಿ ನನ್ನ ಅರ್ಧದಷ್ಟು ಮಾರಾಟ ಮಾಡುವವರು ಕೂಡ ಬೇರೆ ಯಾರೂ ಇಲ್ಲ" ಎಂದು ಹೇಳುವುದು ಎಲ್ಲರ ನಡುವೆ ನಿಮ್ಮನ್ನು ಎದ್ದು ಕಾಣುವಂತೆ ಮಾಡುವುದಿಲ್ಲ. "ನನಗೆ ಒಳ್ಳೆಯ ಗ್ರಾಹಕರು ಇದ್ದಾರೆ. ಅವರು ಯಾವಾಗಲೂ ಹೆಚ್ಚು ಮಾರಾಟ ಮಾಡುವ ಸೇಲ್ಸ್‌ಮ್ಯಾನ್‌ಗಳ ಮೂಲಕ ನನಗೆ ದೊರಕಿದ್ದಾರೆ" ಎಂದು ನೀವು ಹೇಳಿದಾಗ ನಮ್ರತೆ ಮತ್ತು ನಿಮ್ಮ ಕಠಿಣ ಪರಿಶ್ರಮ ಎರಡೂ ಒಟ್ಟಿಗೆ ಬರುತ್ತದೆ.
- ❖ "ನನ್ನ ಯಶಸ್ಸಿಗೆ ನಾನೇ ಕಾರಣ, ನನ್ನ ಪರಿಶ್ರಮವೇ ನನ್ನನ್ನು ನಾನಿರುವಲ್ಲಿ ಇರಿಸಿದೆ" ಎಂದು ಹೇಳುವುದು ಹೆಗ್ಗಳಿಕೆ. ಸಹೋದ್ಯೋಗಿಗಳು, ಕುಟುಂಬ, ಸ್ನೇಹಿತರು, ಇತ್ಯಾದಿ ಪರಸ್ಪರ ಸಹಾಯ ಮಾಡುತ್ತಾರೆ. ಅವರ ಕೊಡುಗೆಯನ್ನು ನಮೂದಿಸಲೂ ಮರೆಯಬೇಡಿ.
- ❖ "ನಾನು ನುರಿತ ಕೆಲಸಗಾರ" ಎಂದು ಬಡಾಯಿ ಕೊಚ್ಚಿಕೊಳ್ಳುವುದಕ್ಕಿಂತ ಅಂಕಿಅಂಶಗಳನ್ನು ಉಲ್ಲೇಖಿಸುವುದು ಉತ್ತಮ. 'ಕಳೆದ ವರ್ಷಕ್ಕಿಂತ ಈ ವರ್ಷ ದುಪ್ಪಟ್ಟು ಲಾಭ ಗಳಿಸಿದ್ದೇವೆ' ಎಂದು ಹೇಳಿದಾಗ ಅದು ಪರೋಕ್ಷವಾಗಿ ನಿಮ್ಮ ಶ್ರಮವನ್ನು ತೋರಿಸುತ್ತದೆ.
- ❖ ಯಾವಾಗಲೂ ಕೃತಜ್ಞತೆಯನ್ನು ವ್ಯಕ್ತಪಡಿಸಿ. "ಈ ಕಂಪನಿ ನನಗೆ ಇಷ್ಟೆಲ್ಲ ಮಾಡುವ ಸ್ವಾತಂತ್ರ್ಯವನ್ನು ನೀಡಿತು" ಅಥವಾ "ಹಲವು ಜನರ ಸಹಾಯದಿಂದ ನಾನು ಅಂತಹ ಸಾಧನೆಯನ್ನು ಮಾಡಲು ಸಾಧ್ಯವಾಯಿತು" ಎಂದು ಏನನ್ನಾದರೂ ಹೇಳಲು ಪ್ರಾರಂಭಿಸಿ, ಅದರ ನಂತರ ಯಾರಾದರೂ ಅವರ ಯಶಸ್ಸಿನ ಬಗ್ಗೆ ಹೇಳಿದರೆ ಎಲ್ಲರೂ ಕೇಳುತ್ತಾರೆ.
- ❖ ಯಾರಾದರೂ "ನಾನು ಇದನ್ನು ಹೆಮ್ಮೆಯಿಂದ ಹೇಳುತ್ತಿಲ್ಲ" ಎಂದು ಪ್ರಾರಂಭಿಸಿದರೆ, ಅವರು ಮುಂದೆ ಹೇಳಲು ಹೊರಟಿರುವುದು ಬಡಾಯಿ ಎಂದು ಎಲ್ಲರಿಗೂ ತಿಳಿಯುತ್ತದೆ. "ಎಲ್ಲರಿಗೂ ಹೇಳಲು ನನ್ನ ಬಳಿ ಒಂದು ಒಳ್ಳೆಯ ಸುದ್ದಿ ಇದೆ..." ಎಂದು ನೀವು ಪ್ರಾರಂಭಿಸಿದರೆ, ಅದು ನಮ್ರತೆಯನ್ನು ತೋರಿಸುತ್ತದೆ.
- ❖ ಎಲ್ಲರಿಗೂ ಎಲ್ಲವನ್ನೂ ಹೇಳುವ ಅಗತ್ಯವಿಲ್ಲ. ಯಶಸ್ಸು ಅಥವಾ ಸಾಧನೆಯ ಬಗ್ಗೆ ಮಾತನಾಡಿ, ಅದರ ಬಗ್ಗೆ ಯಾರಿಗಾದರೂ ಹೇಳುವ ಮೂಲಕ ನೀವು ಸಕಾರಾತ್ಮಕ ಫಲಿತಾಂಶವನ್ನು ಪಡೆಯಬಹುದು. ●

ಓದುಗರ ಪತ್ರಗಳು



ಸಹಾಯ ಮಾಡುವ ಮೂಲಕ ಇತರರಿಗೆ ಒಳಿತಾಗುತ್ತದೆ ಎಂದು ಭಾವಿಸಿದ್ದೆ. ಇತರರಿಗೆ ಸಹಾಯ ಮಾಡುವುದರಿಂದ ನಮಗೆ ದೊರಕುವ ಒಳಿತುಗಳ ಬಗ್ಗೆ 'ಬಿಳುಪು' ಸಂಚಿಕೆ ಚೆನ್ನಾಗಿ ವಿವರಿಸಿದೆ.

– ಬಿ ರಾಮಚಂದ್ರ, ನಂಜನಗೂಡು.

ಕಳೆದ ತಿಂಗಳ 'ಬಿಳುಪು' ಮಾಸಪತ್ರಿಕೆಯು ಒಂದು ಬೊಕ್ಕಸಂತೆ ರಕ್ಷಿಸಿಡಬೇಕಾದ ಸಂಚಿಕೆಯಾಗಿದೆ. ಮನಸ್ಸನ್ನು ಹಗುರವಾಗಿಸುವ ಲೇಖನಗಳು ಇದರಲ್ಲಿವೆ. ಒಂದು ವಿಷಯದ ಬಗ್ಗೆ ಸಮಗ್ರವಾದ ಮಾಹಿತಿಯನ್ನು ಸೊಗಸಾಗಿ ನೀಡುತ್ತದೆ.

– ಕೆ. ಪರಮೇಶ್ವರ್, ತುಮಕೂರು.

ಏಪ್ರಿಲ್ ತಿಂಗಳ 'ಬಿಳುಪು' ಮಾಸಪತ್ರಿಕೆಯನ್ನು ಓದಿದೆ. ಮನೆಮಂದಿಯೆಲ್ಲರೂ ಓದಬಹುದಾದ ಸೊಗಸಾದ ಸಂಚಿಕೆ. ತಮಿಳಿನಲ್ಲಿರುವ ಲೇಖನಗಳನ್ನು ಕನ್ನಡಕ್ಕೆ ತುಂಬ ಸಹಜವಾಗಿ ಅನುವಾದಿಸಿ ಕೊಡುತ್ತಿದ್ದಾರೆ. ಎಲ್ಲೂ ಅನುವಾದದ ಛಾಯೆಯೇ ಇಲ್ಲ. ನೇರವಾಗಿ ಕನ್ನಡದಲ್ಲೇ ಬರೆದ ಲೇಖನಗಳನ್ನು ಓದುವಂತೆ ಭಾಸವಾಗುತ್ತದೆ. ಈ ಸಂಚಿಕೆಯ ಸಂಪಾದಕರಿಗೂ, ರಾಮ್‌ರಾಜ್ ಸಂಸ್ಥೆಯ ನಿರ್ವಾಹಕರಿಗೂ, ಅನುವಾದಕರಿಗೂ ಅಭಿನಂದನೆಗಳು.

– ಎಲ್.ಶಿವಕುಮಾರ್, ಹಾವೇರಿ.

'ಬಿಳುಪು ಮಾಸಪತ್ರಿಕೆಯು ಉನ್ನತವಾದ ಲೇಖನಗಳನ್ನು ನೀಡುತ್ತಾ ಬರುತ್ತಿದೆ. ಮನೆ ಮಂದಿಯೆಲ್ಲವೂ ಓದಬಹುದಾದ ಲೇಖನಗಳು ಇದರಲ್ಲಿವೆ.

– ಶ್ರೀವಿದ್ಯಾ, ಕೆಂಗೇರಿ, ಬೆಂಗಳೂರು.

ಹೆಮ್ಮೆ ಸೇರಿಸುವಂತಹ ಕೆಲಸಗಾರರಾಗಿರಿ!

ಯಾವ ಕೆಲಸವನ್ನು ಮಾಡಿದರೂ ಅದನ್ನು ಹೆಮ್ಮೆಯಿಂದಲೇ ಮಾಡಬೇಕು. ಶುಚಿ ಮಾಡುವ ಕೆಲಸವನ್ನೇ ಮಾಡುತ್ತಿದ್ದರೂ ಸರಿ, 'ವಿಶ್ವದ ಅತ್ಯುತ್ತಮ ಕ್ಲೀನರ್ ನಾನೇ. ನನಗಿಂತ ಉತ್ತಮವಾಗಿ ಯಾರೂ ಸ್ವಚ್ಛಗೊಳಿಸಲು ಸಾಧ್ಯವಿಲ್ಲ' ಎಂಬಂತೆ ಆ ಕೆಲಸವನ್ನು ಮಾಡಬೇಕು. ಆ ಕೆಲಸದ ಬಗ್ಗೆ ನಮ್ಮೊಳಗೆ ಹೆಮ್ಮೆಯೂ ಇರಬೇಕು. ಅದುವೇ ಜೀವನದಲ್ಲಿ ಉನ್ನತಿ ಸಾಧಿಸಲು ಇರುವ ಮಾರ್ಗ. ದುಡಿಮೆಯನ್ನು ಉತ್ಸಾಹದಿಂದ ಹೆಮ್ಮೆಯಿಂದ ಮಾಡಿದಾಗ ದಣಿವಾಗುವುದಿಲ್ಲ, ನೆಮ್ಮದಿ ಸಿಗುತ್ತದೆ ಮತ್ತು ಸಂತೋಷದಿಂದ ಕೆಲಸ ಮಾಡಬಹುದು. ಇದನ್ನು ಮಾಡುವವರೇ ತಮ್ಮನ್ನು ತಾವು ಉನ್ನತೀಕರಿಸಿ ಕೊಳುತ್ತಾರೆ ಮತ್ತು ಅವರು ಕೆಲಸ ಮಾಡುವ ಕಂಪನಿಯನ್ನು ಕೂಡ ಬೆಳೆಸುತ್ತಾರೆ.

ಘನತೆಯಿಂದ ಕೆಲಸ ಮಾಡುವುದು ಹೇಗೆ?

ಈ ಕೆಲಸದಲ್ಲಿ ನನ್ನ ಪಾತ್ರವು ಸಂಸ್ಥೆಗೆ ಹೇಗೆ ಸಹಾಯ ಮಾಡುತ್ತದೆ, ನನ್ನ ಸಹೋದ್ಯೋಗಿಗಳಿಗೆ ಏನು ಪ್ರಯೋಜನ, ಮತ್ತು ಗ್ರಾಹಕರಿಗೆ ಏನು ಪ್ರಯೋಜನ ಎಂದು ಯೋಚಿಸಿ. ಈ ಕೆಲಸವು ನಿಮಗೆ ಹೇಗೆ ಗೌರವವನ್ನು ತರುತ್ತದೆ ಎಂಬುದರ ಬಗ್ಗೆ ಮತ್ತು ನಿಮ್ಮ ಕುಟುಂಬವು ಅದರಿಂದ ಪಡೆಯುವ ಪ್ರಯೋಜನಗಳ ಬಗ್ಗೆ ಯೋಚಿಸಿ. ನೀವು ಖಂಡಿತವಾಗಿಯೂ ಹೆಮ್ಮೆಪಡುತ್ತೀರಿ.

- ಪ್ರತಿದಿನವೂ ನಿಮ್ಮ ಕೆಲಸ ಹಿಂದಿನ ದಿನಕ್ಕಿಂತ ಸುಧಾರಿಸಬೇಕು. ಪ್ರತಿದಿನ ನಾವು ಹಿಂದಿನ ದಿನಕ್ಕಿಂತ ಇಂದು ಉತ್ತಮವಾಗಿ ಏನು ಮಾಡಿದ್ದೇವೆ ಎಂದು ಯೋಚಿಸಬೇಕು. ಇದು ತೃಪ್ತಿ ಮತ್ತು ಹೆಮ್ಮೆಯನ್ನು ತರುತ್ತದೆ. ಅಪೂರ್ಣ ಗುರಿಯ ಬಗ್ಗೆ ಯೋಚಿಸಿ ಮತ್ತು ಅದನ್ನು ಪ್ರತ್ಯೇಕವಾಗಿ ಮಾಡಿ. ನೀವು ಅದನ್ನು ಸುಲಭವಾಗಿ ಪೂರ್ಣಗೊಳಿಸಬಹುದು.

- ಸಂಸ್ಥೆಯಲ್ಲಿ ಪ್ರತಿಯೊಬ್ಬರ ಕೆಲಸವೂ ಮೌಲ್ಯಯುತವಾಗಿದೆ. 'ಉಳಿದವರೆಲ್ಲ ಮಹತ್ವದ ಕೆಲಸ ಮಾಡುತ್ತಿದ್ದಾರೆ. 'ನಾನೊಬ್ಬ ಸಾಮಾನ್ಯ ಮನುಷ್ಯ' ಎಂಬ ಚಿಂತನೆ ಎಂದಿಗೂ ಮೂಡಬಾರದು. ಬೇರೆಯವರು ಹೇಳುವುದನ್ನು ನಂಬಬೇಡಿ. ಮುಖ್ಯವಾದ ಕಾರಣ ನೀವು ಆ ಕಂಪನಿಯಲ್ಲಿದ್ದೀರಿ.

- ನಿಮ್ಮ ಕೆಲಸದಲ್ಲಿ ನೀವು ಹೆಮ್ಮೆ ಪಡಬಹುದು. ಆದರೆ ನೀವು ನಿಮ್ಮ ಸಹೋದ್ಯೋಗಿಗಳಿಗೆ ಸಹಾಯ ಮಾಡಿದಾಗ ಮಾತ್ರ ತೃಪ್ತಿ ಬರುತ್ತದೆ. ಅವರು ಸಮಸ್ಯೆಯೊಂದಿಗೆ ಬಂದಾಗ, ಅವರಿಗೆ ಪರಿಹಾರಗಳನ್ನು ನೀಡಿ. 'ಯಾವುದೇ ಕೆಲಸವಾದರೂ ಅವರ ಬಳಿ ಹೋದರೆ ಸಹಾಯ ಸಿಗುತ್ತದೆ' ಎಂಬ ನಂಬಿಕೆಯನ್ನು ಮೈಗೂಡಿಸಿಕೊಳ್ಳಿ. ಅದರಲ್ಲಿರುವ ಹೆಮ್ಮೆ ಅನನ್ಯ!

- ಯಾವುದೇ ಕೆಲಸವನ್ನೇ ಆಗಲಿ ಎಲ್ಲರಿಗಿಂತ ವಿಭಿನ್ನವಾಗಿ ಮಾಡಿ. ಕಂಪನಿಯ ಅಭಿವೃದ್ಧಿಗೆ ನೀವು ಆಲೋಚನೆಗಳನ್ನು ಹೊಂದಿದ್ದರೆ, ಅವುಗಳನ್ನು ವ್ಯಕ್ತಪಡಿಸಲು ಮುಕ್ತವಾಗಿರಿ. ನಿಮ್ಮ ಯೋಜನೆಗಳು ನಿಮ್ಮ ಕಂಪನಿಯ ಮೌಲ್ಯವನ್ನು ಹೆಚ್ಚಿಸಬೇಕು.

- ಎಲ್ಲರನ್ನೂ ದಯೆ ಮತ್ತು ಗೌರವದಿಂದ ನಡೆಸಿಕೊಳ್ಳಿ. ಅದು ನಿಮ್ಮ ಸ್ವಭಾವವಾಗಿದ್ದರೆ ಕುಟುಂಬದಲ್ಲಿ ಶಾಂತಿ ನೆಲೆಸಿರುತ್ತದೆ. ಸಹೋದ್ಯೋಗಿಗಳು ಕೂಡ ಅವರಿಗೆ ಗೌರವವನ್ನು ತೋರಿಸುತ್ತಾರೆ. ಗ್ರಾಹಕರೊಂದಿಗೆ ಸೌಜನ್ಯದಿಂದ ವರ್ತಿಸಿ. ಇದು ಕಂಪನಿಗೆ ಹೆಮ್ಮೆ ತರುತ್ತದೆ.

- ನಿಮ್ಮ ಕೆಲಸದಲ್ಲಿ ನೀವು ಹೆಮ್ಮೆ ಪಡುವಂತೆಯೇ ಇತರರ ಕೆಲಸವನ್ನು

ಹೆಮ್ಮೆ ಪಡುವಂತೆ ಮಾಡಿ!

ಕಂಪನಿಯ ಉದ್ಯೋಗಿಯಿಂದ ಪ್ರಾರಂಭಿಸಿ ಮನೆಕೆಲಸದವರೆಗೆ ಯಾರೇ ಆಗಿರಲಿ, ನೀವು ಹೆಮ್ಮೆಪಡುವ ಅವಕಾಶಗಳನ್ನು ನೀಡಿದರೆ, ಅವರು ಉತ್ಸಾಹದಿಂದ ಕೆಲಸ ಮಾಡುತ್ತಾರೆ. ಇದನ್ನು ಮಾಡಲು ಕೆಲವು ವಿಧಾನಗಳು ಇಲ್ಲಿವೆ:

- ❖ 'ಇಲ್ಲಿನ ಪದ್ಧತಿ ಹೀಗಿದೆ, ಇದನ್ನೇ ಅನುಸರಿಸಬೇಕು. ಹೀಗೆ ಮಾಡುವುದು ವಿಶೇಷ' ಎಂದು ಆರಂಭದಲ್ಲಿ ಹೇಳಿ.
- ❖ 'ಮಾಡಬಾರದ' ಪಟ್ಟಿ ಇರುತ್ತದೆ. ಸಮಯಕ್ಕೆ ಮುಂಚಿತವಾಗಿ ಅವರಿಗೆ ತಿಳಿಸುವುದು ತಪ್ಪುಗಳನ್ನು ಮಾಡುವುದನ್ನು ತಡೆಯಲು ಒಂದು ಅವಕಾಶವಾಗಿದೆ.
- ❖ ಯಾರಾದರೂ ಹೊಸದಾಗಿ ಕೆಲಸಕ್ಕೆ ಸೇರಿದ್ದರೆ, ಅವರು ಸಂಸ್ಥೆಯ ಮೇಲೆ ಬೀರುವ ಪ್ರಭಾವದ ಬಗ್ಗೆ ಕಾಲಕಾಲಕ್ಕೆ ತಿಳಿಸಿ.
- ❖ ಅವನು ಮಾಡಬೇಕೆಂದು ತಿಳಿದಿರುವ ಎಲ್ಲವನ್ನೂ ಮಾಡಲು ಅವನಿಗೆ ಅವಕಾಶಗಳನ್ನು ರಚಿಸಿ.
- ❖ ಕಂಪನಿಯು ಎಲ್ಲಿ ಪ್ರಾರಂಭವಾಯಿತು ಮತ್ತು ಅದು ಹೇಗೆ ಬೆಳೆದಿದೆ ಮತ್ತು ಭವಿಷ್ಯದಲ್ಲಿ ಅದು ಎಲ್ಲಿ ಇರಬೇಕೆಂದು ಬಯಸುತ್ತದೆ ಎಂಬುದರ ಅರ್ಥವನ್ನು ಅವರಿಗೆ ತಿಳಿಸಿ.
- ❖ ನಾವು ಇತರ ಕಂಪನಿಗಳಿಗಿಂತ ಹೇಗೆ ಭಿನ್ನವಾಗಿದ್ದೇವೆ ಎಂಬುದನ್ನು ಸೂಚಿಸಿ.
- ❖ ಆ ಅನನ್ಯತೆಯನ್ನು ಕಾಪಾಡುವ ಜವಾಬ್ದಾರಿ ಅವರ ಮೇಲಿದೆ ಎಂಬುದನ್ನೂ ತಿಳಿಸಿ.
- ❖ ಅವರ ಯಶಸ್ಸನ್ನು ಶ್ಲಾಘಿಸಿ. ಎಲ್ಲರ ಮುಂದೆ ಇದನ್ನು ಮಾಡಿ. ಅವರ ತಪ್ಪುಗಳನ್ನು ಪ್ರತ್ಯೇಕವಾಗಿ ಖಂಡಿಸಿ.
- ❖ ಸರಿಯಾದ ಕ್ಷಣಗಳಲ್ಲಿ ಪ್ರಚಾರವನ್ನು ನೀಡಿ.

ಶ್ಲಾಘಿಸಿ. ಸಹೋದ್ಯೋಗಿಗಳು ಹೊಸ ಅಥವಾ ಉಪಯುಕ್ತವಾದುದನ್ನು ಮಾಡಿದಾಗ ಅವರನ್ನು ತೆರೆದು ಪ್ರಶಂಸಿಸಿ. ಇತರರು ನಿಮಗೆ ಸಹಾಯ ಮಾಡಿದಾಗ, ಧನ್ಯವಾದ ಹೇಳಲು ಮರೆಯಬೇಡಿ. ಇದೆಲ್ಲವೂ ನಿಮಗೆ ಹೆಮ್ಮೆ ತರುತ್ತದೆ.

➲ ಕೆಲಸದಲ್ಲಿ ಶಿಸ್ತು ಇರಬೇಕು. ಸಮಯಕ್ಕೆ ಸರಿಯಾಗಿ ಕೆಲಸ ಮಾಡುವ ಮತ್ತು ಸಮಯಕ್ಕೆ ಸರಿಯಾಗಿ ಕೆಲಸ ಮಾಡುವ ಖ್ಯಾತಿಯನ್ನು ಪಡೆಯಿರಿ. ಎಲ್ಲವನ್ನೂ ಸಂಪೂರ್ಣವಾಗಿ ಯೋಜಿಸಿ. ಗೆಲುವಿಗಾಗಿ ದುಡಿಯುತ್ತಿದ್ದೇವೆ ಎಂಬ ಚಿಂತನೆ ಸದಾ ನಮ್ಮಲ್ಲಿರಲಿ.

➲ ನಿಮಗೆ ಒಪ್ಪಿಸಲಾದ ಜವಾಬ್ದಾರಿಗಳನ್ನು ಸ್ವೀಕರಿಸಲು ಹಿಂಜರಿಯಬೇಡಿ. ಯಶಸ್ಸಿನ ಹೊಗಳಿಕೆಯಷ್ಟೇ ವೈಫಲ್ಯದ ಜವಾಬ್ದಾರಿಯನ್ನು ತೆಗೆದುಕೊಳ್ಳಿ ಟೀಕೆಗಳನ್ನು ಸ್ವೀಕರಿಸಲು ಮತ್ತು ಎದುರಿಸಲು ಹಿಂಜರಿಯಬೇಡಿ.

➲ ಪ್ರಲೋಭನೆಗಳಿಲ್ಲದೆ ಕೆಲಸಗಳನ್ನು ಮಾಡಿ. ಕೆಲಸದ ಸಮಯದಲ್ಲಿ ಐಡಲ್ ಚಾಟ್‌ಗಳನ್ನು ತಪ್ಪಿಸಿ. ಏನೇ ಸಮಸ್ಯೆ ಇದ್ದರೂ ಅದನ್ನು ಕೆಲಸದಲ್ಲಿ ತೋರಿಸಿಕೊಳ್ಳದಿರುವುದು ಉತ್ತಮ ಕೆಲಸಗಾರನ ಲಕ್ಷಣ.

ಕೆಲಸದಲ್ಲಿ ಹೆಮ್ಮೆ ಪಡುವುದು ವೈಯಕ್ತಿಕವಾಗಿಯೂ ಸಹ ನಿಮಗೆ ಒಳ್ಳೆಯದು. ಕಂಪನಿಗೂ ಒಳ್ಳೆಯದು. "ಈ ಕಂಪನಿಯಲ್ಲಿ ಯಾರೋ ಇದ್ದಾರೆ. ಈ ಕೆಲಸವನ್ನು ಇಷ್ಟು ಚೆನ್ನಾಗಿ ಮಾಡುವವರು ಸಿಗುವುದು ಕಷ್ಟ" ಎಂದು ಹೇಳಿದರೆ, ಇದು ನಿಮಗೆ ಬೆಳವಣಿಗೆಯನ್ನು ನೀಡುತ್ತದೆ. ನೀವು ಕಂಪನಿಯನ್ನು ಬೆಳೆಸಿದಾಗ ನಿಮಗೆ ಪ್ರತಿಫಲವೂ ಸಿಗುತ್ತದೆ. ನೀವು ಹೆಮ್ಮೆಯಿಂದ ಕೆಲಸ ಮಾಡಿದಾಗ ನಿಮ್ಮ ಕೆಲಸವು ಸಾರ್ಥಕವಾಗುತ್ತದೆ. ನಿಮ್ಮ ಮನಸ್ಥಿತಿ ಯಾವಾಗಲೂ ಸಂತೋಷವಾಗಿರುತ್ತದೆ. ನಿಮ್ಮ ಆತ್ಮವಿಶ್ವಾಸ ಮತ್ತು ಸ್ವಾಭಿಮಾನ ಹೆಚ್ಚಾಗುತ್ತದೆ. ●

ಹೆಮ್ಮೆಯ ಜೀವನ ಸಂಗಾತಿಯಾಗಿರಿ!

ಮಾನವರು ಭಾವನಾತ್ಮಕ ಪ್ರೀತಿ, ಕಾಳಜಿ, ಗೌರವ ಮತ್ತು ಬೆಂಬಲಕ್ಕಾಗಿ ಹಂಬಲಿಸುತ್ತಾರೆ. ಇವೆಲ್ಲವೂ ಸ್ನೇಹಿತರು, ಸಂಬಂಧಿಕರು, ಸಹೋದ್ಯೋಗಿಗಳು, ನೆರೆಹೊರೆಯವರು ಮತ್ತು ಕುಟುಂಬದಿಂದ ಬರಬಹುದು. ಆದರೆ ಇದೆಲ್ಲವೂ ನಿಮ್ಮ ಜೀವನ ಸಂಗಾತಿಯಲ್ಲಿ ಇರುವುದು ಮುಖ್ಯ. ಜೀವನದಲ್ಲಿ ನಿಮಗೆ ಬೇಷರತ್ತಾದ ಪ್ರೀತಿ, ಮೆಚ್ಚುಗೆ ಮತ್ತು ಹೆಮ್ಮೆಯನ್ನು ನೀಡುವ ಜೀವನ ಸಂಗಾತಿಗಿಂತ ಹೆಚ್ಚಿನದ್ದೊಲ್ಲ. ಬಿಕ್ಕಟ್ಟಿನ ಸಮಯದಲ್ಲಿ ಅವರು ತನ್ನ ಭುಜವನ್ನು ನೀಡಿದರೆ, ಯಾವುದೇ ಸಮಸ್ಯೆಗಳಿಂದ ಚೇತರಿಸಿಕೊಳ್ಳಬಹುದು. ಹಾಗಾದರೆ ಹೆಮ್ಮೆಯ ಸಂಗಾತಿಯಾಗುವುದು ಹೇಗೆ?

● ಕಾರ್ಯಗಳ ನಡುವೆಯೂ ಪ್ರತಿದಿನವೂ ಅವರೊಂದಿಗೆ ಸಂವಹನ ಮಾಡಿ. ನೀವು ದಿನದಲ್ಲಿ ಏನು ಮಾಡಿದ್ದೀರಿ ಎಂಬುದರ ಕುರಿತು ಕನಿಷ್ಠ ಕೆಲವು ಪದಗಳನ್ನು ಮಾತನಾಡಿ. ನಿಮ್ಮ ಆಲೋಚನೆಗಳು ಮತ್ತು ಭಾವನೆಗಳನ್ನು ವ್ಯಕ್ತಪಡಿಸಿ. ನಿಮ್ಮ ಸಂಗಾತಿಯ ಮಾತುಗಳು ಅಥವಾ ಕಾರ್ಯಗಳು ನೋವುಂಟು ಮಾಡಿದರೆ, ಅದನ್ನು ಮುಕ್ತವಾಗಿ ಹೇಳಿ. ಸಮಸ್ಯೆಗಳನ್ನು ತಪ್ಪಿಸಲು ಮೌನವು ಉತ್ತಮ ಮಾರ್ಗವಾಗಿದೆ ಎಂದು ಅವರು ಹೇಳುತ್ತಾರೆ. ಆದರೆ ನಿಮ್ಮ ಸಂಗಾತಿಯ ಬಗ್ಗೆ ಮೌನವಾಗಿರುವುದು ಅನಗತ್ಯ ಸಮಸ್ಯೆಗಳನ್ನು ಉಂಟು ಮಾಡುತ್ತದೆ.

● ಆಲಿಸಿ ಹಾಗೂ ಮಾತನಾಡಿ. ಸಂಗಾತಿಯು ಏನನ್ನಾದರೂ ಹೇಳಿದಾಗ, ಟಿವಿ ನೋಡುವುದು, ಸೆಲ್ ಫೋನ್ ನೋಡುವುದು, ಪತ್ರಿಕೆ ಓದುವುದು ಇತ್ಯಾದಿ ಮಾಡಬೇಡಿ. ಬೇಕಾಬಿಟ್ಟಿಯಾಗಿ ಅದನ್ನು ಕೇಳಬೇಡಿ. ಇಡೀ ಗಮನ ಅವರ ಮಾತಿನ ಮೇಲಿರಲಿ. ಮನೆಯಲ್ಲೂ ತಮ್ಮ ಕೆಲಸ ನೋಡಿಕೊಂಡು ಬೇರೆ ಲೋಕದಲ್ಲಿರುವವರು ಬಹಳ ಮಂದಿ ಇದ್ದಾರೆ. ಕೆಲವರು ಇದ್ದೂ ಇಲ್ಲದಂತಿರುತ್ತಾರೆ. ದೈಹಿಕವಾಗಿ ಮತ್ತು ಭಾವನಾತ್ಮಕವಾಗಿ ಹತ್ತಿರ ಇರುವುದು ಉತ್ತಮ.

● ನಿಮ್ಮ ಸಂಗಾತಿಯನ್ನು ನಿರ್ಲಕ್ಷಿಸಬೇಡಿ. 'ಬೇರೆ ದಾರಿಯಿಲ್ಲದೆ ಜೀವನದಲ್ಲಿ ನಮ್ಮೊಂದಿಗೆ ಒಡನಾಡುವವರು', 'ಅವರಿಗೆ ನಮಗಿಂತ ಬೇರೆ ವಿಧಿಯಿಲ್ಲ' ಎಂಬ ಆಲೋಚನೆಗಳು ಮತ್ತು ಮಾತುಗಳು ಮನಸ್ಸಿನಲ್ಲಿ ಶಾಶ್ವತವಾದ ನೋವನ್ನು ಉಂಟು ಮಾಡುತ್ತವೆ. ನಿಮ್ಮ ಅಗತ್ಯಗಳನ್ನು ಪೂರೈಸಲು ನಿರ್ಬಂಧಿತ ವ್ಯಕ್ತಿ ಎಂದು ಮಾತ್ರ ಭಾವಿಸುವುದು ತಪ್ಪು. ಹಲವಾರು ಸಂಸ್ಕಾರಗಳಿದ್ದರೂ ಪ್ರೀತಿಗೆ ಮಾತ್ರ ಇಬ್ಬರನ್ನು ಬಂಧಿಸುವ ಶಕ್ತಿ ಇದೆ. ಅದನ್ನು ಉಚಿತವಾಗಿ ಕೊಡುವವರಿಗೆ ಹೇರಳವಾಗಿ ನೀಡಲಾಗುವುದು. ನಿಮಗೆ ಅವಕಾಶ ಸಿಕ್ಕಾಗಲೆಲ್ಲಾ, ನಿಮ್ಮ ಜೀವನದಲ್ಲಿ ಅವರಿಗಿಂತ ಬೇರೆ ಯಾರೂ ಮುಖ್ಯ ಇಲ್ಲ ಎಂದು ಅವರಿಗೆ ನೆನಪಿಸುತ್ತಿರಿ.

• ನಿಮ್ಮ ಸಂಗಾತಿಯ ಭಾವನೆಗಳನ್ನು ಗೌರವಿಸಿ. ಏನಾದರೂ ತಪ್ಪಾದಲ್ಲಿ, ಕ್ಷಮೆ ಯಾಚಿಸಲು ಹಿಂಜರಿಯಬೇಡಿ. ಆದರೆ ಪದೇ ಪದೇ ತಪ್ಪು ಮಾಡಿದ ನಂತರ ಕ್ಷಮೆ ಕೇಳುವುದು ಸರಿಯಲ್ಲ. ನಿರಂತರ ಕ್ಷಮೆ ಯಾಚನೆಗಳು ಪ್ರಾಮಾಣಿಕವಲ್ಲ.

• ನಿಮ್ಮ ಸಂಗಾತಿಯು ಅವರ ಅಗತ್ಯತೆಗಳು ಮತ್ತು ಆದ್ಯತೆಗಳನ್ನು ನಿರ್ಧರಿಸಲು ಸ್ವತಂತ್ರರಾಗಿರಬೇಕು. ಅದಕ್ಕೆ ಅವರಿಗೂ ಜಾಗ ಸಿಗಬೇಕು. ಜೀವನದಲ್ಲಿ ಒಬ್ಬರೇ ನಿರ್ಧಾರ ತೆಗೆದುಕೊಳ್ಳುತ್ತಾರೆ ಮತ್ತು ಅದನ್ನು ಇನ್ನೊಬ್ಬರ ಮೇಲೆ ಹೇರುತ್ತಾರೆ ಎಂದಾದರೆ, ಇಬ್ಬರೂ ಸಂತೋಷವಾಗಿರುವುದಿಲ್ಲ.

• ನೀವು ಮಾಡುವ ಯಾವುದೇ ನಿರ್ಧಾರಕ್ಕೆ ಮುನ್ನ ನಿಮ್ಮ ಸಂಗಾತಿಯನ್ನು ಕೇಳಿ. 'ನನಗೆ ಎಲ್ಲವೂ ಗೊತ್ತಿದೆ ಮತ್ತು ನಾನು ತೆಗೆದುಕೊಳ್ಳುವ ನಿರ್ಧಾರ ಸರಿಯಾಗಿದೆ ಎಂದು ಭಾವಿಸುವುದು ಅಹಂಕಾರ. ನಿರ್ಧಾರವು ನಿಮ್ಮದೇ ಆಗಿದ್ದರೂ, ನಿಮ್ಮ ಸಂಗಾತಿಯೊಂದಿಗೆ ನೀವು ಸಮಾಲೋಚಿಸಿದಾಗ, 'ನಾವು ಈ ಕುಟುಂಬದ ಪ್ರಮುಖ ಭಾಗವಾಗಿದ್ದೇವೆ ಮತ್ತು ನಮ್ಮ ಅಭಿಪ್ರಾಯಕ್ಕೆ ಬೆಲೆ ಇದೆ' ಎಂದು ಅವರು ಭಾವಿಸುತ್ತಾರೆ. ಇದು ಅವರಿಗೆ ಹೆಮ್ಮೆ ತರುತ್ತದೆ.

• ಅನಿರೀಕ್ಷಿತ ಆಶ್ಚರ್ಯಗಳು ಜೀವನವನ್ನು ಆಸಕ್ತಿದಾಯಕವಾಗಿಸುತ್ತವೆ. ಪ್ರಮುಖ ದಿನಗಳು ಮತ್ತು ಅಗತ್ಯ ಸಂದರ್ಭಗಳಲ್ಲಿ ಉಡುಗೊರೆಗಳೊಂದಿಗೆ ಆಶ್ಚರ್ಯವು ಇರಲಿ. ಉಡುಗೊರೆಗಳಿಗಿಂತ, ಮಾತನಾಡುವ ಪದಗಳು ಮುಖ್ಯವಾಗಿರುತ್ತವೆ.

• ಅವರ ಸಾಮರ್ಥ್ಯಗಳನ್ನು ಅನುಮಾನಿಸಬೇಡಿ. ಅವರು ಹೊಸದನ್ನು ಪ್ರಯತ್ನಿಸಿದಾಗ, 'ನೀವು ಇದನ್ನು ಮಾಡಬಹುದು' ಎಂದು ಅವರನ್ನು ಪ್ರೋತ್ಸಾಹಿಸಿ. ಅದನ್ನು ಸರಿಯಾಗಿ ಮಾಡಲು ಅವರಿಗೆ ಮಾರ್ಗದರ್ಶನ ನೀಡಿ ಮತ್ತು ಅವರಿಗೆ ಅಗತ್ಯವಿರುವ ಸಹಾಯವನ್ನು ನೀಡಿ. ಅವರ ಜೀವನದ ಕನಸುಗಳನ್ನು ನನಸಾಗಿಸಲು ಅವರನ್ನು ಬೆಂಬಲಿಸುವುದು ಜೀವನ ಸಂಗಾತಿಯಾಗಿ ನಿಮ್ಮ ಕರ್ತವ್ಯ.

• ಅನೇಕ ದಂಪತಿಗಳಲ್ಲಿ, ಧನ್ಯವಾದ ಪದವನ್ನು ಹಂಚಿಕೊಳ್ಳುವುದು ಸಾಮಾನ್ಯವಾಗಿ ಮರೆತು ಹೋಗಿರುತ್ತದೆ. 'ಇದೆಲ್ಲ ನಮಗೇಕೆ?' ಎಂದು ತಪ್ಪಿಸಿಕೊಳ್ಳುತ್ತಾರೆ. ಆದರೆ ಧನ್ಯವಾದ ಎಂಬುದು ಕೇವಲ ಔಪಚಾರಿಕ ಪದವಲ್ಲ. 'ನೀವು ನನಗಾಗಿ ಮಾಡಿದ್ದನ್ನು ನಾನು ಮೆಚ್ಚುತ್ತೇನೆ' ಎಂದು ಇನ್ನೊಬ್ಬರಿಗೆ ತಿಳಿಸುವ ಮಾತು. ಧನ್ಯವಾದ ಮತ್ತು ಮೆಚ್ಚುಗೆಯನ್ನು ತಿಳಿಸುವುದು ಜೀವನವನ್ನು ಹೆಚ್ಚು ಅರ್ಥಪೂರ್ಣವಾಗಿಸಬಹುದು.

• ಅನೇಕ ಜನರು ಜೀವನ ಸಂಗಾತಿಯನ್ನು ತಮ್ಮ ಜೀವನದಲ್ಲಿ ತಮಾಷೆಯಾಗಿ ಪರಿಗಣಿಸುತ್ತಾರೆ. ಅವರ ಮುಂದೆ ಅನೇಕರು ಕೀಟಲೆ ಮಾಡುತ್ತಾರೆ. ಅವರನ್ನು ಅಜ್ಞಾನಿ ಎಂದು ಹೆಸರಿಸುತ್ತಾರೆ ಮತ್ತು ಅವರನ್ನು ಅಪಹಾಸ್ಯ ಮಾಡುತ್ತಾರೆ. ನಿಮ್ಮ ಸಂಗಾತಿಯ ಭಾವನೆಗಳೊಂದಿಗೆ ಆಟವಾಡಬೇಡಿ. ಇತರರ ಮಾತಿಗಿಂತ ನಿಮ್ಮ ಮಾತುಗಳು ಅವರಿಗೆ ಹೆಚ್ಚು ನೋವುಂಟು ಮಾಡುತ್ತವೆ. ಯಾವಾಗಲೂ ಅವರಿಗೆ ಗೌರವವನ್ನು ನೀಡಿ.

• ಸಂಬಂಧದಲ್ಲಿ ಯಾವುದೇ ಸತ್ಯವಿಲ್ಲದಿದ್ದರೆ, ಸಂಬಂಧವೇ ಅರ್ಥಹೀನವಾಗುತ್ತದೆ. ನಿಮ್ಮ ಜೀವನಸಂಗಾತಿಗೆ ನಿಷ್ಠರಾಗಿರಿ. ನಿಮ್ಮಿಬ್ಬರ ನಡುವೆ ಯಾವುದೇ ರಹಸ್ಯ ಇರಬಾರದು. ನೀವು ಕೆಲವು ವಿಷಯಗಳನ್ನು ಹಂಚಿಕೊಳ್ಳುವಾಗ ವಾದಗಳು ಉದ್ಭವಿಸಬಹುದು. ನಿಮ್ಮ ಪ್ರಕರಣವನ್ನು ಸ್ಪಷ್ಟಪಡಿಸಿ. ತೊಂದರೆ ತಪ್ಪಿಸಲು ಹೇಳಿದ ಸುಳ್ಳು ನಂತರ ಅನಗತ್ಯ ತೊಂದರೆ ಉಂಟು ಮಾಡಬಹುದು.

• ಯಾವಾಗಲೂ ನಿಮ್ಮ ಮಾತನ್ನು ಉಳಿಸಿಕೊಳ್ಳಿ. ನೀವು ಮಾಡಬಹುದಾದ ಕೆಲಸಗಳನ್ನು ಮಾತ್ರ ಮಾಡುವುದಾಗಿ ಭರವಸೆ ನೀಡಿ. ಏನೇ ಆಗಲಿ ಅವರಿಗೆ ಅಂಟಿಕೊಳ್ಳಿ. ಮಾತಿಗೂ ಬದುಕಿಗೂ ವ್ಯತ್ಯಾಸವಿದ್ದರೆ ಅಂಥವರಿಗೆ ಬೆಲೆಯೇ ಇಲ್ಲ.

• 'ಜೋಡಿಯಾಗಿ ಬಾಳುವುದು' ಎಂದು ನಿದರ್ಶನವಾಗಿರುವ ಎಲ್ಲ ಜೋಡಿಗಳೂ ದಿನದ ೨೪ ಗಂಟೆಯೂ ಜೊತೆಯಲ್ಲಿರುವುದಿಲ್ಲ. ಕೆಲಸ ಮತ್ತು ಜೀವನದ ಅಗತ್ಯಗಳಿಗಾಗಿ ಹಲವು ಗಂಟೆಗಳು ಪ್ರತ್ಯೇಕವಾಗಿರುತ್ತಾರೆ. ಒಬ್ಬರು ಇನ್ನೊಬ್ಬರ ನಿರ್ಧಾರವನ್ನು ಕುರುಡಾಗಿ ಬೆಂಬಲಿಸುವುದಿಲ್ಲ. ತಪ್ಪು ನಿರ್ಧಾರಗಳನ್ನು ತೆಗೆದುಕೊಂಡಾಗ, ಅವರಿಗೆ 'ಇದು ಸರಿಯಲ್ಲ' ಎಂದು ಹೇಳಲಾಗುತ್ತದೆ. ಸಂಗಾತಿಯು ಕೇಳುವ ಎಲ್ಲವನ್ನೂ ಇನ್ನೊಬ್ಬರು ಮಾಡುವುದಿಲ್ಲ. 'ಇದು ನಮಗೆ ಸೂಕ್ತವಲ್ಲ' ಎಂದು ವಿವರಿಸಲು ಅವರು ನಿರಾಕರಿಸುತ್ತಾರೆ.

ಆದರೆ ಇದೆಲ್ಲವನ್ನೂ ಮೀರಿ ಸಂಗಾತಿಗೆ 'ನಾವು ಸುರಕ್ಷಿತ ಸ್ಥಳದಲ್ಲಿದ್ದೇವೆ' ಎಂಬ ಸಮಾಧಾನದ ಭಾವವನ್ನು ನೀಡುತ್ತದೆ. ಅದು ನಿಜವಾದ ಹೆಮ್ಮೆ. ●

ಹೆಮ್ಮೆ ಪಡುವಂತಹ ಪೋಷಕರಾಗಿರಿ!

ಒಂದು ಮಗುವನ್ನು ಬೆಳೆಸುವಷ್ಟು ಒತ್ತಡದ ಕರ್ತವ್ಯ ಇನ್ನೊಂದಿಲ್ಲ. ದಯೆ, ಧೈರ್ಯ, ಸ್ವಾತಂತ್ರ್ಯ ಮತ್ತು ಜ್ಞಾನದ ಎಲ್ಲಾ ಗುಣಗಳನ್ನು ಹೊಂದಿರುವ ವ್ಯಕ್ತಿಗಳಾಗಿ ಅವರನ್ನು ಸರಿಯಾದ ರೀತಿಯಲ್ಲಿ ಬೆಳೆಸುವುದು ದೊಡ್ಡ ಸವಾಲಾಗಿರುತ್ತದೆ. ಅವರಿಗೆ ಏನೂ ಆಗದಂತೆ ಎಚ್ಚರಿಕೆ ವಹಿಸಬೇಕು.

ತಪ್ಪು ಮಾಡದ ಪೋಷಕರಿಲ್ಲ. ತಪ್ಪು ಮಾಡದ ಮಕ್ಕಳಿಲ್ಲ. ತಮ್ಮ ಮಕ್ಕಳ ತಪ್ಪುಗಳನ್ನು ತಿದ್ದುವ, ಅವರ ತಪ್ಪುಗಳಿಂದ ಪಾಠ ಕಲಿತು, ಸರಿಯಾದ ಕೆಲಸ ಮಾಡುವ ಪಾಲಕರು ಹೆಮ್ಮೆ ಪಡುತ್ತಾರೆ. ಅದನ್ನು ಬದಲಾಯಿಸಲು ಕೆಲವು ವಿಚಾರಗಳು ಇಲ್ಲಿವೆ:

- ಮಕ್ಕಳು ಭಾವನೆಗಳ ಊಟೆಯಾಗಿರುತ್ತಾರೆ. ಅವರಿಗೆ ಹಠಾತ್ ಕೋಪ ಬರುತ್ತದೆ. ಅವರು ಅದನ್ನು ಮರೆತು ನಿಮಿಷಗಳಲ್ಲಿ ನಗುತ್ತಾರೆ. ಅವರು ಅನಿರೀಕ್ಷಿತ ಸಂದರ್ಭಗಳಲ್ಲಿ ಉದಾರತೆಯಿಂದ ವರ್ತಿಸುತ್ತಾರೆ ಮತ್ತು ಯೋಚಿಸದೆ ಸಣ್ಣ ವಿಷಯಗಳ ಬಗ್ಗೆ ಹಠ ಮಾಡುತ್ತಾರೆ. ಅವರ ಭಾವನೆಗಳನ್ನು ಗೌರವಿಸಿ ಮತ್ತು ಯಾವಾಗಲೂ ಸಂವಹನ ನಡೆಸಿ.

- ನೀವು ವಾಹನವನ್ನು ಖರೀದಿಸಿದಾಗ, ಅದನ್ನು ಹೇಗೆ ನಿರ್ವಹಿಸಬೇಕು ಎಂದು ಹೇಳುವ ಕೈಪಿಡಿಯನ್ನು ನೀವು ಪಡೆಯುತ್ತೀರಿ. ಯಾವುದೇ ಯಂತ್ರವನ್ನು ಖರೀದಿಸುವಾಗ, ಅದನ್ನು ಹೇಗೆ ಮಾಡುವುದು ಅದನ್ನು ಹೇಗೆ ಬಳಸುವುದು ಎಂಬುದರ ಕುರಿತು ಅವರು ನಿಮಗೆ ಮಾರ್ಗದರ್ಶಿ ಪುಸ್ತಕವನ್ನು ನೀಡುತ್ತಾರೆ. ಇಂತಹ ಕೈಪಿಡಿಗಳಿಂದ ಮಕ್ಕಳು ನಮ್ಮ ಕೈಗೆ ಬರುವುದಿಲ್ಲ. ಪ್ರತಿ ಮಗುವೂ ವಿಶಿಷ್ಟವಾಗಿರುತ್ತದೆ. ಪ್ರತಿ ಕ್ಷಣವೂ ಅವರ ಅಗತ್ಯಗಳು ವಿಭಿನ್ನವಾಗಿರುತ್ತವೆ. 'ಮಕ್ಕಳನ್ನು ಹೀಗೆಯೇ ಬೆಳೆಸಬೇಕು' ಎಂಬ ಸಾಮಾನ್ಯ ಮಾರ್ಗಸೂಚಿಗಳಿದ್ದರೂ ಅದು ಪ್ರತಿ ಮಗುವಿನ ಗುಣಲಕ್ಷಣಗಳಿಗೆ ಅನುಗುಣವಾಗಿ ಬದಲಾಗುತ್ತದೆ. ನೀವು ಮಕ್ಕಳಿಗೆ ಹಲವು ವಿಷಯಗಳನ್ನು ಪರಿಚಯಿಸುತ್ತೀರಂತೆ. ಮಗುವನ್ನು ಬೆಳೆಸುವುದು ಹೇಗೆ ಎಂದು ಅವರು ನಿಮಗೆ ಕಲಿಸುತ್ತಾರೆ. ಅದನ್ನು ಅರ್ಥ ಮಾಡಿಕೊಳ್ಳಿ ಮತ್ತು ಅವರಿಗೆ ಗಮನ ಕೊಡಿ.

- ಮಗು ತನ್ನ ಹೆತ್ತವರ ಗುಣಲಕ್ಷಣಗಳನ್ನು ಹೊಂದಿರುತ್ತದೆ. ಅದಕ್ಕೂ ಮಿಗಿಲಾಗಿ, ಅವರಲ್ಲಿ ಚಮತ್ಕಾರಗಳು ಮತ್ತು ಪ್ರತಿಭೆಗಳಿವೆ. ಒಂದು ಮಗು ಗಣಿತದಲ್ಲಿ ಮೇಲುಗೈ ಸಾಧಿಸಬಹುದು. ಆದರೆ ಇನ್ನೊಬ್ಬರು ಯಾವುದೇ ಯಂತ್ರವನ್ನು ಟಿಂಕರಿಂಗ್ ಮತ್ತು ಫಿಕ್ಸಿಂಗ್ ಮಾಡುವಲ್ಲಿ ಪ್ರತಿಭಾನ್ವಿತರಾಗಿರಬಹುದು. ಒಂದು ಮಗು ಚಿತ್ರಕಲೆಯಲ್ಲಿ ಪರಿಣತಿ ತೋರಿಸಬಲ್ಲದು. ಅವರು ನಮ್ಮಂತೆ ಅಲ್ಲ, ನಾವು ನಿರೀಕ್ಷಿಸಿದ ರೀತಿಯಲ್ಲಿ ಅಲ್ಲ, ಬೇರೆ ದಾರಿಯಲ್ಲಿ ಹೋಗುತ್ತಿದ್ದಾರೆ ಎಂದು

ಚಿಂತಿಸಬೇಡಿ. ಅವರ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿ. ಅದೇ ಸಮಯದಲ್ಲಿ ಅವರು ಪ್ರಮುಖ ಕೌಶಲ್ಯಗಳನ್ನು ಕಳೆದುಕೊಳ್ಳುವುದಿಲ್ಲ ಎಂದು ಖಚಿತಪಡಿಸಿಕೊಳ್ಳಿ.

- ಎಲ್ಲಾ ಮನುಷ್ಯರಿಗೆ ಸಾಮರ್ಥ್ಯ ಮತ್ತು ದೌರ್ಬಲ್ಯ, ನ್ಯೂನತೆ ಮತ್ತು ದೌರ್ಬಲ್ಯಗಳಿರುತ್ತವೆ! ಮಕ್ಕಳಿಂದ ನಮ್ಮಲ್ಲಿಲ್ಲದ ಪರಿಪೂರ್ಣತೆಯನ್ನು ನಿರೀಕ್ಷಿಸಬೇಡಿ, ಅವರು ತಪ್ಪು ಮಾಡಿದಾಗ ಮತ್ತು ಎಡವಿದಾಗ, ಅವರು ಬದಲಾದಾಗ, ಅವರು ತಮ್ಮ ಚಿನ್ನದ ದೌರ್ಬಲ್ಯಗಳನ್ನು ಅರಿತುಕೊಂಡು ಕೀಳರಿಮೆಯನ್ನು ಅನುಭವಿಸಿದಾಗ, 'ಇದೆಲ್ಲವೂ ಪ್ರಕೃತಿ' ಎಂದು ಅರಿತುಕೊಳ್ಳಿ ಅವರನ್ನು ಉಳಿಸಿ.

- ಮಗುವನ್ನು, ಆಶೀರ್ವದಿಸಲು ದೇವಲೋಕದಿಂದ ಬಂದ ದೇವತೆ ಎಂಬಂತೆ ನಡೆಸಿಕೊಳ್ಳಬೇಡಿ. ಅವರು ತಪ್ಪುಗಳನ್ನು ಮಾಡುತ್ತಾರೆ, ಸುಳ್ಳು ಹೇಳುತ್ತಾರೆ, ಏನಾದರೂ ತಪ್ಪು ಮಾಡುತ್ತಾರೆ ಮತ್ತು ಅದನ್ನು ನಿಮ್ಮಿಂದ ಮರೆಮಾಡಲು ಪ್ರಯತ್ನಿಸುತ್ತಾರೆ. ಸಿಟ್ಟು ಮಾಡಿಕೊಳ್ಳಬೇಡಿ ಮತ್ತು 'ನಮ್ಮ ಮಗು ಹೀಗಿದೆ' ಎಂದು ಅವರನ್ನು ಶಿಕ್ಷಿಸಬೇಡಿ. ಹಾಗೆ ಶಿಕ್ಷಿಸಿದರೂ ಕೂಡಲೇ ಕ್ಷಮೆ ಯಾಚಿಸಿ. ತಪ್ಪು ಮಾಡಿದರೆ ಅವರೂ ಕ್ಷಮೆ ಕೇಳುವ ಅಭ್ಯಾಸವನ್ನೂ ಬೆಳೆಸಿಕೊಳ್ಳುತ್ತಾರೆ.

- ಮಗು ಚಿಕ್ಕದಾಗಿದ್ದಾಗ ತುಂಬಾ ಪ್ರೀತಿಯಿಂದ ವರ್ತಿಸುವ ಅನೇಕ ಪೋಷಕರು, ಮಗು ಬೆಳೆದಂತೆ ಕಡಿಮೆ ಪ್ರೀತಿಯನ್ನು ತೋರುತ್ತಾರೆ. ಆಹಾರ ಪದ್ಧತಿ, ಅಧ್ಯಯನ, ಕ್ರೀಡೆ, ಬಟ್ಟೆ ಹೀಗೆ ಹಲವು ವಿಷಯಗಳಿಗೆ ಮಕ್ಕಳನ್ನು ದೂಷಿಸಲಾಗುತ್ತಿದೆ. ಇದು ಮಕ್ಕಳು ಮತ್ತು ಪೋಷಕರ ನಡುವೆ ದೊಡ್ಡ ಅಂತರವನ್ನು ಸೃಷ್ಟಿಸುತ್ತದೆ. ಈ ಅಂತರವು ಯಾವುದೇ ವಯಸ್ಸಿನಲ್ಲಿ ಉಂಟಾಗದಂತೆ ನೋಡಿಕೊಳ್ಳಿ. ಉಡುಗೊರೆಗಳನ್ನು ನೀಡುವುದು, ಅವರೊಂದಿಗೆ ಸಮಯ ಕಳೆಯುವುದು. ಅವರವರ ಅಭಿರುಚಿಯ ಬಗ್ಗೆ ತಿಳಿದುಕೊಳ್ಳುತ್ತಾ ಸಂಭಾಷಿಸುತ್ತಾ ಸದಾ ಅವರವರ ಲೋಕದಲ್ಲಿರಿ. ಪ್ರೀತಿಗೂ ಅದರ ಮಧ್ಯೆ ಶಿಸ್ತು ಬೇಕು. ಅವರನ್ನು ರಕ್ಷಿಸಲು, ಅವರಿಗೆ ಯಾವುದೇ ತಪ್ಪು ಸಂಭವಿಸದಂತೆ ತಡೆಯಲು ಅವರಿಗೆ ಸರಿಯಾದ ಮೇಲ್ವಿಚಾರಣೆ ಮತ್ತು ಶಿಸ್ತು ನೀಡಿ. ಅದೇ ಸಮಯದಲ್ಲಿ, ಅವುಗಳನ್ನು ರಕ್ಷಿಸಲು ಲೌಕಿಕ ಅನುಭವಗಳನ್ನು ತಡೆಹಿಡಿಯಬೇಡಿ. ಸಮಾಜದಲ್ಲಿ ಒಳ್ಳೆಯದಾಗುತ್ತದೆ. ಕೆಟ್ಟ ವಿಷಯಗಳು ಇರುತ್ತವೆ ಎಂದು ಅವರು ತಿಳಿದುಕೊಳ್ಳಬೇಕು. ಆ ಅನುಭವಗಳಿಲ್ಲದಿದ್ದರೆ ಅವರು ಮುಗ್ಗರಿಸುವುದಿಲ್ಲ.

- ಮಕ್ಕಳ ಆದ್ಯತೆಗಳು ಅದ್ಭುತವಾಗಿರುತ್ತವೆ. ನಾವು ಎಂದಿಗೂ ಕನಸು ಕಾಣದಂತಹ ವಿಷಯಗಳನ್ನು ಅವರು ಬಯಸುತ್ತಾರೆ ಮತ್ತು ನಾವು ಇಚ್ಛೆಯಿಂದ ಅವರಿಗೆ ಮಾಡುವ ಕೆಲಸವನ್ನು 'ಇಷ್ಟವಿಲ್ಲ' ಎಂದು ತಿರಸ್ಕರಿಸುತ್ತಾರೆ. ನಮಗೆ ಇಷ್ಟವಾದದ್ದು ಅವರಿಗೆ ಇಷ್ಟವಾಗಬೇಕು ಎಂಬ ಒತ್ತಾಯವಿಲ್ಲ. ಇದನ್ನು ಅರ್ಥ ಮಾಡಿಕೊಳ್ಳಿ. ಅವರ ಆಸೆಗಳಿಗೆ ದಾರಿ ಮಾಡಿ ಕೊಡಿ. ಅದೇ ಸಮಯದಲ್ಲಿ, ಅವರ ಆಸೆಗಳು ಅವರನ್ನು ಎಲ್ಲೋ ತೊಂದರೆಗೆ ಸಿಲುಕಿಸುತ್ತವೆ ಎಂದು ನೀವು ಭಾವಿಸಿದರೆ, ಅವರಿಗೆ ಪ್ರಬುದ್ಧ ರೀತಿಯಲ್ಲಿ ಹೇಳಿ. ತಪ್ಪು ಆಸೆಗಳನ್ನು ಖಂಡಿಸಿ ಮತ್ತು ಶಿಸ್ತು ಮಾಡಿ.

- ಮಕ್ಕಳಿಗೆ ಹೆಚ್ಚು ಇಷ್ಟವಾಗುವವರೂ ನೀವೇ, ಅವರಿಗೆ ಹೆಚ್ಚು ಇಷ್ಟವಾಗದವರೂ ನೀವೇ. ಈ ವಿರೋಧಾಭಾಸವನ್ನು ಅರ್ಥ ಮಾಡಿಕೊಳ್ಳಿ. ಅವರು ಇಷ್ಟಪಡುವುದನ್ನು ನೀವು ಮಾಡಿದಾಗ, ಅವರು ನಿಮ್ಮನ್ನು ಹೆಚ್ಚು ಪ್ರೀತಿಸುತ್ತಾರೆ. ಅವರು ಬಯಸದ ಏನನ್ನಾದರೂ ಮಾಡಲು ನೀವು ಅವರನ್ನು ಒತ್ತಾಯಿಸಿದಾಗ ಅವರು ನಿಮ್ಮನ್ನು ಅಸಮಾಧಾನಗೊಳಿಸುತ್ತಾರೆ. ಇವೆಲ್ಲ ಕ್ಷಣಿಕ ಅಭಿವ್ಯಕ್ತಿಗಳು. ಅದನ್ನು ಅರ್ಥ ಮಾಡಿಕೊಂಡು ಮಕ್ಕಳ ಮೇಲೆ ಪ್ರೀತಿ ತೋರಿ.

- ಮಕ್ಕಳು ಏನಾದರೂ ಸಣ್ಣ ಕೆಲಸ ಮಾಡಿದರೂ ಮೊದಲು ಓಡಿ ಬಂದು ಹೇಳುವುದು ನಿಮಗೇ. ನಿಮ್ಮ ವಯಸ್ಸು ಮತ್ತು ಅನುಭವಕ್ಕೆ ಇದು ಸಾಮಾನ್ಯವೆಂದು ತೋರುತ್ತದೆ. ಆದರೆ ಮಗುವಿಗೆ ಇದು ಒಂದು ದೊಡ್ಡ ಕಾರ್ಯವಾಗಿರುತ್ತದೆ. ಅವರ ಮಟ್ಟಕ್ಕೆ ಇಳಿಯಿರಿ, ಆಶ್ಚರ್ಯಪಡಿರಿ ಮತ್ತು ಆಚರಿಸಿ. ನೀವೇ ಅವರನ್ನು ಹುರಿದುಂಬಿಸಲು ಮೊದಲಿಗರಾಗಿರಿ. ●

ಹೀಗೆ ಹೆಮ್ಮೆ ಪಡುವುದು ಬೇಡ!

ಜೀವನದಲ್ಲಿ ಮೇಲೇರುವಾಗ ವಿನಯ ವಿಧೇಯತೆಗಳು ಇರಬೇಕು. ಅದರಿಂದ ಹೆಮ್ಮೆಯೂ ಮೂಡುತ್ತದೆ. ಈ ಹೆಮ್ಮೆಯೊಳಗೆ ಮುಳುಗಿ ಕೆಲವು ವಿಷಯಗಳನ್ನು ತಪ್ಪಾಗಿ ಮಾತನಾಡಿ ಬಿಡಬಾರದು. ನಾವು ಎಚ್ಚರಿಕೆಯಿಂದ ಗಮನಿಸಿಕೊಳ್ಳಬೇಕಾದ ವಿಷಯಗಳು ಇದೋ ಇಲ್ಲಿ ನಿಮಗಾಗಿ:

- ಯಾರೋ ಒಬ್ಬರು ಏನೋ ಒಂದನ್ನು ಹೇಳಿಕೊಡುವಾಗ, 'ನಮಗೆ ತಿಳಿಯದ ಒಂದನ್ನು ಇವರು ನಮಗೆ ಹೇಳಿಕೊಟ್ಟು ಬಿಡುತ್ತಾರೇನು' ಎಂಬ ನಿರ್ಲಕ್ಷ್ಯ ಧೋರಣೆ ಇರಬಾರದು. ಎಷ್ಟೇ ದೊಡ್ಡ ಮನುಷ್ಯರಾಗಿದ್ದರೂ ಅವರಿಗೂ ತಿಳಿಯದ ಹಲವು ಸಂಗತಿಗಳು ಈ ಜಗತ್ತಿನಲ್ಲಿ ಇದ್ದೇ ಇರುತ್ತವೆ.
- ಯಾವುದಾದರೂ ಒಂದು ಸಹಾಯ ಮಾಡುವಂತೆ ಯಾರಾದರೂ ಕೇಳಿದಾಗ, 'ಹೋಗಿ ಹೋಗಿ ಈ ಕೆಲಸವನ್ನು ನಾನು ಮಾಡಬೇಕೇ?' ಎಂದು ಅದನ್ನು ಕೇವಲವಾಗಿ ಭಾವಿಸಬಾರದು. ಇತರರಿಗೆ ಒಂದು ಸಣ್ಣ ಸಹಾಯ ಮಾಡುವುದಾಗಿದ್ದರೂ ಅದರಲ್ಲಿ ಅತಿ ದೊಡ್ಡ ಹೆಮ್ಮೆಯನ್ನು ಅನುಭವಿಸಬಹುದು.
- ಕೆಲವು ವಿಷಯಗಳನ್ನು ಮುಗಿಸಲು ಸಾಧ್ಯವಿಲ್ಲದೆ ಒದ್ದಾಡುವಾಗ, ನಾವೆಷ್ಟು ದೊಡ್ಡ ಮನುಷ್ಯರು. ನಾನು ಹೋಗಿ ಬೇರೆಯವರ ಬಳಿ ಸಹಾಯ ಕೇಳುವುದೇ?' ಎಂದು ಭಾವಿಸಬಾರದು. ಈ ಹೆಮ್ಮೆ ನಮ್ಮ ಬಲಹೀನತೆಗಳನ್ನು ನಾವು ಅರ್ಥ ಮಾಡಿಕೊಳ್ಳಲು ಸಾಧ್ಯವಾಗದ ಮಟ್ಟಿಗೆ ಮಾಡಿ ಬಿಡುತ್ತದೆ.
- ಒಂದೇ ಒಂದು ಮಾತಿನಲ್ಲಿ ತನ್ನ ಕೆಲಸ, ಹುದ್ದೆ, ಆರ್ಥಿಕ ಸ್ಥಿತಿ ಹೀಗೆ ಎಲ್ಲವನ್ನು ವಿವರಿಸುವ ಮೂಲಕ ಅವರೊಳಗೆ ಬೇಸರ ಮೂಡಿಸಬಾರದು. ಇತರರ ಬಗ್ಗೆ ನಾವು ತಿಳಿದುಕೊಳ್ಳುವ ಅವಕಾಶ ಇದರಿಂದ ತಪ್ಪಿ ಹೋಗಬಹುದು.
- 'ಅವರು ನನಗೆ ತುಂಬಾ ಚೆನ್ನಾಗಿ ಗೊತ್ತು', 'ಅವರು ನಾನು ಹೇಳಿದ ಮಾತನ್ನು ಮೀರುವವರಲ್ಲ' ಎಂಬಂತಹ ಹೆಮ್ಮೆಯ ಮಾತುಗಳನ್ನು ಆಡುವುದು ಬೇಡ. 'ನಾನು ದೊಡ್ಡ ಮನುಷ್ಯ ಎಂದು ತೋರ್ಪಡಿಸಿಕೊಳ್ಳುವುದಕ್ಕಾಗಿ ಹೀಗೆ ಮಾತನಾಡುವುದು ಕೂಡ ಆತ್ಮಪ್ರಶಂಸೆಯೇ ಆಗಿರುತ್ತದೆ! ನಿಮ್ಮ ಅರ್ಹತೆಯ ಕಾರಣದಿಂದ ಮಾತ್ರವೇ ನೀವು ಗೌರವಾರ್ಹರಾಗಿರಬೇಕು.
- ನಮಗಿಂತ ಕೆಳಗಿರುವವರನ್ನು ಕರುಣೆಯಿಂದ ನಡೆಸಿಕೊಳ್ಳಬೇಕು. 'ಅವರಿಗಿಂತ ನಾನು ಉತ್ತಮ ಸ್ಥಾನದಲ್ಲಿದ್ದೇನೆ' ಎಂಬ ಗರ್ವ ನಮ್ಮೊಳಗೆ ಮೂಡಬಾರದು.
- ಯಾರಾದರೂ ಒಬ್ಬರು ಅಕ್ಕರೆಯಿಂದ ನಮಗೆ ಹಿತ ನುಡಿಗಳನ್ನು ಹೇಳುವಾಗ, 'ಅವೆಲ್ಲ ನನಗೆ ಗೊತ್ತು?' ಎಂಬ ಭಾವನೆಯೊಂದಿಗೇ ಅವರೊಂದಿಗೆ ಬೆರೆಯಬಾರದು. ಬದುಕಿನಲ್ಲಿ ಎದುರಾಗುವ ಎಲ್ಲ ಬಗೆಯ ಇಕ್ಕಟ್ಟಾದ ಸ್ಥಿತಿಗಳನ್ನೂ ತೆರೆಯುವ ಕೀಲಿ ಕೈ ನಮ್ಮ ಚಿಂತನೆಗಳೊಳಗೆ ಇರುವುದಿಲ್ಲ.
- ಯಾವಾಗಲೂ ಎಲ್ಲರನ್ನೂ ಏನಾಧರೂ ವಿಮರ್ಶೆ ಮಾಡುತ್ತಲೇ ಇರಬಾರದು. ಅವರು ಮಾಡುವ ಒಳ್ಳೆಯ ವಿಷಯಗಳನ್ನು ಮೆಚ್ಚಿ ಮಾತನಾಡಬೇಕು. ಆಗಲೇ ತಪ್ಪುಗಳನ್ನು ಎತ್ತಿ ಹೇಳುವಾಗಲೂ ಅವರು ಕಿವಿಗೊಟ್ಟು ಕೇಳುತ್ತಾರೆ.
- ನಮ್ಮ ಸಾಮರ್ಥ್ಯ, ದುಡಿಮೆ, ಕೆಲಸ ಇತ್ಯಾದಿಗಳಿಗಾಗಿ ಯಾವಾಗಲೂ ಇತರರು ನಮ್ಮನ್ನು ಹೊಗಳುತ್ತಲೇ ಇರಬೇಕು ಎಂದು ನಿರೀಕ್ಷಿಸಬೇಡಿ. ಅದೇ ರೀತಿಯಾಗಿ ವಿಮರ್ಶೆಗಳನ್ನೂ ವೃಥಾ ನಿರ್ಲಕ್ಷಿಸಬಾರದು. ಅಕ್ಕರೆಯಿಂದ ಹೇಳುವ ಅಭಿಪ್ರಾಯಗಳನ್ನು ಕಿವಿಗೊಟ್ಟು ಕೇಳಬೇಕು.
- ಮನೆ, ಕೆಲಸ, ಉದ್ಯಮ, ವ್ಯಾಪಾರ, ಸಮಾಜ ಹೀಗೆ ಎಲ್ಲಾ ಸ್ಥಳಗಳಲ್ಲೂ ಅನುಸರಿಸುವ ನಿಮಯಗಳು ಮತ್ತು ಕಟ್ಟಳೆಗಳನ್ನು ಗೌರವಿಸಿ ನಡೆದುಕೊಳ್ಳಬೇಕು. 'ನಾನು ಇವುಗಳನ್ನೆಲ್ಲ ಮೀರಿದವನು' ಎಂದು ಅಂದುಕೊಳ್ಳಬಾರದು. ಅದು ನಮಗೆ ಗೌರವವನ್ನು ನೀಡುವುದಿಲ್ಲ. ವಿನಯವೇ ಗೌರವವನ್ನು ತಂದು ಕೊಡುವುದು.

Owned, Published by K.R. NAGARAJAN, Published from 10, Sengunthapuram Mangalam Road, TIRUPUR - 641 604 &
Printed by B. ASHOK KUMAR at RATHNA OFFSET PRINTERS, 40, Peters Road, Royapettah, Chennai - 600 014. Editor : T.J. GNANAVEL



Inners for Winners
RAMRAJ
VESTS
BRIEFS • TRUNKS
Engineered
For the Everyday
Champion,
Everywhere
Shreyas Iyer - Cricketer
SUKRA
SUPER FINE COTTON VESTS
ROMEX
SUPERIOR BANIANS
RISE-UP
PREMIUM BANIANS
ACOSTE
LUXURY INNERWEARS
Breeze
Eye Let Vests
WinStripe
STRIPED BANIANS
ARCHERY
GYM VEST
COMPACT
PREMIUM COTTON RIB VESTS
LITTLE STARS
KIDS INNERWEARS
Available at Ramraj Showrooms and All Leading Textile Shops | Shop Online at www.ramrajcotton.in

Bilupu Monthly - Postal Registration No. TN/TRU/30/2024-26. Registered with the Registrar of Newspapers for India under No. TNKAN/2017/74564. Day of Publishing: 01-05-2025 Posted at Tirupur BPC on 5th of every month.